ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಅಂತರ್ಜಾತಿ ವಿವಾಹ ಮತ್ತು ಜಾತಿ ವಿನಾಶ

ಜುಲೈ 13, 2011 ಪುಟ 20 ರೂ. 14/-



...ುಂಚಿಟಿಗರಿಗೆ ...ಟಿಂಗ್

ಕಳ್ಳನ ಮನಸ್ಸು ಹುಳ್ಳಗೆ



...ಂಡ್ಯ ...ಸ್ಕಾನ್ ...ದೀಮರ ...ೂ ಕೊಳ್ಳೆ

ಕಬ್ಬು ಬೆಳೆಗಾರರನ್ನು ಕ್ರಷ್ ಮಾಡುತ್ತಿರುವ ಬಿಜೆಪಿ

ಯಲಬುರ್ಗ ಗಣಿ ಕಳ್ಳರ ಎಂಟ್ರಿ



ಸೋಮಣ್ಣ ಶಿಷ್ಯರ ಸೈಟು ದಂಧೆ

ಮೈಸೂರು ಖಾಕಿಗಳ ರಿಯಲ್ ಎಸ್ಟೇಟ್ ಬಿಜಿನೆಸ್

ನೋ ಕಾಮೆಂಟ್ಸ್

"ನಾನು ಅನಂತಮೂರ್ತಿಯವರನ್ನು ವೈಯಕ್ತಿಕವಾಗಿ ಟೀಕೆ ಮಾಡಿಲ್ಲ, ಅವರನ್ನು ಎಡಬಿಡಂಗಿ ಎಂದೂ ಮತ್ತು ಅವರನ್ನೇ ವೈಯಕ್ತಿಕವಾಗಿ ಗುರಿ ಮಾಡಿ ಅತ್ಯಂತ ಅಪಾಯಕಾರಿ ವ್ಯಕ್ತಿ ಎಂದೂ ಹೇಳಿಲ್ಲ. ಸುರಕ್ಷಿತ ವಲಯ ಎಂಬುದೊಂದು ಇಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಜಾಗೃತವಾಗಿದೆ. ಇದು ರಾಹು-ಕೇತುಗಳಂತೆ ಸ್ಪಷ್ಟವಾಗಿಲ್ಲವಾದ್ದರಿಂದ ಅದಕ್ಕಿಂತ ಹೆಚ್ಚು ಅಪಾಯಕಾರಿ ಎಂದು ವಿಶ್ಲೇಷಿಸಿದೆ. ಈ ವಲಯದಲ್ಲಿ ಅನಂತಮೂರ್ತಿಯವರು ಇರುವುದೂ ನಿಜ."

- ಬರಗೂರು ರಾಮಚಂದ್ರಪ್ಪ

"ಅಭಿವೃದ್ಧಿ ಹೆಸರಿನಲ್ಲಿ ಜನರ ಬದುಕಿನೊಂದಿಗೆ ಆಟವಾಡಿ ತಮಾಷೆ ನೋಡುತ್ತೀರಿ. ಅವರನ್ನು ಮನೆಯಿಂದ ಹೊರಹಾಕಿ ಪ್ರಗತಿಯ ಮಾತುಗಳನ್ನಾಡುತ್ತೀರಿ. ರೈತರ ತಲೆಗೆ ಗನ್ ಹಿಡಿದು ಜಮೀನು ನೀಡಿ ಇಲ್ಲವೇ ಪ್ರಾಣಕಳೆದುಕೊಳ್ಳಿ ಎಂದು ಪರೋಕ್ಷವಾಗಿ ಬೆದರಿಕೆ ಹಾಕುತ್ತೀರಿ. ಮೇಲ್ನೋಟಕ್ಕೆ ಪರಿಹಾರದ ನೆಪದಲ್ಲಿ ಪುಡಿಗಾಸು ಕೊಟ್ಟು ಕೈತೊಳೆದುಕೊಳ್ಳುತ್ತೀರಿ. ಇಂತಹ ಮೋಸದ ಸರ್ಕಾರದಿಂದ ಜನಸಾಮಾನ್ಯರ ಏಳಿಗೆ ಹೇಗೆ ಸಾಧ್ಯ?"

- ನ್ಯಾ. ಶೈಲೇಂದ್ರಕುಮಾರ್

"ಕೇಶವಶಿಲ್ಪ ಎಂಬ ವಿಧಾನಸೌಧದ ಮೂಲಕ ರಾಜ್ಯದಲ್ಲಿ ವೈದಿಕ ಆಳ್ವಿಕೆಯನ್ನು ಹೇರುವ ಹುನ್ನಾರ ನಡೆದಿದೆ. ಜನತೆ ಇದರ ವಿರುದ್ಧ ಹೋರಾಡಬೇಕು."

- ಡಾ. ಎಂ. ಎಂ. ಕಲಬುರ್ಗಿ

"ಬಿಜೆಪಿಯ ಮುಠಾಳತನ ನನಗೆ ಆಶ್ಚರ್ಯ ಉಂಟುಮಾಡುತ್ತಿದೆ. ಈಗ ಕಪ್ಪು ಹಣ, ಭ್ರಷ್ಟಾಚಾರ, ಲೋಕ್‌ಪಾಲ್‌ನಂಥಾ ಹತ್ತು ಹಲವು ವಿಷಯಗಳಿರುವಾಗ ಈಗಲೂ ಬಿಜೆಪಿ ರಾಮಮಂದಿರದಂಥಾ ಹಳೆಯ ಅಜೆಂಡಾಗಳಿಗೇ ನೇತುಬೀಳುತ್ತಿರುವುದು ಆಶ್ಚರ್ಯಕರ. ಇವರುಗಳು ಎಂದೂ ಕಲಿಯುವುದಿಲ್ಲ. ಇದರಿಂದ ನಿತಿನ್ ಗಡ್ಕರಿ ಕಾಂಗ್ರೆಸ್ ಏಜೆಂಟ್ ಏನೋ ಅನ್ನೋ ಅನುಮಾನ ಬರುವುದು ಮಾತ್ರವಲ್ಲ ಬರುವ ಚುನಾವಣೆಗಳಲ್ಲೂ ಬಿಜೆಪಿ ಎಂದಿಗೂ ಗೆಲ್ಲದಂತೆ ನೋಡಿಕೊಳ್ಳಲು ಮತ್ತು ಬಿಜೆಪಿ ಕಾರ್ಯಕರ್ತರನ್ನು ಮೋಸಗೊಳಿಸಲು ಜಾಲ ಹೆಣೆದಿದ್ದಾರೇನೋ ಎನಿಸುತ್ತದೆ."

- ಅಭಿಷೇಕ್ ಶ್ರೀವಾಸ್ತವ, ತೆಹೆಲ್ಕಾದಲ್ಲಿ

"ಹಿಂತಿರುಗಿ ನೋಡಿದರೆ ಜೆಪಿ ಚಳವಳಿ ಮತ್ತು ಇಂದಿರಾ ಗಾಂಧಿ ಇಬ್ಬರೂ ತಪ್ಪು ಮಾಡಿದರು ಎಂಬುದು ಗೊತ್ತಾಗುತ್ತದೆ. ಜೆಪಿ ಎಷ್ಟೇ ಸದುದ್ದೇಶದಿಂದ ಕೂಡಿದ್ದರೂ ಒಂದು ಸಂವಿಧಾನಬಾಹಿರ ಶಕ್ತಿಗಳಿಂದ ಸರ್ಕಾರ ಬದಲಿಸಲು ಪ್ರಯತ್ನಿಸಿದರು. ಮತ್ತೊಂದು ಕಡೆ ಇಂದಿರಾ ಗಾಂಧಿ ಒಂದೋ ಸಂಪೂರ್ಣ ಶರಣಾಗತಿ ಅಥವಾ ಶತಾಯಗತಾಯ ಕೊನೆಯತನಕ ಹೋರಾಡಲೇಬೇಕಾದ ಆಯ್ಕೆಗಳ ನಡುವೆ ಅಂತಿಮವಾಗಿ ತುರ್ತು ಪರಿಸ್ಥಿತಿಯನ್ನು ಹೇರಿದರು."

- ಬಿಪಿನ್ ಚಂದ್ರ

"ನಮ್ಮ ಕವಿತೆಯನ್ನು ಸಮುದಾಯ, ದೇಶ, ಜಾತಿ, ತತ್ವ ಆಧರಿಸಿ ಬರೆಯಬಹುದು. ಆದರೆ ನಮ್ಮ ಅಂತರಂಗದ ಕವಿತೆ ಬರೆಯುವುದು ಮುಖ್ಯ. ಎಷ್ಟೋ ಮಂದಿ ಇತರರ ನೋವನ್ನು ಬರೆಯಬೇಕೆನ್ನುತ್ತಾರೆ. ಆದರೆ ಆ ರೀತಿ ಮಾಡುವುದು ಸವಾಲಿನ ಕೆಲಸ."

- ಎಚ್. ಎಸ್. ವೆಂಕಟೇಶಮೂರ್ತಿ

ನಂಬಿದ್ರೆನಂಬಿ ಬಿಟ್ರೆಬಿಡಿ


"ಅತ್ತ ಪುತ್ರ ಕುಮಾರಸ್ವಾಮಿ ಧರ್ಮಸ್ಥಳದಲ್ಲಿ ಆಣೆ ಮಾಡಿದರೆ ಇತ್ತ ತಂದೆ ದೇವೇಗೌಡರು ಮುಖ್ಯಮಂತ್ರಿ ವಿರುದ್ಧ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ. ನಿನ್ನೆ ಏಕಾದಶಿ. ಸಹಜವಾಗಿಯೇ ದೇವೇಗೌಡರು ಪೂಜೆ, ಉಪವಾಸ ಮಾಡುತ್ತಾರೆ. ಆದರೆ ಹಾಸನ ಜಿಲ್ಲೆಯನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ಫುಟ್‌ಪಾತ್‌ನಲ್ಲಿ ಕುಳಿತು ಪ್ರತಿಭಟನೆ ಮಾಡಿದ್ದು ಜನರ ಕಣ್ಣಿಗೆ ಮಣ್ಣೆರಚುವ ತಂತ್ರ."

- ಎಚ್.ವಿಶ್ವನಾಥ್

"ವಿಜಾಪುರ ತಾಲ್ಲೂಕಿನ ಸೋಮದೇವಹಟ್ಟಿ ತಾಂಡಾಗೆ ಸರಿಯಾದ ಬಸ್ ಸೇವೆ, ಅಗತ್ಯ ಮೂಲ ಸೌಲಭ್ಯ ಇಲ್ಲದಿದ್ದರೂ ರಾಜ್ಯ ಸರ್ಕಾರ 10 ಲಕ್ಷ ರೂಪಾಯಿ ವೆಚ್ಚದಲ್ಲಿ ಹೆಲಿಪ್ಯಾಡ್ ನಿರ್ಮಿಸಿದೆ. ಸುಮಾರು 200 ಮನೆಯಿರುವ ಈ ತಾಂಡಾದ ಎಲ್ಲರೂ ಬಡವರೇ. ಇಲ್ಲಿರುವ ಮಾತಾ ದುರ್ಗಾದೇವಿ ದೇವಸ್ಥಾನದ ವಾರ್ಷಿಕ ಜಾತ್ರೆಗೆ ಆಗಮಿಸುವ ಗಣ್ಯರ ಅನುಕೂಲಕ್ಕೆ ಸರ್ಕಾರ ಈ ಹೆಲಿಪ್ಯಾಡ್ ನಿರ್ಮಿಸಿದೆ."


- ಪತ್ರಿಕಾ ವರದಿ

ಭೈರಪ್ಪನವರಿಂದ ಎಷ್ಟು ದೂರ ಮತ್ತು ಅನಂತಮೂರ್ತಿಯವರಿಗೆ ಎಷ್ಟು ಹತ್ತಿರ?



ಅನಂತಮೂರ್ತಿಯವರು ಎಸ್.ಎಲ್. ಭೈರಪ್ಪನವರು "ಸಾಹಿತಿಯೇ ಅಲ್ಲ" ಎಂದು ಮತ್ತೊಮ್ಮೆ ಟೀಕೆ ಮಾಡಿದ್ದೇ ನೆಪವಾಗಿ ಅವರ ಮೇಲೆ ಕನ್ನಡಪ್ರಭ ಪತ್ರಿಕೆ ಇಡೀ ಬಲಪಂಥೀಯ ಭೈರಿಗೆ ಭಟ್ಟರ ತಂಡದ ಮೂಲಕ ಹಿಗ್ಗಾಮುಗ್ಗಾ ಜಾಡಿಸುತ್ತಿದೆ. ಕಳೆದ ವಾರ ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ಅನಂತಮೂರ್ತಿಯವರು ಗಿರೀಶ್ ಕಾಸರವಳ್ಳಿಯವರ ಅಭಿನಂದನಾ ಸಮಾರಂಭದಲ್ಲಿ ಮಾಡಿದ ಭಾಷಣದ ಪೂರ್ಣಪಾಠ ಲೇಖನವಾಗಿ ಅಚ್ಚಾಯಿತು. ಅದರಲ್ಲಿ ಮತ್ತೆ ಅನಂತಮೂರ್ತಿಯವರು ಭೈರಪ್ಪನವರು ರಾಹುಗ್ರಸ್ಥ ಲೇಖಕರೆಂದು ಟೀಕಿಸಿದ್ದೂ ಅಚ್ಚಾಗಿದೆ. ಅಷ್ಟು ಮಾತ್ರವಲ್ಲದೆ ಎಡಪಂಥೀಯರು ಕೇತುಗ್ರಸ್ಥರೆಂದೂ ಆ ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ತಾವು ಮಾತ್ರ ಯಾವ ಪಂಥಕ್ಕೂ ಬದ್ಧನಾಗದೆ ಅನಂತಮೂರ್ತಿ ಬೇಜವಾಬ್ದಾರಿತನದಿಂದ ಎಲ್ಲರನ್ನೂ ಹಳಿಯುತ್ತಾರೆ ಎಂದು ಈಗ ಎಡಪಂಥೀಯ ಚಿಂತಕರಾದ ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲರಂತವರೂ ಸಹ ಅನಂತಮೂರ್ತಿಯವರನ್ನು ಸ್ವಲ್ಪ ಸಕಾರಣವಾಗಿಯೇ ಟೀಕಿಸಲು ಪ್ರಾರಂಭಿಸಿದ್ದಾರೆ.

ಮೊನ್ನೆ ಬರಗೂರು ರಾಮಚಂದ್ರಪ್ಪನವರು ತಾವು ಅನಂತಮೂರ್ತಿಯವರನ್ನು ವೈಯಕ್ತಿಕ ನೆಲೆಯಲ್ಲಿ ಟೀಕಿಸಿಲ್ಲವೆಂದೂ, ತಮ್ಮದು ತಾತ್ವಿಕ ಪ್ರತಿರೋಧವೆಂದೂ, "ಸುರಕ್ಷಿತ ವಲಯ ಎಂಬುದೊಂದು ಇಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಜಾಗೃತವಾಗಿದೆ. ಇದು ರಾಹು-ಕೇತುಗಳಂತೆ ಸ್ಪಷ್ಟವಾಗಿಲ್ಲವಾದ್ದರಿಂದ ಅದಕ್ಕಿಂತ ಹೆಚ್ಚು ಅಪಾಯಕಾರಿ ಎಂದು ವಿಶ್ಲೇಷಿಸಿದೆ. ಈ ವಲಯದಲ್ಲಿ ಅನಂತಮೂರ್ತಿಯವರು ಇರುವುದೂ ನಿಜ" ಎಂದೂ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಚಂಪಾರವರೂ ಸಹ ವಿಜಯ ಕರ್ನಾಟಕದಲ್ಲಿನ ತಮ್ಮ ಅಂಕಣದಲ್ಲಿ ಅನಂತಮೂರ್ತಿಯವರ ಬಗ್ಗೆ ಕೆಲವು ಸಕಾರಣ ಟೀಕೆಗಳನ್ನೇ ಮಾಡಿ ಅಂತಿಮವಾಗಿ "ಅವರು ಮನುವಾದಿಗಳೇ ಆದರೂ ಮೂಲಭೂತವಾದಿಗಳಲ್ಲ" ಎಂಬ ತೀರ್ಮಾನಕ್ಕೆ ತಲುಪಿದ್ದಾರೆ.



ಭೈರಪ್ಪನವರ ಭಜ(ನೆ)ರಂಗದಳವು ಅನಂತಮೂರ್ತಿಯವರ ಮೇಲೆ ಮಾಡುತ್ತಿರುವ ಟೀಕೆಯ ಸತ್ಯಾಸತ್ಯತೆ ಮತ್ತು ವಿಶ್ಲೇಷಣೆಗೆ ಹೋಗುವ ಅಗತ್ಯವೇ ಇಲ್ಲ. ಕನ್ನಡಪ್ರಭದಲ್ಲಿ ಬೆತ್ತಲೆ ಸಿಂಹನ ನಗ್ನ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ರಂಗದಲ್ಲಿ ಈವರೆಗೆ ಅಂಚಿನಲ್ಲಿದ್ದ ಎಲ್ಲಾ ಅತೃಪ್ತ ಆರೆಸ್ಸೆಸ್ ಆತ್ಮಗಳು ಸಹ ಈಗ ಭೈರಪ್ಪನವರ ಬೆದರುಬೊಂಬೆಯನ್ನು ಮುಂದಿಟ್ಟುಕೊಂಡು ಗಲ್ಲಿ ಜಗಳಕ್ಕಿಳಿದಿದ್ದಾರೆ.

ಅನಂತಮೂರ್ತಿಯವರನ್ನು ಮಾತ್ರವಲ್ಲದೆ ಮನುಕುಲದ ಸಾಹಿತ್ಯ ಮತ್ತು ಸಾಮಾಜಿಕ ಸಂವೇದನೆಗೆ ಹೊಸ ಆಯಾಮವನ್ನು ತಂದುಕೊಟ್ಟ ಕಾಮೂ, ಕಾಫ್ಕಾ, ಸಾತ್ರೆ, ಮಾರ್ಕ್ಸ್‌ರನ್ನೂ ಕನ್ನಡ ಸಾಹಿತ್ಯ ಲೋಕದ ಹೆಮ್ಮೆಯನ್ನು ವಿಸ್ತರಿಸಿದ ಕಿರಂ, ಶ್ರೀನಿವಾಸರಾಜು, ಇನ್ನಿತರರ ಪ್ರತಿಮೆಗಳಿಗೂ ಈ ಗಲ್ಲಿ ಜಗಳದಲ್ಲಿ ಕಲ್ಲು ತೂರುತ್ತಿದ್ದಾರೆ. ಅವರ ಎಲ್ಲಾ ವಿಮರ್ಶೆಗಳ ಸಾರಾಂಶ ಭೈರಪ್ಪನವರು ಮತ್ತು ಅವರು ಪ್ರತಿಪಾದಿಸುತ್ತಿರುವ ಉಗ್ರ ಹಿಂದೂತ್ವವಾದಿ ಫ್ಯಾಸಿಸ್ಟ್ ಚಿಂತನೆಗಳಿಗೆ ಮಾನ್ಯತೆ ತಂದುಕೊಡುವ ಅಜೆಂಡಾದಿಂದಲೇ ಪ್ರೇರೇಪಿತವಾಗಿವೆ. ಹಾಗೆಯೇ ಅವುಗಳಲ್ಲಿ ಯಾವುದೇ ನೈಜ ಸಾಹಿತ್ಯಿಕ ಅಥವಾ ಜನಪರ ಸಾಮಾಜಿಕ ಚಿಂತನೆಗಳು ಇಲ್ಲದೇ ಇರುವುದರಿಂದ ಭೈರಪ್ಪನವರ ಭಜನಾ ಮಂಡಳಿ ಅನಂತಮೂರ್ತಿಯವರ ಮೇಲೆ ಮಾಡುತ್ತಿರುವ ಟೀಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಆದರೆ ಅವರ ಪ್ರತಿಗಾಮಿತನ ಮತ್ತು ಸಾಹಿತ್ಯದ ಮುಸುಕಿನಲ್ಲಿರುವ ಜೀವವಿರೋಧಿ ಅಜೆಂಡಾಗಳನ್ನು ಜನರೆದುರು ಬಯಲುಗೊಳಿಸುವ ಅಗತ್ಯವಿದೆ.

ಆದರೆ ಬರಗೂರು, ಚಂಪಾ ಮಾತ್ರವಲ್ಲದೆ ಇತರ ಎಡಪಂಥೀಯರು, ಸಮಾಜವಾದಿಗಳು, ಪ್ರಗತಿಪರರು ಅನಂತಮೂರ್ತಿಗಳವರ ಸಾಹಿತ್ಯ ಮತ್ತು ಸಾಮಾಜಿಕ ಪಾತ್ರದ ಬಗ್ಗೆ ಎತ್ತುತ್ತಿರುವ ಆಕ್ಷೇಪಣೆಗಳು ಗಂಭೀರ ಸ್ವರೂಪದ್ದು. ಕೆಲವೊಮ್ಮೆ ಅನಂತಮೂರ್ತಿಗಳ ಬಗೆಗಿನ ಅವರ ಆಕ್ಷೇಪಣೆಗಳು ಒಪ್ಪಿಕೊಳ್ಳಲಾಗದ ಅತಿರೇಕವನ್ನು ಮುಟ್ಟುವುದು ನಿಜ. ಕೆಲವೊಮ್ಮೆ ಅನಂತಮೂರ್ತಿಯವರನ್ನು ಸಾರಾಸಗಟಾಗಿ ಡಿಸ್‌ಮಿಸ್ ಮಾಡುವ ಧ್ವನಿಯನ್ನೂ ಸಹ ಈ ಆಕ್ಷೇಪಣೆಗಳು ಹೊಂದಿದ್ದರೂ ಪ್ರಗತಿಪರರು ಅನಂತಮೂರ್ತಿಯವರ ಸಾಹಿತ್ಯ ಮತ್ತು ಸಾಮಾಜಿಕ ಪಾತ್ರದ ಬಗ್ಗೆ ಮಾಡುತ್ತಿರುವ ಟೀಕೆಗಳಲ್ಲಿ ಸಾಕಷ್ಟು ಹುರುಳಿದೆ. ಅದರಲ್ಲೂ ವಿಶೇಷವಾಗಿ ಪ್ರಭುತ್ವದ ಬಗ್ಗೆ ಅನಂತಮೂರ್ತಿಯವರ ನಿಲುವು ಹಲವಾರು ಬಾರಿ ಪ್ರಶ್ನಾರ್ಹವೇ ಆಗಿದೆ.

ಹಾಗೆಯೇ ಅವರ ಸಾಹಿತ್ಯ ದರ್ಶನದಲ್ಲಿ ಮತ್ತು ರಾಜಕೀಯ ದರ್ಶನದಲ್ಲಿ ಆಗಿರುವ ಪಲ್ಲಟಗಳು ವಿಶೇಷವಾಗಿ ತೀಕ್ಷ್ಣ ಪ್ರತಿಕ್ರಿಯೆಗಳಿಗೆ ಅರ್ಹವಾಗಿಯೇ ಇವೆ. ಹಾಗೆಯೇ ಜನಹೋರಾಟಗಳಿಗಿಂತ ಗಣ್ಯರ ರಾಜತಾಂತ್ರಿಕ ಮಧ್ಯಪ್ರವೇಶದಿಂದಲೇ ಬದಲಾವಣೆ ಸಾಧ್ಯವಾಯಿತೆಂದು ಭಾವಿಸುವ ಅವರ ತಿಳಿವಳಿಕೆ ಅವರು ಎಷ್ಟರಮಟ್ಟಿಗೆ ಪ್ರಜಾಪ್ರಭುತ್ವವಾದಿಗಳೆಂಬುದನ್ನೂ ಪ್ರಶ್ನೆಗೊಳಪಡಿಸಿರುವುದು ಉಂಟು. ಖಾಸಗಿ ಜೀವನದಲ್ಲಿ ಯಾವುದೇ ಸರ್ಕಾರ ಕೊಟ್ಟ ಯಾವುದನ್ನೂ ನಿರಾಕರಿಸಿದ ಉದಾಹರಣೆಯೇ ಇಲ್ಲವೆನ್ನುವಷ್ಟು ಕಡಿಮೆ ಇರುವುದರಿಂದ ಅನಂತಮೂರ್ತಿಗಳ ತಾತ್ವಿಕ ವಿರೋಧವನ್ನು ಹಲವು ಬಾರಿ ಅನುಮಾನಿಸುವಂತಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಆತ್ಮವಿಮರ್ಶೆಯೇ ಇಲ್ಲದ ಅವರ ಸೈದ್ಧಾಂತಿಕ ಮತ್ತು ರಾಜಕೀಯ ಚಿಂತನೆಗಳು ಮತ್ತು ಇತರ ಪ್ರಗತಿಪರ ಧಾರೆಗಳು ಮತ್ತು

ಶಿವಸುಂದರ್



ಚಾರ್ವಾಕ

ವ್ಯಕ್ತಿಗಳ ಬಗೆಗೆ ಬೇಜವಾಬ್ದಾರಿಯುತ ಬಿಡುಬೀಸಾದ ಪೂರ್ವಗ್ರಹಪೀಡಿತವಾದ ಹೇಳಿಕೆ ಮತ್ತು ಪ್ರತಿಪಾದನೆಗಳು ಉದ್ದಕ್ಕೂ ಅನಂತಮೂರ್ತಿಯವರನ್ನು ಸಂಪೂರ್ಣವಾಗಿ ಜನರ ಮನುಷ್ಯ ಎಂದು ಮುಕ್ತಕಂಠದಿಂದ ಹೇಳಲು ಕಷ್ಟವೆನಿಸುವಂತೆ ಮಾಡಿದೆ.

ಇದು ಅನಂತಮೂರ್ತಿಯವರ ಜೊತೆ ಪ್ರಗತಿಪರರು ನಿತ್ಯನಿರಂತರ ನಡೆಸಲೇ ಬೇಕಾದ ಸಂಘರ್ಷ. ಹಾಗೆ ನೋಡಿದರೆ ಪ್ರಭುತ್ವ ಮತ್ತು ಜನ ಚಳವಳಿಗಳ ನಡುವೆ, ಹೋರಾಟ ಮತ್ತು ಶರಣಾಗತಿಯ ನಡುವೆ, ಸಂಪ್ರದಾಯ ಮತ್ತು ಆಧುನಿಕತೆಯ ನಡುವೆ, ಯಥಾಸ್ಥಿತಿ ಮತ್ತು ಬದಲಾವಣೆಗಳ ನಡುವೆ ಸದಾ ಒಂದು ಬಗೆಯ ಅಪಾಯಕಾರಿ ಅನುಸಂಧಾನಕ್ಕೆ ರೂಪಕದಂತಿರುವ ಅನಂತಮೂರ್ತಿಗಳು ಇದೀಗ ಒಂದು ವ್ಯಕ್ತಿಯಾಗಿಯಲ್ಲ ಒಂದು ವಿದ್ಯಮಾನವೇ ಆಗಿಬಿಟ್ಟಿದ್ದಾರೆ. ಇದು ಕೇವಲ ಅವರಿಗೆ ಮಾತ್ರವಲ್ಲದೆ ಅವರನ್ನು ಇತರ ವಿಷಯಗಳ ಮತ್ತು ಜಾತಿಮೂಲವಿಟ್ಟುಕೊಂಡು ಟೀಕಿಸುವ ಹಲವರಲ್ಲೂ ವ್ಯಾಪಕವಾಗಿ ಹರಡಿಕೊಳ್ಳುತ್ತಿದೆ. ಜಾಗತೀಕರಣ ಮಾಯಾಮೋಹಿನಿ ಶತ್ರುವನ್ನೂ ಸ್ನೇಹಿತನಂತೆ ಬಿಂಬಿಸುತ್ತಿರುವ ಈ ಹೊತ್ತಿನಲ್ಲಿ, ನಮ್ಮೊಳಗಿನ ಮತ್ತು ನಮ್ಮ ಹೊರಗಿನ ಶತ್ರುವಿನ ನಿಜವಾದ ಚಹರೆಯನ್ನು ಗುರುತಿಸಿ ಅದರೊಡನೆ ರಾಜಿರಹಿತ ಸಂಘರ್ಷಕ್ಕಿಳಿಯ ಬೇಕಾದ ಈ ಸಂದರ್ಭದಲ್ಲಿ ಅನಂತಮೂರ್ತಿಗಳ ರೂಪಕದಲ್ಲಿರುವ ಈ ವಿದ್ಯಮಾನದ ವಿರುದ್ಧ ಸಾಮಾಜಿಕ ಬದಲಾವಣೆಗೆ ಬದ್ಧರಾಗಿರುವ ಎಲ್ಲರೂ ನಿರಂತರ ಸಂಘರ್ಷ ಇಟ್ಟುಕೊಳ್ಳದಿದ್ದರೆ ಇಂದು ಚಳವಳಿಗಳು ಪುನರುಜ್ಜೀವನ ಗೊಳ್ಳುವುದಿಲ್ಲ. ಹೀಗಾಗಿ ಅನಂತಮೂರ್ತಿಗಳ ವಿರುದ್ಧ ಸಕಾರಣವಾದ ಟೀಕೆ ಅಪೇಕ್ಷಣೀಯ. ಅವರ ಚಿಂತನೆಯ ಬಗ್ಗೆ ಇನ್ನಷ್ಟು ಆಳವಾದ ಅಧ್ಯಯನ ಪೂರ್ಣ ವಿಮರ್ಶೆ ಸ್ವಾಗತಾರ್ಹ. ಇದನ್ನು ಮಾಡಲು ಎಲ್ಲಾ ಅರ್ಹತೆ ಮತ್ತು ಅಗತ್ಯ ಇರುವುದು ಸಾಮಾಜಿಕ ಬದಲಾವಣೆಗೆ ನಿಷ್ಠರಾದ ಪ್ರಗತಿಪರರಿಗೇ ವಿನಃ ಪ್ರತಿಗಾಮಿ ಬಲಪಂಥೀಯರಿಗಲ್ಲ.

ಆದರೆ ದುರದೃಷ್ಟವಶಾತ್ ಕನ್ನಡದ ಸಾಂಸ್ಕೃತಿಕ ಸಂದರ್ಭದಲ್ಲಿ ಈ ಬಗೆಯ ಸ್ವಾಗತಾರ್ಹ ಮತ್ತು ಅಪೇಕ್ಷಣೀಯ ಮಾದರಿಯಲ್ಲಿ ಯಾವ ಚರ್ಚೆಗಳೂ ನಡೆಯುವುದಿಲ್ಲ. ಅವು ವೈಯಕ್ತಿಕ ನಿಂದನೆಯಲ್ಲಿಯೂ ದೂಷಣೆಯಲ್ಲಿಯೂ, ಗುಂಪುಗಾರಿಕೆಯಲ್ಲಿಯೂ ಪರ್ಯಾವಸಾನಗೊಳ್ಳುವುದೇ ಹೆಚ್ಚು. ಹೀಗಾಗಿ ವಿಮರ್ಶೆಗಳು ಮತ್ತು ವಾಗ್ವಾದಗಳು ಒಮ್ಮೊಮ್ಮೆ ಅತಿರೇಕಕ್ಕೆ ಮುಟ್ಟಿ ವಾಗ್ವಾದದ ಉದ್ದೇಶವೇ ಮರೆಯಾಗಿ ಪ್ರತಿಗಾಮಿಗಳ ಪ್ರಯೋಜನಕ್ಕೆ ಈಡಾಗುವುದುಂಟು. ಅದರಲ್ಲೂ ಪ್ರಗತಿಪರರ ನಡುವಿನ ವಾದಗಳು ಈ ರೀತಿಯ ವ್ಯರ್ಥ ಮತ್ತು ಅಪಾಯಕಾರಿ ಅಂತ್ಯವನ್ನು ಕಂಡಿರುವುದೇ ಹೆಚ್ಚು. ಅನಂತಮೂರ್ತಿಯವರ ಪ್ರಕರಣದಲ್ಲೂ ಹಲವು ಬಾರಿ ಇದೇ ಅತಿರೇಕಗಳು ಪದೆಪದೇ ಸಂಭವಿಸುತ್ತವೆ.



ಅನಂತಮೂರ್ತಿಗಳ ಚಿಂತನೆಗಳು ತುಂಬಾ ಅಪಾಯಕಾರಿ ನಿಜ. ಆದರೆ ಅವು ಫ್ಯಾಸಿಸ್ಟ್ ಚಿಂತನೆಗಳಲ್ಲ. ಅವರು ಭೈರಪ್ಪ ಅಲ್ಲ. ಚಿದಾನಂದಮೂರ್ತಿ ಅಲ್ಲ. ಹಾಗಾಗಿದ್ದರೆ ಬಲಪಂಥೀಯರು ಭೈರಪ್ಪನವರನ್ನು ಬಿಟ್ಟು ಅನಂತಮೂರ್ತಿಯವರನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅನಂತಮೂರ್ತಿಯವರು ಸೆಕ್ಯುಲಾರಿಸಂ ಬಗ್ಗೆ ಮಾಡುವ ವ್ಯಾಖ್ಯಾನ ಸಮಸ್ಯಾತ್ಮಕವಾದರೂ ಹಿಂದೂತ್ವವಾದಿ ಫ್ಯಾಸಿಸಂ ಬಗ್ಗೆ ಅವರು ಬಹಿರಂಗವಾಗಿ ತೋರಿದ-ತೋರುತ್ತಿರುವ ತಾತ್ವಿಕ ವಿರೋಧವೇ ಬಲಪಂಥೀಯರಿಗೆ ಕಣ್ಣುರಿಯಾಗಿದೆ. ಆದರೆ ಅದರ ವಿರೋಧಕ್ಕೆ ಅವರು ನಮ್ಮ ಪರಂಪರೆಯನ್ನು ನೆಲೆಯಾಗಿಸಿ ಮಾಡಬೇಕೆನ್ನುವ ಪ್ರತಿರೋಧ ಅವರನ್ನು ಒಮ್ಮೊಮ್ಮೆ ಬಲಪಂಥೀಯರ ಸೈದ್ಧಾಂತಿಕ ಸಹಪ್ರಯಾಣಿಕ ನನ್ನಾಗಿಸಿಬಿಡುತ್ತದೆ ಎಂಬ ಎಚ್ಚರವನ್ನು ಖಂಡಿತಾ ಇಟ್ಟುಕೊಳ್ಳಬೇಕು. ಆದರೂ ಅವರ ಆಶಯ ಭೈರಪ್ಪ ಅಥವಾ ಚಿದಾನಂದಮೂರ್ತಿಗಳ ತರ ಶ್ರೇಣೀಕೃತ ಹಿಂದೂ ಫ್ಯಾಸಿಸ್ಟ್ ಸಮಾಜವಲ್ಲ ಎಂಬುದು ಕೂಡಾ ನಿಜ. ಅವರು ಸೂಚಿಸುವ ಹಲವು ಮಾರ್ಗಗಳು ಪರೋಕ್ಷವಾಗಿ ಅಂಥ ಶ್ರೇಣೀಕೃತ ಸಮಾಜವನ್ನೇ ಹುಟ್ಟುಹಾಕುತ್ತದೆ ಎಂಬುದು ನಾವು ಅನಂತಮೂರ್ತಿ ಪ್ರಣೀತ ಚಿಂತನೆಯೊಡನೆ ಮಾಡಬೇಕಾದ ಸಂಘರ್ಷ.

ಹೀಗಾಗಿ ಇಂದು ಅನಂತಮೂರ್ತಿಯವರೊಡನೆ ಸಂಘರ್ಷವನ್ನಿಟ್ಟುಕೊಂಡೇ ನಾವು ಅನಂತಮೂರ್ತಿಗೆ ಹತ್ತಿರವಾಗಬಹುದೇ ವಿನಃ ಭೈರಪ್ಪನವರಿಗಲ್ಲ ಎಂಬ ಎಚ್ಚರವನ್ನಿಟ್ಟುಕೊಳ್ಳಬೇಕಾದದ್ದು ಅತ್ಯಗತ್ಯ. ಬರಗೂರರ ಸ್ಪಷ್ಟೀಕರಣ ಮತ್ತು ಚಂಪಾರವ ಕಾಲಂನ ಕೊನೆ ಸಾಲಿನಲ್ಲೂ ಈ ಎಚ್ಚರದ ಛಾಯೆ ಇತ್ತೆ?

ಶೈಕ್ಷಣಿಕ ದಂಧೆಯ ನಡುವಲ್ಲೊಬ್ಬ ನಿಸ್ವಾರ್ಥಿ ಗುರು ಖಾನ್!




• ಗೌರಿ ಲಂಕೇಶ್
editorlankesh@gmail.com

ಆತನ ಹೆಸರು ಸಲ್ಮಾನ್ ಖಾನ್. ಇಲ್ಲ, ಈತ ಬಾಲಿವುಡ್ ನಟನಲ್ಲ. ಬದಲಾಗಿ ಖ್ಯಾತ ಉದ್ಯಮಿ ಬಿಲ್ ಗೇಟ್ಸ್‌ಗೆ ಮಾತ್ರವಲ್ಲದೆ ಆತನ ಮಕ್ಕಳಿಗೂ ತನ್ನ 'ಶಾಲೆ'ಯಲ್ಲಿ ಪ್ರತಿನಿತ್ಯ 'ಪಾಠ' ಹೇಳಿಕೊಡುತ್ತಿರುವ 'ಶಿಕ್ಷಕ'!

ಅದಕ್ಕಿಂತ ಮುಖ್ಯವಾಗಿ ಈ ಸಲ್ಮಾನ್ ಖಾನ್ ನಡೆಸುತ್ತಿರುವ 'ಶಾಲೆ'ಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆಲ್ಲ ಪ್ರತಿನಿತ್ಯ ನೂರಾರು ಪಾಠಗಳನ್ನು ಬೋಧಿಸಲಾಗುತ್ತಿದೆ. ಆದರೂ ಈ ಶಾಲೆಯಲ್ಲಿ ಒಬ್ಬನೇ ಒಬ್ಬ ಅಧ್ಯಾಪಕನಿದ್ದಾನೆ. ಆತನೇ ಈ ಸಲ್ಮಾನ್ ಖಾನ್!

ಅಚ್ಚರಿ ಎನಿಸುತ್ತಿದೆಯೆ? ಬನ್ನಿ ಸಲ್ಮಾನ್ ಖಾನ್ ನಡೆಸುತ್ತಿರುವ 'ವರ್ಚ್ಯುಅಲ್' ಶಾಲೆಗೆ.

ಇಂಟರ್‌ನೆಟ್‌ನಲ್ಲಿ 'khanacademy.org' ಎಂಬ ವೆಬ್‌ಸೈಟಿದೆ. ಇದರಲ್ಲಿ ಹೆಚ್ಚಾಗಿ ಗಣಿತ ಕುರಿತಂತೆ ಮಾಹಿತಿ ಇದೆಯಾದರೂ ಅವುಗಳೊಂದಿಗೆ ವಿಜ್ಞಾನ, ಬ್ಯಾಂಕಿಂಗ್, ಜೀವವಿಜ್ಞಾನ, ರಸಾಯನ ವಿಜ್ಞಾನ, ಕ್ಯಾಲ್ಕುಲಸ್, ಇತಿಹಾಸ, ಭೌತವಿಜ್ಞಾನ, ಅರ್ಥಶಾಸ್ತ್ರ, ಮೆಂಟಲ್ ಎಬಿಲಿಟಿ, ಖಗೋಳ ವಿಜ್ಞಾನ, ಅರ್ಥಶಾಸ್ತ್ರ ಇತ್ಯಾದಿಗಳನ್ನು ಕುರಿತ ಮಾಹಿತಿ-ಪ್ರಶ್ನೋತ್ತರ, ಪಾಠಗಳೂ ಇವೆ. ಪುಟ್ಟಮಕ್ಕಳಿಗೆ ಕೂಡು ಕಳೆಯುವುದರಿಂದ ಹಿಡಿದು, ಇಂಜಿನಿಯರಿಂಗ್ ಪದವಿ ಸೇರಲು ತೆಗೆದುಕೊಳ್ಳುವ ಪರೀಕ್ಷೆಯಲ್ಲಿ ಬರುವ ಪ್ರಶ್ನೋತ್ತರಗಳೂ ಇವೆ. ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದಿಂದ ಹಿಡಿದು ಪರಿಸರ ರಕ್ಷಣೆ ಕುರಿತ ಮಾಹಿತಿಯೂ ಇವೆ.



ಅದು ಯಾವುದೇ ವಿಷಯವಾಗಲಿ, ಅದನ್ನು ಅದೆಷ್ಟು ಸರಳವಾಗಿ ವಿವರಿಸುವ, ನೆನಪಿನಲ್ಲಿ ಉಳಿಯುವಂತೆ ಹೇಳುವ ಈ ಪಾಠಗಳ ಸೃಷ್ಟಿಕರ್ತನೇ ಈ ಸಲ್ಮಾನ್ ಖಾನ್. ಈತನ ವೆಬ್‌ಸೈಟ್ ಅದೆಷ್ಟು ಪರಿಣಾಮಕಾರಿ ಆಗಿದೆ ಎಂದರೆ ಈ 'ಶಾಲೆ'ಯಲ್ಲಿ ಓದಿದ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆಯುತ್ತಿದ್ದಾರೆ. ಇಷ್ಟೇ ಅಲ್ಲ, ಅಮೆರಿಕದಲ್ಲಿರುವ ಹಲವಾರು ಶಾಲೆಗಳು ಖಾನ್‌ನ ವೆಬ್‌ಸೈಟನ್ನು ಬಳಸಿಕೊಂಡು ತಮ್ಮ ವಿದ್ಯಾರ್ಥಿಗಳಿಗೆ ಈಗ ಪಾಠ ಮಾಡಲಾರಂಭಿಸಿದ್ದಾವೆ.

ಯಾರು ಈ ಸಲ್ಮಾನ್ ಖಾನ್? ಆತ ನಡೆಸುತ್ತಿರುವ ಶಾಲೆ ಎಂತಹದ್ದು?

ಈ ಸಲ್ಮಾನ್ ಖಾನ್‌ನ ತಾಯಿ ಭಾರತದ ಕೊಲ್ಕತ್ತಾದವರು. ತಂದೆ ಬಾಂಗ್ಲಾದೇಶದವರು. ಅಮೆರಿಕದಲ್ಲಿ ಜನಸಿದ ಸಲ್ಮಾನ್ ಖಾನ್ ಅಲ್ಲೇ ವಿದ್ಯಾಭ್ಯಾಸ ಮಾಡಿ ದೊಡ್ಡ ಬ್ಯಾಂಕ್ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಅದು ಅಂತಿಂತಹ ಕೆಲಸವಲ್ಲ. ಜನರ ಅತಿ ಆಶೆಯನ್ನೇ ಬಂಡವಾಳ ಮಾಡಿಕೊಂಡು ಅವರು ವಿವಿಧ ಕಂಪನಿಗಳ ಶೇರುಗಳಲ್ಲಿ ಹಣ ಹೂಡುವಂತೆ ಮಾಡುವ ಕೆಲಸ. ಅದಕ್ಕೆಂದು ಖಾನ್‌ಗೆ ಕೈತುಂಬ ಸಂಬಳ ಬರುತ್ತಿತ್ತು.

ಆರು ವರ್ಷಗಳ ಹಿಂದೆ ಒಮ್ಮೆ ಏನಾಯಿತೆಂದರೆ, ಖಾನ್‌ನ ಚಿಕ್ಕಮ್ಮನ ಮಗಳಾದ ನಾಡಿಯಾ ಶಾಲೆಯಲ್ಲಿ ಗಣಿತದಲ್ಲಿ ಬೇರೆ ವಿದ್ಯಾರ್ಥಿಗಳಿಗಿಂತ ಹಿಂದೆ ಬಿದ್ದಿದ್ದಾಳೆ ಎಂದು ಖಾನ್‌ಗೆ ಗೊತ್ತಾಯಿತು. ಆದರೆ ಆಗ ಖಾನ್ ಅಮೆರಿಕದ ಪೂರ್ವ ಕಡಲತೀರದಲ್ಲಿರುವ ಕ್ಯಾಲಿಫೋರ್ನಿಯಾದಲ್ಲಿ ವಾಸಿಸುತ್ತಿದ್ದರೆ ನಾಡಿಯಾ ಪಶ್ಚಿಮ ಕಡಲತೀರದಲ್ಲಿರುವ ಮತ್ತೊಂದು ನಗರದಲ್ಲಿ ವಾಸಿಸುತ್ತಿದ್ದಳು. ಆದರೂ ಆಕೆಗೆ ಪ್ರತಿದಿನ ಫೋನ್ ಮೂಲಕವೇ ಗಣಿತದಲ್ಲಿ ಪಾಠ ಹೇಳಿಕೊಡಲು ಖಾನ್ ಪ್ರಾರಂಭಿಸಿದ. ಆದರೆ ಸ್ವಲ್ಪ ದಿನಗಳಲ್ಲೇ ಇದು ಕಷ್ಟಕರವಾಗಲಾರಂಭಿಸಿತು. ಎರಡೂ ನಗರಗಳ ನಡುವೆ ನಾಲ್ಕು ಗಂಟೆಗಳ ವ್ಯತ್ಯಾಸ ಇತ್ತಲ್ಲದೆ, ಈತನ ಕೆಲಸದ ಸಮಯ ನಾಡಿಯಾಳ ಶಾಲೆಯ ಸಮಯ, ಇತ್ಯಾದಿಗಳು ನಿತ್ಯದ ಪಾಠಕ್ಕೆ ಅಡ್ಡಬರಲಾರಂಭಿಸಿದವು.

ಆಗ ಖಾನ್‌ಗೆ ಹೊಳೆದದ್ದೇ ಈ ವೀಡಿಯೊ ಪಾಠಕ್ರಮ. ನಾಡಿಯಾ ಎದುರಿಸುತ್ತಿದ್ದ ಗಣಿತದ ಸಮಸ್ಯೆಗೆ ಹೇಗೆ ಉತ್ತರವನ್ನು ಕಂಡುಹಿಡಿಯಬೇಕೆಂಬುದನ್ನು ಕುರಿತು ಖಾನ್ ಪುಟ್ಟ ವೀಡಿಯೋಗಳನ್ನು ತಯಾರಿಸಿ ಅವುಗಳನ್ನು 'ಯೂಟ್ಯೂಬ್' ಎಂಬ ವೆಬ್‌ಸೈಟಿನಲ್ಲಿ ಹಾಕಲಾರಂಭಿಸಿದ. ಆದರಿಂದಾಗಿ ನಾಡಿಯಾ ಯಾವಾಗ ಬೇಕಾದರೂ ಅವುಗಳನ್ನು ನೋಡಬಹುದಿತ್ತು ಮತ್ತು ಅಗತ್ಯವಿದ್ದರೆ ಹಳೆ ಪಾಠಗಳಿಗೂ ಮತ್ತೆ ಭೇಟಿ ನೀಡಬಹುದಿತ್ತು. ಇದರಿಂದಾಗಿ ನಾಡಿಯಾಳಿಗೆ ಎಷ್ಟು ಉಪಯೋಗವಾಯಿತೆಂದರೆ ಆಕೆ ಗಣಿತದಲ್ಲಿ ಉತ್ತಮ ಅಂಕಗಳನ್ನು ಪಡೆದಳು.

ನಾಡಿಯಾಳ ನಂತರ ಆಕೆಯ ಸಹೋದರರಾದ ಆರ್ಮನ್ ಮತ್ತು ಅಲಿಗೂ ಖಾನ್ ಇದೇ ರೀತಿ ಪಾಠ ಮಾಡಲಾರಂಭಿಸಿದ. ಆದರೆ ಅಷ್ಟು ಹೊತ್ತಿಗೆ ಖಾನ್‌ನ ಇತರೆ ಸಂಬಂಧಿಕರ ಮಕ್ಕಳು ಮತ್ತು ಆ ಮಕ್ಕಳ ಸ್ನೇಹಿತರೂ ಈ ಪಾಠಗಳನ್ನು ನೋಡಿ ಕಲಿಯಲಾರಂಭಿಸಿದ್ದರು. ಇದಕ್ಕೆಲ್ಲ ಖಾನ್ ಬಳಸಿದ್ದು ತನ್ನ ಕಂಪ್ಯೂಟರ್ ಮತ್ತು ಅದಕ್ಕೆ ಅಳವಡಿಸಿದ್ದ **200** ಡಾಲರ್‌ಗಳ ಕ್ಯಾಮೆರಾ, **80** ಡಾಲರ್‌ಗಳ ಪ್ಯಾಡ್ ಮತ್ತು **20** ಡಾಲರ್‌ಗಳ ವೀಡಿಯೋ ರೆಕಾರ್ಡರ್ ಹಾಗೂ ಪುಕ್ಕಟೆ ಸಿಗುವ ಹಲವು ಸಾಫ್ಟ್‌ವೇರ್‌ಗಳನ್ನು.

ಇದು ಹೆಚ್ಚು ಜನಪ್ರಿಯತೆ ಪಡೆಯುತ್ತಿದ್ದಂತೆ ಖಾನ್ ತನ್ನದೇ ಒಂದು ವೆಬ್‌ಸೈಟ್ ಶುರು ಮಾಡಿ ಅವುಗಳನ್ನೆಲ್ಲ ಅದರಲ್ಲಿ ಸೇರಿಸಲಾರಂಭಿಸಿದ. ಕಾಲಕ್ರಮೇಣ ಇದು ಎಷ್ಟು ದೊಡ್ಡದಾಯಿತು ಎಂದರೆ ಇದರಲ್ಲಿ ಪಾಠಗಳನ್ನು ಹೇಳಿಕೊಡುವುದಕ್ಕೆ ಆತನಿಗೆ ದಿನದ ಇಪ್ಪತ್ತನಾಲ್ಕು ಗಂಟೆಗಳು ಸಾಲದಾಯಿತು. ಆಗ ಖಾನ್ ಯೋಚಿಸಿದ: "ನನಗೆ ಒಬ್ಬಳು ಸುಂದರ ಹೆಂಡತಿ ಇದಾಳೆ, ಇಬ್ಬರು ಮುದ್ದಿನ ಮಕ್ಕಳಿದ್ದಾರೆ, ವಾಸಿಸಲು ಒಂದು ಮನೆ ಇದೆ, ಎರಡು ಕಾರ್‌ಗಳಿವೆ, ಸಾಕಷ್ಟು ಉಳಿತಾಯವಿದೆ. ಇದಕ್ಕಿಂತ ಒಬ್ಬ ಮನುಷ್ಯನಿಗೆ ಜೀವನದಲ್ಲಿ ಇನ್ನೇನು ಬೇಕು? ನನಗೆ **80** ವರ್ಷ ವಯಸ್ಸಾದಾಗ ನನ್ನ ಹತ್ತಿರ ಎಷ್ಟು ದುಡ್ಡಿದೆ ಎಂಬುದಕ್ಕಿಂತ ನಾನು ಸಮಾಜಕ್ಕಾಗಿ ಏನನ್ನು ಮಾಡಿದೆ ಎಂಬುದು ಮುಖ್ಯವಾಗುತ್ತದೆ. ಈ ನನ್ನ ಪಾಠಗಳಿಂದ ಜನರಿಗೆ ಉಪಯೋಗವಾದರೆ ಅದಕ್ಕಿಂತ ಉತ್ತಮವಾದದ್ದೇನಿದೆ? ಬದುಕಿನಲ್ಲಿ ನೆಮ್ಮದಿ ಮತ್ತು ಸಂತೋಷ ಎಲ್ಲದಕ್ಕಿಂತ ಮುಖ್ಯ" ಎಂದು ಖಾನ್ ನಿರ್ಧರಿಸಿದ.

ಆಗ ಖಾನ್ ವರ್ಷಕ್ಕೆ ಮಿಲಿಯನ್‌ಗಟ್ಟಲೆ ಡಾಲರ್ ಸಂಬಳ ನೀಡುತ್ತಿದ್ದ ಬ್ಯಾಂಕ್ ಕೆಲಸಕ್ಕೆ ರಾಜೀನಾಮೆ ನೀಡಿ 'ಖಾನ್ ಅಕಾಡೆಮಿ'ಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ. ಈತ ತನ್ನ ಪಾಠಗಳಿಗೆ ಶುಲ್ಕವನ್ನು ವಿಧಿಸದೆ ಬಿಟ್ಟಿಯಾಗಿ ಹೇಳಿಕೊಡುತ್ತಿದ್ದರಿಂದ ನಿಧಾನವಾಗಿ ಆತನ ಉಳಿತಾಯದ ಹಣವೆಲ್ಲ ಕರಗಲಾರಂಭಿಸಿತು.

ಆದರೂ ಈತನ ಅಕಾಡೆಮಿಯ ಜನಪ್ರಿಯತೆಯನ್ನು ಕಂಡು ಅದೆಷ್ಟೋ ಉದ್ಯಮಿಗಳು ಅದನ್ನು ಆತನಿಂದ ಖರೀದಿಸಲು ಮುಂದಾದರು. ಆದರೆ ಅದನ್ನು ಕೊಂಡವರು ತನ್ನಂತೆ ಪುಕ್ಕಟೆಯಾಗಿ ಪಾಠ ಹೇಳಿಕೊಡುವುದಿಲ್ಲ ಎಂದು ಗೊತ್ತಿದ್ದರಿಂದ ಖಾನ್ ಅದನ್ನು ಮಾರಲು ನಿರಾಕರಿಸಿದ್ದ.

ಅದೃಷ್ಟವಶಾತ್ ಅದೇಹೊತ್ತಿಗೆ ಈ ಖಾನ್ ಅಕಾಡೆಮಿ ಬಗ್ಗೆ ಬಿಲ್ ಗೇಟ್ಸ್‌ನ ಮಕ್ಕಳಿಗೂ ಗೊತ್ತಾಗಿ ಅವರೂ ಇಲ್ಲಿದ್ದ ಮಾಹಿತಿಯನ್ನು ಆಧರಿಸಿ ಕಲಿಯಲಾರಂಭಿಸಿದ್ದರು. ಒಮ್ಮೆ ಇದರ ಬಗ್ಗೆ ತಮ್ಮ ತಂದೆಗೂ ಹೇಳಿದರು. ಆತ ಕೂಡ ಇದನ್ನು ನೋಡಿ ಮೆಚ್ಚಿಕೊಂಡ. ಎಷ್ಟರಮಟ್ಟಿಗೆ ಅಂದರೆ ಖಾನ್ ಅಕಾಡೆಮಿಗೆ ಬಿಲ್ ಗೇಟ್ಸ್ ಫೌಂಡೇಷನ್‌ನಿಂದ ದೊಡ್ಡಮೊತ್ತದ ದೇಣಿಗೆಯನ್ನು ನೀಡಿದ. ಬಿಲ್ ಗೇಟ್ಸ್ ಅಲ್ಲದೆ ಗೂಗಲ್ ಸಂಸ್ಥೆಯವರೂ ಖಾನ್ ಅಕಾಡೆಮಿಯ ಸಾಧನೆಯನ್ನು ಮೆಚ್ಚಿ ಅದಕ್ಕೆ ದೊಡ್ಡ ಮೊತ್ತದ ಪ್ರಶಸ್ತಿಯನ್ನು ನೀಡಿದರಲ್ಲದೆ ಅವರೂ ದೇಣಿಗೆಯನ್ನು ನೀಡಿದರು. ಇವತ್ತು ಅದೆಷ್ಟೋ ಅಭಿಮಾನಿಗಳು ತಮ್ಮ ಶಕ್ತ್ಯಾನುಸಾರ ಖಾನ್‌ನ ಈ ವಿದ್ಯಾಸಂಸ್ಥೆಗೆ ಹಣ ಸಹಾಯವನ್ನು ಮಾಡುತ್ತಿದ್ದಾರೆ.

ಇವತ್ತು ಖಾನ್ ಅಕಾಡೆಮಿ ವೆಬ್‌ಸೈಟಿನಲ್ಲಿ **2,000**ಕ್ಕೂ ಹೆಚ್ಚು ವೀಡಿಯೋ ಪಾಠಗಳು ಲಭ್ಯವಿದೆ. ಖಾನ್‌ನ ಕನಸು ಇದನ್ನು ಇನ್ನಷ್ಟು ಬೆಳೆಸಿ ಜಗತ್ತಿನಲ್ಲೇ ಅತಿ ಜನಪ್ರಿಯ ಪುಕ್ಕಟೆ ಶಾಲೆಯನ್ನಾಗಿಸುವುದು.

ಇದರ ಬಗ್ಗೆ ಇಷ್ಟೆಲ್ಲ ಹೇಳಿದ್ದಕ್ಕೆ ಕಾರಣವಿದೆ. ನಮ್ಮ ಪತ್ರಿಕೆಯ ಓದುಗರಲ್ಲಿ ಬಹಳಷ್ಟು ಜನ ಶಾಲಾ ಅಧ್ಯಾಪಕರಿದ್ದಾರೆ. ಅವರೆಲ್ಲರೂ ಸಲ್ಮಾನ್ ಖಾನ್ ಅವರ **'khanadademy.org'** ಎಂಬ ವೆಬ್‌ಸೈಟಿಗೆ ಭೇಟಿ ನೀಡಿದರೆ ನಮ್ಮ ರಾಜ್ಯದ ಶಾಲಾಮಕ್ಕಳಿಗೆ ಇವತ್ತು ಕಷ್ಟದ ಸಬ್ಜೆಕ್ಟ್ ಆಗಿರುವ ಗಣಿತವನ್ನು ಇನ್ನೂ ಚೆನ್ನಾಗಿ ಹೇಳಿಕೊಟ್ಟು ಅವರೆಲ್ಲ ಪರೀಕ್ಷೆಗಳಲ್ಲಿ ಇನ್ನೂ ಹೆಚ್ಚು ಯಶಸ್ವಿಯಾಗುವಂತೆ ಮಾಡಬಹುದಾಗಿದೆ. ಓರ್ವ ಗುರುವಿನ ಕರ್ತವ್ಯ ಅದೇ ಅಲ್ಲವೇ?




ಎಲ್ಲರ ಗಮನಕ್ಕೆ

ನಮ್ಮ ಪತ್ರಿಕೆಯ ಮತ್ತು ನಮ್ಮ ಸಿಬ್ಬಂದಿಯ ಹೆಸರು ಹೇಳಿಕೊಂಡು ಕೆಲವು ದುಷ್ಟರು ರಾಜಕಾರಣಿಗಳಿಂದ ಮತ್ತು ಅಧಿಕಾರಿಗಳಿಂದ ಹಣ ವಸೂಲಿ ಮಾಡಲು ಪ್ರಯತ್ನಿಸುತ್ತಿದ್ದಾರೆಂಬ ಸುದ್ದಿ ನಮ್ಮ ಗಮನಕ್ಕೆ ಬಂದಿದೆ.

ಪತ್ರಿಕೆಯ ಹೆಸರನ್ನು ಹೇಳಿಕೊಂಡು ಯಾರೇ ಇಂತಹ ಕೃತ್ಯ ಎಸಗಲು ಬಂದರೆ ಅವರನ್ನು ಕೂಡಲೇ ಪೊಲೀಸರಿಗೆ ಒಪ್ಪಿಸಬೇಕೆಂದು ಎಲ್ಲರಲ್ಲಿ ವಿನಂತಿ.


-ಸಂ



ದಕ್ಷಿಣ ಕನ್ನಡ

ಕಲ್ಲಡ್ಕದ ಶನಿ ಕಾಟವೂ ಗೋಣಿನಾಗನ ಗಲಾಟೆಯೂ

ದಕ್ಷಿಣ ಕನ್ನಡದ ಬಿಜೆಪಿಯೊಳಗಿನ ಡಾನ್-ಡಾಕೂಗಳ ನಡುವೆ ಸಣ್ಣದೊಂದು ಸಂಘರ್ಷ ಶುರುವಿಟ್ಟುಕೊಂಡಿದೆ! ಪುಂಡ-ಪೋಕರಿಗಳ ಹಣೆಗೊಂದು ಕುಂಕುಮದ ಬಟ್ಟಟ್ಟು-ಕೈಗೊಂದು ತಲವಾರು ಕೊಟ್ಟು ಧರ್ಮಕಾರಣದ ಅಖಾಡಕ್ಕಿಳಿಸಿದ್ದ ಸಂಘ ಪರಿವಾರದ ಸರದಾರರಿಗೆ ಅದೇ ಈಗ ತಿರುಗುಬಾಣವಾಗಿಬಿಟ್ಟಿದೆ. ಅಧಿಕಾರದ ರುಚಿ ಹತ್ತಿದ ಈ ಹರಾಮಿ 'ಹಿಂದೂ'ಗಳೀಗ ಸ್ವಲ್ಪ ಹೆಚ್ಚು-ಕಮ್ಮಿಯಾದರೂ ಸಾಕು, ರಿಂಗ್‌ಮಾಸ್ಟರ್ ಕಲ್ಲಡ್ಕ ಪ್ರಭಾಕರ ಭಟ್ಟನೆಂಬ ಚೆಡ್ಡಿಗೇ ತಿರುಗಿಬೀಳುತ್ತಿದ್ದಾರೆ.



ಗೋವಿಂದ ಪ್ರಭು

ಈ ಆರೆಸ್ಸೆಸ್ ಸರದಾರ ಕಲ್ಲಡ್ಕ ಭಟ್ಟ ಪಕ್ಕಾ ಶೂದ್ರ ವಿರೋಧಿ. ತನ್ನ ಮತಾಂಧ ರಾಜಕಾರಣಕ್ಕೆ ಹಣವಂತ ಅಥವಾ ಜನ ಬಳಕೆಯ ಕ್ರಿಯಾಶೀಲ ಶೂದ್ರರ ಬಳಸಿಕೊಂಡು ಬಿಸಾಕುವುದಾತನ ಹಿಡನ್ ಅಜೆಂಡಾ. ಪುತ್ತೂರಿನ ಜನಪರ ಶಾಸಕಿಯಾಗಿದ್ದ ಶಕುಂತಲಾ ಶೆಟ್ಟಿಗೆ ಶನಿಯಂತೆ ಸತಾಯಿಸಿದ್ದ ಭಟ್ಟ ಕೊನೆಗೆ ಆಕೆಯನ್ನು ಬಿಜೆಪಿಯಿಂದ ಒದ್ದು ಹೊರ ಹಾಕಿದ್ದೇಕೆಂಬುದು ಈಗ ಇಡೀ ಕರಾವಳಿಗೇ ಗೊತ್ತು, ಆಕೆ ಭಟ್ಟ ಹೇಳಿದಂತೆ ಮತಾಂಧ ರಾಜಕಾರಣವೇನೋ ಮಾಡಿಕೊಂಡಿದ್ದಳು. ಆದರೆ ಆತ ಕೇಳುಕೇಳಿದಾಗೆಲ್ಲ ಲಕ್ಷಗಟ್ಟಲೆ ಕಾಸು ಮಾತ್ರ ಶಕು ಅಕ್ಕಳಿಂದ ಕೊಡಲಾಗಲಿಲ್ಲ, ಇದು ಭಟ್ಟನ ಬ್ರಾಹ್ಮಣಿಕೆಯನ್ನು ಕೆರಳಿಸಿಬಿಟ್ಟಿತ್ತು.

ಇದಕ್ಕೂ ಹಿಂದೆ ಈ ಕಲ್ಲಡ್ಕ ಭಟ್ಟ ಉಡುಪಿ ಸಂಸದನಾಗಿದ್ದ ಐ.ಎಂ. ಜಯರಾಮ ಶೆಟ್ಟಿ ಎಂಬ ಕಳಪೆ ಗೊಬ್ಬರ-ಕ್ರಿಮಿನಾಶಕ ದಂಧೆಕೋರನನ್ನು ಸುಲಿದು ಬೀದಿಗೆ ಎಸೆದಿದ್ದ. ಆಗ ಭಟ್ಟನಿಗೆ ವಿ.ಎಸ್. ಆಚಾರ್ಯ-ಎ.ಜಿ. ಕೊಡ್ಗಿ ಎಂಬ ಉಡುಪಿ ಮಟ್ಟದ ವಿಪ್ರೋತ್ತಮರು ಸಾತ್ ನೀಡಿದ್ದರು. ಈ ಜಯರಾಮ ಶೆಟ್ಟಿ ತನ್ನ ಗೊಬ್ಬರದ ಕಳ್ಳ ದಂಧೆಯಲ್ಲಿ ಕೂಡಿಸಿದ್ದ ಕಾಸು ಕೊಟ್ಟು-ಕೊಟ್ಟು ಸುಸ್ತಾಗಿ ಬಿಜೆಪಿ ಬಿಟ್ಟು ಓಡಿಹೋಗಿದ್ದ. ಬಿಜೆಪಿಯಿಂದ ಒಮ್ಮೆ ಬೈಂದೂರಿನ ಎಂಎಲ್‌ಎ, ಇನ್ನೊಮ್ಮೆ ಉಡುಪಿ ಸಂಸದರಾಗಿದ್ದ ಐಎಂಜೆಗೆ ಅಧಿಕಾರದ ರುಚಿ ಹತ್ತಿಸಿ ದಿವಾಳಿ

ಗೋಣಿ ನಾಗ 2004 ರಲ್ಲಿ ಬಂಟ್ವಾಳಿಗರ ದೌರ್ಭಾಗ್ಯದಿಂದಾಗಿ ಶಾಸಕನೂ ಆಗಿಹೋದ. ಶಿಪ್ಪಿಂಗ್ ಉದ್ಯಮದಲ್ಲಿ ಕೂಡಿಸಿದ ಕೊಪ್ಪರಿಗೆ ಕಪ್ಪು ಕಾಸು ನೀರಂತೆ ಹರಿಸಿ ಈತ ಗೆದ್ದಿದ್ದ. ಕುಮಾರ್-ಯಡ್ಡಿಯ 'ಕೋಜಾ' ಸರ್ಕಾರದಲ್ಲಿ ಮಂತ್ರಿಯಾಗುವ ಭಾಗ್ಯವೂ ನಾಗನಿಗೆ ಬಂದಿತ್ತು. ಆಗ ನಾಗ ಮಂತ್ರಿಯಾಗಿದ್ದು ಆರೆಸ್ಸೆಸ್ ಸುಪ್ರೀಮೋ ಕಲ್ಲಡ್ಕ ಭಟ್ಟರ ಕೃಪೆಯಿಂದಲ್ಲ, ಕುಮಾರಸ್ವಾಮಿ ಜತೆಗಿದ್ದ 'ವ್ಯವಹಾರಿಕ ಸಂಬಂಧ' ಬಳಸಿಕೊಂಡು ನಾಗ ಸ್ವಯಂ ಶಕ್ತಿಯಿಂದ ಮಂತ್ರಿಯಾಗಿದ್ದ. ಅಷ್ಟೇ ಅಲ್ಲ, 'ಕೋಜಾ' ಸರ್ಕಾರ ರಚನೆ ಹೊತ್ತಲ್ಲಿ ಜೆಡಿಎಸ್-ಬಿಜೆಪಿ ನಡುವೆ ದಲ್ಲಾಳಿಗಿರಿಯೂ ನಾಗ ನಿಭಾಯಿಸಿದ್ದ. ಆಗಲೇ ಕಲ್ಲಡ್ಕ ಭಟ್ಟರ ಕಣ್ಣುಕೆಂಪಾಗಿತ್ತು, ಆದರೆ ಅಸಮಾಧಾನ ತೋರಿಸಿಕೊಳ್ಳದೆ ನಾಗನ ಮಂತ್ರಿಗಿರಿ 'ಪ್ರಯೋಜನ' ಸಂಘಪರಿವಾರಕ್ಕೆ ದಕ್ಕುವಂತೆ ಪುರೋಹಿತಶಾಹಿ ತಂತ್ರಗಾರಿಕೆ ಆತ ಮಾಡಿದ್ದ. ಕುಮಾರಸ್ವಾಮಿಯ ಬೇನಾಮಿ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯ ಮ್ಯಾಂಗನೀಸ್ ಅದಿರು ವಿದೇಶಕ್ಕೆ ತನ್ನ ಗಣೇಶ್ ಶಿಪ್ಪಿಂಗ್ ಮೂಲಕ ಕಳಿಸುತ್ತಿದ್ದ ನಾಗ ಆ ಸ್ನೇಹ ಬಲದಿಂದ ಮಂತ್ರಿಯಾಗಿದ್ದರೂ ಅದರ ಲಾಭವಾಗಿದ್ದು ಮಾತ್ರ ಕರಾವಳಿಯ ಚೆಡ್ಡಿ ಕಂಪನಿ ಮಾಲೀಕ್ ಕಲ್ಲಡ್ಕ ಭಟ್ಟನಿಗೆ!

ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಗೋಣಿ ನಾಗ ಸೋತ. ಆತ ಗೆಲ್ಲದಂತೆ ಮಾಡಿದ್ದು ಕಲ್ಲಡ್ಕ ಭಟ್ಟನ ಬ್ರಾಹ್ಮಣ ಗ್ಯಾಂಗ್. ಈ ಮುಂಗೋಪಿ ಬಂಟರ ಶೂದ್ರ ಗೆದ್ದು ಮಂತ್ರಿಯಾಗುವುದು ಭಟ್ರಿಗೆ ಬೇಡವಾಗಿತ್ತು, ಶಕುಂತಲಾ ಶೆಟ್ಟಿಯಂತೆ ಈ ನಾಗರಾಜ ಶೆಟ್ಟಿಯೂ ಒಂದಲ್ಲ ಒಂದು ದಿನ ತನಗೆ ಮಗ್ಗಲು ಮುಳ್ಳಾಗುತ್ತಾನೆಂದು ದೂ(ರು)ರಾಲೋಚನೆ ಶೂದ್ರ ಶತ್ರು ಭಟ್ಟನದಾಗಿತ್ತು, ಆರೆಸ್ಸೆಸ್‌ನ ಬ್ರಾಹ್ಮಣಶಾಹಿಗಳ ಈ ಕುತಂತ್ರವೆಲ್ಲ ಕಿವಿಗೆ ಹೆಂಗಸರಂತೆ ಬೆಂಡೋಲೆ ಹಾಕಿಕೊಂಡು ತಿರುಗಿದ ಭಂಡ ಗಂಡು ನಾಗನಿಗೆ ಗೊತ್ತಾಗಿದ್ದು ಸೋತು ಮಂಗಳೂರಿನ ತನ್ನ ಅರಮನೆಯ ಮೂಲೆ ಸೇರಿದಾಗಲೇ!

ಎಬ್ಬಿಸಿದ ಕೀರ್ತಿ ಈ ಬ್ರಾಹ್ಮಣ ತ್ರಿಮೂರ್ತಿಗಳದು.

ಈಗ ಕಲ್ಲಡ್ಕ ಭಟ್ಟನ ಕೆಂಗಣ್ಣು ಮಾಜಿ ಮಂತ್ರಿ-ಅದಿರು ರಫ್ತುದಾರ ನಾಗರಾಜ್ ಶೆಟ್ಟಿ ಮೇಲೆ ಬಿದ್ದಿದೆ! ಮಂಗಳೂರು ಬಂದರಿನಲ್ಲಿ 'ಗಣೇಶ್ ಶಿಪ್ಪಿಂಗ್' ಹೆಸರಲ್ಲಿ ರಫ್ತು ವ್ಯವಹಾರ ಭರ್ಜರಿಯಾಗೇ ನಡೆಸಿಕೊಂಡಿದ್ದ ನಾಗನ ಗಂಟು ನೋಡಿಯೇ ಆತನ ಸಖ್ಯಾ ಭಟ್ಟ ಬೆಳೆಸಿದ್ದ. ಒಂಥರಾ ಪಾಳೆಗಾರಿ ಮನಃಸ್ಥಿತಿಯ ನಾಗನನ್ನು ಮೊದಲು 'ಕ್ಯಾಂಪ್ಕೋ' ಎಂಬ ಕೋಟ್ಯಂತರ ರೂಪಾಯಿ ಅಡಿಕೆ ವ್ಯವಹಾರದ ಸಂಸ್ಥೆಗೆ ಸಂಘಪರಿವಾರದ ಹಿಕಮತ್ತುದಾರರು ಅಧ್ಯಕ್ಷನಾಗಿ ಮಾಡಿದ್ದರು.

ನಾಗ 'ಕ್ಯಾಂಪ್ಕೋ' ಗದ್ದುಗೆಯಲ್ಲಿದ್ದಾಗ ಕಲ್ಲಡ್ಕ ಭಟ್ಟನ ನಿರ್ದೇಶನದಂತೆ ಮಾಡದ ಭಾನ್ಗಡಿಯೇ ಇಲ್ಲ, ಸಂಸ್ಥೆಯ ಅಡಿಕೆಯನ್ನು ತನ್ನ ಗಣೇಶ್ ಶಿಪ್ಪಿಂಗ್ ಮೂಲಕ ಪಾಕಿಸ್ತಾನಕ್ಕೆ ಕಳಿಸಿ ಹಗರಣ ಮಾಡಿಕೊಂಡಿದ್ದ, ಅಡಿಕೆ ಮೂಟೆ ಕಟ್ಟಲು ಗೋಣಿಚೀಲ ಖರೀದಿಸುವಾಗಲೂ ಅವ್ಯವಹಾರ ಮಾಡಿಕೊಂಡಿದ್ದ. ಆಗಲೇ ಬೈಲುಮೇಗಿನ ಮನೆ ಗುತ್ತಿನ ಗತ್ತಿನ ನಾಗರಾಜ್ ಶೆಟ್ಟಿಗೆ 'ಗೋಣಿ ನಾಗ' ಎಂಬ ಬಿರುದು ಬಂದಿದ್ದು!! ನಾಗನ ಈ ದೌರ್ಬಲ್ಯ ಹಿಡಿದು ಆಡಿಸಿದ ಕಲ್ಲಡ್ಕ ಭಟ್ಟ ಬೇಳೆ ಬೇಯಿಸಿಕೊಂಡ; ಆತನಿಗೆ ಬಂಟ್ವಾಳದ ಬಿಜೆಪಿ ಎಂಎಲ್‌ಎ ಟಿಕೆಟ್ ಕೊಡುವ ಆಸೆ ಹುಟ್ಟಿಸಿ ಚೆಡ್ಡಿ ಸಂಘಟನೆಗೆ, ಹಿಂದೂ ಸಮಾಜೋತ್ಸವಕ್ಕೆ, ಮತಾಂಧ ಆಟಕ್ಕೆಲ್ಲ ಕಾಸು ಪೀಕಿಸಿದ.

ಹದಿನೆಂಟು ತಿಂಗಳು ಕ್ಯಾಬಿನೆಟ್ ಮಂತ್ರಿಯಾಗಿ ದಕ್ಷಿಣ ಕನ್ನಡದಲ್ಲಿ ದರ್ಬಾರು ನಡೆಸಿದ್ದ ನಾಗ ಶಾಸಕಗಿರಿಯೂ ಇಲ್ಲದೆ ಕಂಗಾಲಾಗಿ ಹೋದ. ಮಂತ್ರಿಯಾಗಿದ್ದಾಗ ಕಲ್ಲಡ್ಕ ಭಟ್ಟನ ಸೇವೆ ಮಾಡಿದರೂ ಆತ ಕೈಕೊಟ್ಟಿದ್ದ. ಸಂದರ್ಭ ಸಿಕ್ಕಾಗಲೇ ಮಾಜಿ ಮಂತ್ರಿ ನಾಗನನ್ನು ಹಣಿಯಲು ಚೆಡ್ಡಿಬಳಗ ಹತ್ತಿತ್ತು!! ಕೋಜಾ ಸರ್ಕಾರ ಸ್ಥಾಪನೆ ಹೊತ್ತಲ್ಲಿ ಕುಮಾರಸ್ವಾಮಿ ಸಂಗಡ ತನ್ನ ಏಜೆಂಟಿಕೆ ಮಾಡಿದ್ದಕ್ಕೆ ನಾಗನನ್ನು ಸಿಎಂ ಯಡ್ಡಿ ಹತ್ತಿರ ಇಟ್ಟುಕೊಳ್ಳುವ ಸಾಧ್ಯತೆಯಿತ್ತು, ಈ ಅವಕಾಶಕ್ಕೂ ಸಂಘ ಪರಿವಾರ ಕಲ್ಲು ಹಾಕಿತ್ತು. ಸೋತ ತನ್ನ ನಿಷ್ಠಾವಂತ ಅನುಯಾಯಿಗಳಿಗೆಲ್ಲ ಪುನರ್ವಸತಿ ಕಲ್ಪಿಸಿದ್ದ ಯಡ್ಡಿ ನಾಗನನ್ನು ಮಾತ್ರ ನಿರಾಶ್ರಿತನಾಗಿಸಿ ಬಿಟ್ಟಿದ್ದರು.


ಆಗ ಹತಾಶನಾದ ನಾಗ ಬೇರೆ ದಾರಿಯಿಲ್ಲದೆ ಯಡ್ಡಿ ಎದುರಷ್ಟೇ ಅಲ್ಲ, ಜಿಲ್ಲಾ ಬಿಜೆಪಿಯಲ್ಲೂ ಅತ್ತೂ ಕರೆದೂ ರಂಪ ಎಬ್ಬಿಸಿಬಿಟ್ಟಿದ್ದ. ಯಾವುದಾದರೂ ನಿಗಮ-ಮಂಡಳಿಗೆ ತನ್ನನ್ನು ಅಧ್ಯಕ್ಷನನ್ನಾಗಿ ಮಾಡಲೇಬೇಕೆಂದು ಹಠ ಹಿಡಿದಿದ್ದ. ಈ ಪೀಡೆ ನಿಯಂತ್ರಿಸಲು ಯಡ್ಡಿ-ಚೆಡ್ಡಿಗಳೆಲ್ಲ ಸೇರಿ ಕೆಲಸಕ್ಕೆ ಬಾರದ ಬೋಗಸ್ 'ಕರಾವಳಿ ಅಭಿವೃದ್ಧಿ ಪ್ರಾಧಿಕಾರ' ಎಂಬ ಗೂಟದ ಕಾರಿನ ಏಜೆನ್ಸಿಯೊಂದನ್ನು ಹುಟ್ಟುಹಾಕಿದರು. ಕರಾವಳಿ ಉದ್ಧಾರಕ್ಕೆ ಬೇಕಾದ ಸಂಪನ್ಮೂಲ-ಅಧಿಕಾರ ಯಾವುದೂ ಈ ಪ್ರಾಧಿಕಾರಕ್ಕೆ ಇರಲಿಲ್ಲ, ಗೋಣಿ ನಾಗನಿಗೆ ಕೆಂಪು ದೀಪದ ಕಾರಷ್ಟೇ ದಕ್ಕಿತ್ತು, ಯಾವ ಅಧಿಕಾರಿ ಇರಲಿ ಚಪ್ರಾಸಿಯೂ ನಾಗನಿಗೆ ಕ್ಯಾರೇ ಅನ್ನುತ್ತಿರಲಿಲ್ಲ, ಯಡ್ಡಿ ಸರ್ಕಾರದ ಚೆಡ್ಡಿ ಸೂತ್ರಧಾರರಲ್ಲಿ ಒಬ್ಬನಾಗಿರುವ ಕಲ್ಲಡ್ಕ ಭಟ್ಟನ 'ಫತ್ವಾ'ನೇ ಹಾಗಿತ್ತು! ನಾಗನಿಗೆ ಬಿಜೆಪಿ ಪಾರ್ಟಿಯಲ್ಲಾಗಲಿ; ಆಡಳಿತದಲ್ಲಾಗಲಿ ಮೂರು ಬಿಲ್ಲಿ ಕಿಮ್ಮತ್ತಿರಲಿಲ್ಲ!!



ಪ್ರಭಾಕರ ಭಟ್ಟ

ಜಿಲ್ಲಾ ಮಂತ್ರಿ ಪಾಲೇಮಾರ್ ಅಂತೂ ನಾಗನ ತಲೆ ಕಂಡರೆ ಮುಖ ಸಿಂಡ್ರಿಸಿಕೊಂಡು ಓಡುತ್ತಾರೆ. ನಾಗನ ಜೊತೆ ಮಾತಾಡಿದರೆ ದೇವ ಪಿತ್ರ ಕಲ್ಲಡ್ಕ ಭಟ್ಟರ ಅವಕೃಪೆಗೆ ತುತ್ತಾಗಬೇಕಾದೀತೆಂಬ ಭಯ ಪಾಲೇಮಾರ್‌ಗೆ. ಮಂತ್ರಿಗೆ ಬೇಡದವನ ಮಾತು ಅಧಿಕಾರಿಗಳು ಕೇಳುತ್ತಾರಾ! ಜಿಲ್ಲಾ ಬಿಜೆಪಿಯಲ್ಲೂ ಅಷ್ಟೇ. ಗೋಣಿ ನಾಗನನ್ನು ಮೂಸಿ ನೋಡುವವರ್‍ಯಾರೂ ಪಾರ್ಟಿಯಲ್ಲಿರಲಿಲ್ಲ, ಒಟ್ಟಿನಲ್ಲಿ ನಾಗ ಬಿಜೆಪಿಯಲ್ಲಿ ಉಸಿರುಗಟ್ಟಿದಂತಾಗಿ ವಿಲಿವಿಲಿ ಒದ್ದಾಡತೊಡಗಿದ್ದ. ತನಗೆ ತನ್ನ ಹಿಂಬಾಲಕರಿಗೆ ಪಾರ್ಟಿಯಲ್ಲಾಗುತ್ತಿರುವ ಅಸಮಾಧಾನ-ಅವಗಣನೆಯಿಂದ ನಾಗ ಬಿಜೆಪಿಗೇ ಗುಡ್‌ಬೈ ಹೇಳುವಷ್ಟು ಕನಲಿ ಕೆಂಡಾಮಂಡಲವಾಗಿದ್ದ. ಆದರೆ ಅಧಿಕಾರಸ್ಥ ಪಾರ್ಟಿ-ಗೂಟದ ಕಾರು ಬಿಡುವ ಧೈರ್ಯ ಪೂರ್ತಿ ನಾಗನಿಗಿರಲಿಲ್ಲ.

ಮೊನ್ನೆ ತವರು ಕ್ಷೇತ್ರ ಬಂಟ್ವಾಳದಲ್ಲಾದ ಗೋವಿಂದ ಪ್ರಭು ಗೂಂಡಾಗಿರಿ ಪ್ರಕರಣ ನಾಗನನ್ನು ಬಿಜೆಪಿ ಬಿಡುವಂತೆ ಪ್ರೇರೇಪಿಸಿಬಿಟ್ಟಿದೆ! ಕಲ್ಲಡ್ಕ ಭಟ್ಟರ ಗ್ಯಾಂಗ್, ಮಂತ್ರಿ ಪಾಲೇಮಾರ್, ಜಿಲ್ಲಾಧ್ಯಕ್ಷ ಪದ್ಮನಾಭ ಕೊಟ್ಟಾರಿ ವಗೈರೆಗಳ ಕಿತಾಪತಿಯಿಂದ . ಹತಾಶರಾಗಿ ಹೋಗಿದ್ದ, ಗೋಣಿ ನಾಗನಿಗೆ ಆತ್ಮೀಯ ಚೇಲ ಗೋವಿಂದ ಪ್ರಭು ಪ್ರಕರಣ ಆಸ್ಫೋಟಕ್ಕೆ ನೆಪವಾಗಿದೆ. ಆಗಿದ್ದು ಪಕ್ಕಾ ರೌಡಿಗಿರಿ ರಗಳೆ. ಬಂಟ್ವಾಳದ ಪಟ್ಟಣ ಪಂಚಾಯತ್, ಬುಡಾ (ಬಂಟ್ವಾಳ ನಗರಾಭಿವೃದ್ಧಿ ಪ್ರಾಧಿಕಾರ)ದಲ್ಲಿ ವಿದ್ಯುತ್ ಕಾಮಗಾರಿ ಮಾಡುವ ಕಂಟ್ರಾಕ್ಟರ್ ಜಗದೀಶ್ ಪೂಜಾರಿ ಮತ್ತು ಗೋಣಿ ನಾಗನಿಗೆ ಅದ್ಯಾವುದೋ ಬಿಲ್ ಸಂಬಂಧ ಶರಾಪುರ ಜಗಳವಾಗಿದೆ. ಬಿಜೆಪಿ ಮತ್ತು ಸರ್ಕಾರದಲ್ಲಿ ನೆಲೆ-ಬೆಲೆಯಿಲ್ಲದ ನಾಗನಿಗೆ ಸೊಪ್ಪು ಹಾಕದೆ ಗುತ್ತಿಗೆದಾರ ಪೂಜಾರಿ ಮಾತಾಡಿದ್ದಾನೆ. ಇದರಿಂದ ಕೆರಳಿದ ನಾಗನ ರೌಡಿ ಶಿಷ್ಯ ಬುಡಾ ಅಧ್ಯಕ್ಷ ಗೋವಿಂದ ಪ್ರಭು ನೇರ ಪೂಜಾರಿ ಮನೆಗೇ ನುಗ್ಗಿ ಜೀವ ಬೆದರಿಕೆ ಹಾಕಿದ್ದಾನೆ.



ಶಕುಂತಲಾ ಶೆಟ್ಟಿ

ಬಂಟ್ವಾಳದಲ್ಲಿ ಕಮ್ಯುನಲ್ ಕ್ರಿಮಿನಲ್ ಕಾರ್ಯಾಚರಣೆ ಮಾಡುವ ಗೋವಿಂದ ಪ್ರಭುಗೆ ಗೂಂಡಾಗಿರಿಯೇ ಕಸುಬು. ಡಜನ್‌ಗಟ್ಟಲೆ ಕೇಸ್‌ಗಳ ಒಡೆಯನೀತ. ಕೆಲ ತಿಂಗಳ ಹಿಂದೆ ತನ್ನ ಮತಾಂಧ ಹಿಂಬಾಲಕ ಭಜರಂಗಿಗಳನ್ನು ಬಂಧಿಸದಂತೆ ದಕ್ಷ ಎಎಸ್‌ಪಿ ಅಮಿತ್‌ಸಿಂಗ್‌ಗೆ ಈತ ತಾಕೀತು ಮಾಡಿ ಉಗಿಸಿಕೊಂಡು ಬಂದಿದ್ದ, ಬಂದವನೇ ಬಾಸ್ ಗೋಣಿ ನಾಗ, ಚಿಲ್ಟು ಎಂಪಿ ನಳಿನ್‌ಕುಮಾರ್ ಕಟೀಲು, ಚೆಡ್ಡಿಚತುರೆ ಮಲ್ಲಿಕಾ ಪ್ರಸಾದ್ ಎಂಬ ಪುತ್ತೂರು ಶಾಸಕಿಯನ್ನೆಲ್ಲ ಸೇರಿಸಿಕೊಂಡು ರಾತ್ರಿ ಹೊತ್ತಲ್ಲೇ ಎಎಸ್‌ಪಿ ಮನೆ ಮುಂದೆ ಧರಣಿ ನಡೆಸಿದ್ದ. ಎಎಸ್‌ಪಿ ಹೆಂಡತಿ ಒಬ್ಬಳೇ ಮನೆಯಲ್ಲಿದ್ದಾಗ ಗೋವಿಂದನ ಗೆಳೆಯರು ಕುಡಿದು ಹೋಗಿ ಗಲಾಟೆ ಮಾಡಿದ್ದರು. ಇದಕ್ಕೆಲ್ಲ ಆರೆಸ್ಸೆಸ್ ಬೆಂಬಲವಿತ್ತು, ಗೋಣಿ ನಾಗನೂ ಪ್ರತಿಭಟನೆಯಲ್ಲಿದ್ದ. ಆದರೆ ಕೊನೆಗೆ ಪಾರ್ಟಿ ವಲಯದಲ್ಲಿ ಹೆಸರು ಹಾಳಾದದ್ದು ಮಾತ್ರ ಗೋಣಿ ನಾಗ-ಗೋವಿಂದ ಪ್ರಭು ಎಂಬ ಗುರು-ಶಿಷ್ಯನದಾಗಿತ್ತು. ಇದು ಕಲ್ಲಡ್ಕ ಭಟ್ಟನ ಸ್ಕೆಚ್!

ಈ ಬಾರಿ ಕಲ್ಲಡ್ಕ ಭಟ್ಟನ ಗ್ಯಾಂಗ್ ಕಂಟ್ರಾಕ್ಟರ್ ಪೂಜಾರಿಗೆ ಬುಡಾ ಬಾಸ್ ಗೋವಿಂದ ಪ್ರಭು ಬೆದರಿಸಿದ್ದನ್ನು ನಾಗನ ಹೈರಾಣಾಗಿಸಲು ವ್ಯವಸ್ಥಿತವಾಗೇ ಬಳಸಿಕೊಂಡಿತು. ಎಎಸ್‌ಪಿ ಅಮಿತ್‌ಸಿಂಗ್ ಎಂಬ ದಕ್ಷ ಪೊಲೀಸ್ ಅಧಿಕಾರಿಯನ್ನೇ ಎತ್ತಂಗಡಿ ಮಾಡಿಸಿದ್ದ 'ಶಕ್ತಿಶಾಲಿ' ಗೋವಿಂದ ಪ್ರಭುನನ್ನು ಪೊಲೀಸರು ಕಂಟ್ರಾಕ್ಟರ್‌ನ ಕಂಪ್ಲೇಟಿನ ಮೇಲೆ ಬಂಧಿಸುವಂತೆ ಕಲ್ಲಡ್ಕ ಭಟ್ಟ ತೆರೆಮರೆಯಲ್ಲೇ ನಿಂತು ಸೂತ್ರ ಆಡಿಸಿದ್ದಾರೆ. ಅಷ್ಟೇ ಅಲ್ಲ ಪದೇಪದೇ ಭಾನ್ಗಡಿ ಮಾಡುವ ಗೋವಿಂದ ಪ್ರಭುನನ್ನು ಬಿಜೆಪಿ ಜಿಲ್ಲಾಧ್ಯಕ್ಷ ಕೊಟ್ಟಾರಿ ಕರೆದು ವಿಚಾರಣೆಯೂ ಮಾಡಿದ್ದಾರೆ. ಪಕ್ಷ ಮತ್ತು ಪೊಲೀಸರಿಂದ ತನ್ನ ಅಚ್ಚುಮೆಚ್ಚಿನ ಅನುಯಾಯಿ ಗೋವಿಂದ ಪ್ರಭುನನ್ನು ಬಚಾಯಿಸಲಾಗದ ಹತಾಶೆಯಲ್ಲಿ ಗೋಣಿ ನಾಗ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ರಾಜೀನಾಮೆ ಬರೆದು ಸೀದಾ ಸಿಎಂಗೆ ಕಳಿಸಿದ್ದಾನೆ; ಅಷ್ಟೇ ಅಲ್ಲ, ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ಬಿಸಾಕಿದ್ದಾನೆ.

ಈಗ ಎಡವಟ್ಟು ನಾಗನ ರಾಜೀನಾಮೆ ಪ್ರಹಸನವನ್ನು ಎರಡು ರೀತಿಯಲ್ಲಿ ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲಿ ವಿಶ್ಲೇಷಿಸಲಾಗುತ್ತಿದೆ. ಒಂದು: ಪಕ್ಷ ಮತ್ತು ಸರ್ಕಾರದಲ್ಲಿ ಮೂಲೆಗುಂಪಾದ ಭಾವನೆಯಿಂದ ಬಳಲುತ್ತಿದ್ದ ನಾಗ ರಾಜೀನಾಮೆ ನಾಟಕವಾಡಿ ಬಿಜೆಪಿ ಚೆಡ್ಡಿ ದೊರೆಗಳಿಗೆ ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ. ಆ ಮೂಲಕ ಪಕ್ಷದಲ್ಲಿ ಮತ್ತೆ ಪ್ರವರ್ಧಮಾನಕ್ಕೆ ಬರಲು ಹವಣಿಸುತ್ತಿದ್ದಾರೆಂದು ಚೆಡ್ಡಿ ಬಿಜೆಪಿ ಕ್ಯಾಂಪಿನಲ್ಲೇ ಗುಸುಗುಸು ಎದ್ದಿದೆ. ಇನ್ನೊಂದು: ವಿಶ್ಲೇಷಣೆಯಂತೆ ಆತ ಜೆಡಿಎಸ್‌ಗೆ ಸೇರಲು ಸಮಯ ಸಾಧಿಸುತ್ತಲೇ ಇದ್ದರಂತೆ. ಕುಮಾರಸ್ವಾಮಿ ಜೊತೆ ಅನ್ಯೋನ್ಯ ಬಿಸಿನೆಸ್ ರಿಲೇಷನ್ ಇರುವುದರಿಂದ ತಾನು ಜೆಡಿಎಸ್‌ನಲ್ಲಿ ಹೇಗೇ ಬೇಕೋ ಹಾಗೆ ಮೆರೆಯಬಹುದೆಂಬ ಯೋಚನೆ ನಾಗನದು. ಜಿಲ್ಲಾ ಜೆಡಿಎಸ್ ಅನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಬಿಜೆಪಿಯ ಹಿತಶತ್ರು, ಕಲ್ಲಡ್ಕ, ಕೊಟ್ಟಾರಿ, ಪಾಲೇಮಾರ್‌ಗೆಲ್ಲ ಸೆಡ್ಡು ಹೊಡೆವ ಹಠ ನಾಗನಿಗಂತೆ.

ನಾಗನ ಬಂಡಾಯ-ಭಂಡಾಟ ಏನೇ ಇರಲಿ, ಒಂದಂತೂ ಖರೆ. ಕರಾವಳಿಯ ಬಿಜೆಪಿಯಲ್ಲಿ ಸಂಘ ಪರಿವಾರದ ಸರದಾರ ಕಲ್ಲಡ್ಕ ಭಟ್ಟ ಶೂದ್ರ ಲೀಡರ್‌ಗಳನ್ನು ಬಳಸಿಕೊಂಡು ಬಿಸಾಡುವ ಪುರೋಹಿತಶಾಹಿ ಕಮತ್ತು ಮಾಡುತ್ತಿರುವುದೀಗ ರಹಸ್ಯವಾಗೇನೂ ಉಳಿದಿಲ್ಲ, ಇದು ಸ್ಥಳೀಯ ಬಿಜೆಪಿಯಲ್ಲಿ ಸಣ್ಣದೊಂದು ತಲ್ಲಣ ಸೃಷ್ಟಿಸಿದೆ. ಗೋಣಿ ನಾಗನ ರಾಜೀನಾಮೆ ನಾಟಕ ಬಿಜೆಪಿಯ ಅಸಲೀ ಅವತಾರವನ್ನು ಅನಾವರಣ ಮಾಡುತ್ತಿದೆ. ಐಎಂಜೆ, ಶಕು ಅಕ್ಕ, ಮನೋರಮಾ ಮಧ್ವರಾಜ್, ನಾಗರಾಜ ಶೆಟ್ಟಿ...... ಇನ್ಯಾರ್‍ಯಾರಿಗೆ ಕಾದಿದೆಯೋ ಕಲ್ಲಡ್ಕ ಭಟ್ಟನೆಂಬ ಶನಿಕಾಟ!!

• ನಹುಷ

ಹೃದಯ ಧರ್ಮಸ್ಥಳದಿ ನಿನ್ನಂತರಾತ್ಮನಿರೆ, ಅಂಜುತಿಹೆ ಏಕೆ?



ಜೂನ್ 27ರಂದು ಧರ್ಮಸ್ಥಳದಲ್ಲಿ ನಮ್ಮ ಹಾಲಿ ಮತ್ತು ಮಾಜಿ ಮುಖ್ಯ ಮಂತ್ರಿಗಳಾಗಿರುವ ಯಡಿಯೂರಪ್ಪ ಮತ್ತು ಕುಮಾರಸ್ವಾಮಿಯವರು ತಮ್ಮಿಬ್ಬರಿಗೆ ಮಾತ್ರ ತಿಳಿದಿರುವ ತಮ್ಮ ತಮ್ಮ ದುರ್ವ್ಯವಹಾರಗಳ ಕುರಿತು ಪ್ರಮಾಣ ವಚನ ಸ್ವೀಕರಿಸುವ ಕಾರ್ಯ ನಡೆಯಲಿದೆ ಎಂಬ ಪ್ರಚಾರ ನಡೆದಿತ್ತು. ಆದರೆ ಈಗ ಯಡಿಯೂರಪ್ಪ ಕೇವಲ ಪೂಜೆ ಮಾಡಿ ಹೊರಬಂದಿದ್ದರೆ ಕುಮಾರಸ್ವಾಮಿ ಅಲ್ಲಿ ಆಣೆ ಪ್ರಮಾಣ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಧರ್ಮಸ್ಥಳದಲ್ಲಿ ಪ್ರಮಾಣ ಮಾಡುವುದರ ಬಗ್ಗೆ ರಾಷ್ಟ್ರಕವಿ ಕುವೆಂಪುರವರು ಬರೆದಿರುವ ಒಂದು ಸುಂದರವಾದ ಮತ್ತು ಅರ್ಥಪೂರ್ಣವಾದ ಕವನ ನೆನಪಾಗುತ್ತಿದೆ.

ಕುವೆಂಪುರವರು ಧರ್ಮಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ವೀರೇಂದ್ರ ಹೆಗ್ಗಡೆಯವರ ಹಿರಿಯವರಾದ ಮಂಜಯ್ಯ ಹೆಗ್ಗಡೆಯವರು ಆಡಳಿತವನ್ನು ನಡೆಸುತ್ತಿದ್ದರು. ಇಂದಿಗಿಂತಲೂ ಅಂದು ಧರ್ಮಸ್ಥಳದ ಮಹತ್ವದ ಬಗ್ಗೆ ಜನರ ಭೀತಿ ಅಧಿಕವಿತ್ತು, ಧರ್ಮಸ್ಥಳದಲ್ಲಿ ಸಾಮಾನ್ಯ ಜನರು ಆಚರಿಸುತ್ತಿದ್ದ ಹರಕೆ ಸಂಪ್ರದಾಯಗಳ ರೀತಿ ನೀತಿಗಳನ್ನು ಖುದ್ದಾಗಿ ಕಂಡ ಕುವೆಂಪು ಅದು ಅಮಾನವೀಯವೆಂದು ಮನನೊಂದು 'ಧರ್ಮಸ್ಥಳ' ಎಂಬ ಒಂದು ಕವನವನ್ನು ಸ್ಥಳದಲ್ಲೇ ರಚಿಸಿ ಅದನ್ನು 'ಇಕ್ಷು ಗಂಗೋತ್ರಿ' ಎಂಬ ತನ್ನ ಕವನ ಸಂಕಲನದಲ್ಲಿ ಪ್ರಕಟಿಸಿದ್ದಾರೆ. ಅದರ ಕೆಲವು ಸಾಲುಗಳು ಹೀಗಿವೆ:

ಒಂದು ಪತ್ರ

ಹೃದಯ ಧರ್ಮಸ್ಥಳದಿ ನಿನ್ನಂತರಾತ್ಮನಿರೆ, ಅಂಜುತಿಹೆ ಏಕೆ?
ಅಲ್ಲಿ ಧರ್ಮಸ್ಥಳದಿ ಹೇಳಿಗೆಯ ಹಾವಿನೊಲು, ದೇಗುಲಕೆ ವಶನೆ ಹೇಳ್
ಮಂಜುನಾಥ?

(ನಿನ್ನ ಅಂತರಾತ್ಮದಲ್ಲಿ ನಿಜವಾಗಿಯೂ ಮಂಜುನಾಥನು ಇರುವುದಾದರೆ ಹಾವಾಡಿಗನ ಹೇಳಿಗೆಯಂತಿರುವ ಧರ್ಮಸ್ಥಳದ ದೇಗುಲದಲ್ಲಿ ಮಂಜುನಾಥ ಬಂಧಿಯಾಗಿರುವನೇನು?)

ನಿನ್ನ ಭಯದ ಉರಿಗೊಳ್ಳಿ ನಿನಗೆ ಅದುವೇ ಪಂಜುರ್ಲಿ;
ನಿನ್ನ ಅಳುಕೇ ನಿನಗೆ ಅಣ್ಣಪ್ಪ ಭೂತ!

(ನಿನ್ನ ಭಯವೆಂಬ ಉರಿಯುವ ಕೊಳ್ಳಿಯೇ ನಿನ್ನನ್ನು ಪಂಜುರ್ಲಿಯಂತೆ ಕಾಡುತ್ತದೆ, ನಿನ್ನ ಅಳುಕೇ ನಿನಗೆ ಅಣ್ಣಪ್ಪ ಭೂತದಂತೆ ಕಾಡುತ್ತದೆ.)

ಮೈಸೂರು ರಿಯಲ್ ಎಸ್ಟೇಟ್ ದಂಧೆಯಲ್ಲಿ ಮಾಜಿ–ಹಾಲಿ ಖಾಕಿಗಳ ಕಾರುಬಾರು!

ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗುವುದು ಮೈಸೂರಿನ ಪೊಲೀಸ್ ಇಲಾಖೆಗೆ ಹೊಸದಲ್ಲ. ಮೈಸೂರಿನ ಪ್ರತೀ ಠಾಣೆಗಳಲ್ಲೂ ಲ್ಯಾಂಡ್ ಡೀಲ್‌ಗಳಲ್ಲಿ ಅಧಿಕಾರಿಗಳಿಂದ ಪೇದೆಗಳ ತನಕ ಎಲ್ಲರೂ ಇಳಿದಿದ್ದಾರೆ. ಆದರೆ ಇವತ್ತಿನ ತನಕ ಇದನ್ನು ಕುರಿತು ಗುಪ್ತಚರ ವಿಭಾಗ ಕಣ್ಣುಮುಚ್ಚಿ ಕುಳಿತಿದೆ. ಇಂತಹ ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳಬೇಕಿರುವ ಕಮಿಷನರ್ ಸುನಿಲ್ ಅಗರ್‌ವಾಲ್ ಮೌನವಾಗಿದ್ದಾರೆ.

ಮೈಸೂರಿನ ಸುತ್ತಮುತ್ತ ಲ್ಯಾಂಡ್ ಮಾಫಿಯಾ ಗರಿಗೆದರಿದೆ. ಈ ಹಿಂದೆ ಈ ಲ್ಯಾಂಡ್ ಮಾಫಿಯಾಗೆ ಪುಢಾರಿಗಳು, ಬಡ್ಡಿ ದಂಧೆಕೋರರು, ರಾಜಕಾರಣಿಗಳು ಬೇನಾಮಿಗಳ ಮೂಲಕ ತಮ್ಮ ಕಪ್ಪುಹಣವನ್ನ ಹೂಡಿ ಬಿಳಿ ಮಾಡಿಕೊಳ್ಳುತ್ತಿದ್ದರು. ಆದರೀಗ ಇಡೀ ಭೂವ್ಯವಹಾರ ದಂಧೆಯಾಗಿ ಮಾರ್ಪಟ್ಟಿರುವುದಲ್ಲದೆ ಅಧಿಕಾರಿಗಳು – ಅದರಲ್ಲೂ ಜನರಿಗೆ ರಕ್ಷಣೆ ನೀಡಬೇಕಾದ ಖಾಕಿಗಳು – ತಾವು ಯಾರಿಗೂ ಕಮ್ಮಿ ಇಲ್ಲ ಎಂಬಂತೆ ತಮ್ಮ ಅಧಿಕಾರವನ್ನು ಬಳಸಿಕೊಂಡು ರಿಯಲ್ ಎಸ್ಟೇಟ್ ದಂಧೆಗೆ ಕೈ ಹಾಕಿದ್ದಾರೆ.


ಮೈಸೂರಿನ ಉಸ್ತುವಾರಿ ಸಚಿವ ರಾಮದಾಸ್, ಕೆ.ಆರ್.ನಗರದ ಜೆಡಿಎಸ್ ಶಾಸಕ ಸಾ.ರಾ.ಮಹೇಶ್, ಬಿಜೆಪಿ ಎಮ್ಮೆಲ್ಸಿ ಸಿದ್ದರಾಜು, ಗೃಹಮಂಡಳಿ ಅಧ್ಯಕ್ಷ ಜಿ.ಟಿ.ದೇವೇಗೌಡರಾದಿಯಾಗಿ ಮೈಸೂರು ಪಾಲಿಕೆಯ ಸದಸ್ಯರೂ ಸೇರಿದಂತೆ ಎಲ್ಲರೂ ರಿಯಲ್ ಎಸ್ಟೇಟ್ ಗಿರಾಕಿಗಳೇ. ಇಂತಹ ರಾಜಕಾರಣಿಗಳನ್ನು ನೋಡಿರುವ ಮೈಸೂರಿನ ಖಾಕಿಗಳು ಇಂದು ರಿಯಲ್ ಎಸ್ಟೇಟ್ ದಂಧೆಕೋರರಾಗಿ ಪರಿವರ್ತನೆಗೊಂಡಿದ್ದಾರೆ.

ಅಂಥವರಲ್ಲಿ ಮೈಸೂರಿನ ನಿವೃತ್ತ ಪೊಲೀಸ್ ಅಧೀಕ್ಷಕ ಬಿ.ಬಸವರಾಜು ಮತ್ತು ನಂಜುಂಡೇಗೌಡ ಎಂಬ ಜೋಡಿ, ಮೈಸೂರಿನ ಟ್ರಾಫಿಕ್ ಎಸಿಪಿ ಶಂಕರೇಗೌಡ, ವಿಜಯನಗರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಅರುಣ್ ನಾಗೇಗೌಡರ ಹಾವಳಿಗಳು ಮಿತಿಮೀರಿವೆ. ಇದಿಷ್ಟೇ ಅಲ್ಲದೇ ಬೆಂಗಳೂರಿನ ಯಶವಂತಪುರ ಠಾಣೆಯ ಎಸಿಪಿ ಚಂದ್ರಪ್ಪನ ಕಪ್ಪುಹಣವೂ ಮೈಸೂರಿನ ಲ್ಯಾಂಡ್ ಅವ್ಯವಹಾರಗಳಲ್ಲಿ ಹರಿದಾಡುತ್ತಿದೆ.

ಹತ್ತು ವರ್ಷಗಳ ಹಿಂದೆ ಮೈಸೂರಿನ ಜಲಪುರಿ ಠಾಣೆಯಲ್ಲಿ ನಂಜುಂಡೇಗೌಡ ಸಾಮಾನ್ಯ ಹೆಡ್‌ಕಾನ್ಸ್‌ಟೇಬಲ್ ಆಗಿದ್ದ. ಆಗ ತನ್ನ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಮಗಳನ್ನ ಸಾಕಲು ಸರ್ಕಾರದಿಂದ ಬರುತ್ತಿದ್ದ ಸಂಬಳ ಸಾಕಾಗದೆ ಕಷ್ಟಪಡುತ್ತಿದ್ದ ನಂಜುಂಡೇಗೌಡ ಹೈನುಗಾರಿಕೆ ನಡೆಸುತ್ತಿದ್ದ. ಆದರೆ ಇದೇ ನಂಜುಂಡೇಗೌಡ ಈಗ ಸುಮಾರು **500** ಕೋಟಿ ಆಸ್ತಿಪಾಸ್ತಿಗಳ ಒಡೆಯ! ಕೇವಲ ಒಂದು ದಶಕದಲ್ಲಿ ಈ ಮಾಜಿ ಪೊಲೀಸ್ ಪೇದೆ ಇಷ್ಟು ದೊಡ್ಡ ಶ್ರೀಮಂತನಾದ ಕತೆ ಮಾತ್ರ ಭಾರೀ ರೋಚಕವಾಗಿದೆ!

ಜಲಪುರಿ ಠಾಣೆಯಲ್ಲಿ ಈತ ಕಾನ್ಸ್‌ಟೇಬಲ್ ಆಗಿದ್ದಾಗ ಅಲ್ಲಿಗೆ ಬರುತ್ತಿದ್ದ ವಿವಾದಿತ ಲ್ಯಾಂಡ್ ಡೀಲ್‌ಗಳನ್ನು ನಿಭಾಯಿಸುವ ಅನುಭವವನ್ನು ಪಡೆದುಕೊಂಡ ನಂಜುಂಡೇಗೌಡ ಆನಂತರ ತಾನೇ ನೇರವಾಗಿ ಲ್ಯಾಂಡ್‌ಡೀಲ್‌ಗಳಿಗೆ ಕೈಹಾಕಿದ. ಆಗ ಸೈಟುಗಳ ಕೈಬದಲಾವಣೆಯಿಂದಲೇ ಲಕ್ಷಾಂತರ ರೂಪಾಯಿಗಳನ್ನ ಗುಡಿಸಿ ಗುಡ್ಡೆಹಾಕಿಕೊಂಡ.

2000ನೇ ಇಸವಿಯ ನಂತರವಂತೂ ನಂಜುಂಡೇಗೌಡ ಪೊಲೀಸ್ ವೃತ್ತಿಯನ್ನು ಮಾಡಿದ್ದಕ್ಕಿಂತ ಲ್ಯಾಂಡ್ ಡೀಲ್‌ಗಳನ್ನು ಮಾಡಿದ್ದೇ ಹೆಚ್ಚು. ಇದು ಪೊಲೀಸ್ ಇಲಾಖೆಯ ಗಮನಕ್ಕೆ ಬಂದಿದ್ದರಿಂದ ಅದರಿಂದ ತಪ್ಪಿಸಿಕೊಳ್ಳಲು ರೈತರ ಜಮೀನನ್ನು ಖರೀದಿಸಲು ಮತ್ತು ಅವುಗಳ ಜಿಪಿಎ ಮಾಡಿಸಿಕೊಳ್ಳಲು ತನ್ನ ಇಬ್ಬರು ಗಂಡುಮಕ್ಕಳು, ಮಗಳು ಮತ್ತು ಅಳಿಯನ ಹೆಸರುಗಳನ್ನು ಬಳಸಿಕೊಂಡ. ಇತ್ತೀಚೆಗೆ ಸಿದ್ದಾರ್ಥ ನಗರವಾಗಿರುವ ಜಾಗದಲ್ಲಿ ಈತ ಮೊದಲಿಗೆ ಎಕರೆಗೆ ಕೇವಲ ಎಂಟು ಸಾವಿರ–ಹತ್ತು ಸಾವಿರ ರೂಪಾಯಿಗಳನ್ನು ನೀಡಿ ಹತ್ತಾರು ಎಕರೆಗಳನ್ನ ರೈತರಿಂದ ಜಿಪಿಎ ಮಾಡಿಸಿಕೊಂಡ.




ಶಂಕರೇಗೌಡ

ಅಷ್ಟರಲ್ಲಿ ಮೈಸೂರು ತುಂಬೆಲ್ಲಾ ಕೃತಕವಾಗಿ ಸೈಟುಗಳಿಗೆ ಭೂಮಿ ಬರುವಂತೆ ಮಾಡಿದ್ದ ರಾಮ್ದಾಸ್ ಮತ್ತು ಸಾರಾ ಮಹೇಶ್‌ರ ಕೃಪಾರ್ಥದಿಂದ ಈತ ಸಾವಿರ ರೂ.ಗಳ ಚಿಲ್ಲರೆ ಹಣಕೊಟ್ಟು ಜಿಪಿಎ ಮಾಡಿಸಿಕೊಂಡಿದ್ದ ಭೂಮಿಯನ್ನು ಸೈಟುಗಳಾಗಿ ಪರಿವರ್ತಿಸಿದ. ಇವುಗಳನ್ನು ಮಾರಾಟ ಮಾಡಿ ಹತ್ತಾರು ಕೋಟಿ ರೂಪಾಯಿಗಳನ್ನು ಗುಂಜಿಕೊಂಡ. ಹೀಗೆ ಬಂದ ಹಡಬೆ ಹಣದಿಂದಲೇ ತನ್ನ ಮಗಳಾದ ಮಹೇಶ್ವರಿ ಹೆಸರಿನಲ್ಲಿ ಸಿದ್ದಾರ್ಥ ನಗರ ಸೇರಿದಂತೆ ಮೈಸೂರಿನ ವಿವಿಧೆಡೆ ಕಾಂಪ್ಲೆಕ್ಸ್‌ಗಳು ಮತ್ತು ಶಾಪಿಂಗ್ ಮಾಲ್‌ಗಳನ್ನ ಕಟ್ಟಿಸಿದ.

ನಂಜುಂಡೇಗೌಡ ತನ್ನ ದಂಧೆಯನ್ನು ಮುಂದುವರೆಸಲು ಅನುಕೂಲವಾಗಲೆಂದು ಮತ್ತೊಬ್ಬ ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜು ಎಂಬುವ ಲಿಂಗವಂತ ಗಿರಾಕಿಯನ್ನ ಬಳಸಿಕೊಂಡ. ನಿವೃತ್ತಿಯಾದ ನಂತರ ಇಬ್ಬರೂ ಜೊತೆಗೂಡಿ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರಿ ಸಂಘವನ್ನು ಹುಟ್ಟುಹಾಕಿದರು. ಇದರ ಉದ್ಘಾಟನೆಗೆ **8/9/1996**ರಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಆಹ್ವಾನಿಸಿದ್ದರು. ಆ ಮೂಲಕ ತಮಗೂ ತಮ್ಮ ಸಂಘಕ್ಕೂ ಪೊಲೀಸ್ ಇಲಾಖೆಯಲ್ಲಿ ಮಾನ್ಯತೆ ಸಿಗುವಂತೆ ನೋಡಿಕೊಂಡರು.

ಆದರೆ ಇದರಲ್ಲೂ ನಂಜುಂಡೇಗೌಡ ತನ್ನ ಚಾಣಾಕ್ಷತೆಯನ್ನು ಮೆರೆದ. ಈ ಸಹಕಾರಿ ಸಂಘಕ್ಕೆ ತನ್ನ ಸಂಬಂಧಿಗಳನ್ನೇ ನಿರ್ದೇಶಕರನ್ನಾಗಿ ಮಾಡಿದ. ಹೆಸರಿಗೆ ಬಸವರಾಜು ಈ ಸಂಘದ ಅಧ್ಯಕ್ಷನಾಗಿದ್ದರೂ ಎಲ್ಲದಕ್ಕೂ ನಂಜುಂಡನೇ ಬಾಸ್ ಆಗಿ ಇವತ್ತಿಗೂ ಮೆರೆಯುತ್ತಿದ್ದಾನೆ. ಈ ಗೃಹ ನಿರ್ಮಾಣ ಸಹಕಾರಿ ಸಂಘ ಮಾಡಿಕೊಂಡ ನಂತರ ನಂಜುಂಡೇಗೌಡ–ಬಸವರಾಜು ಜೋಡಿ ಪೊಲೀಸರಿಗೆ ಸೈಟುಗಳನ್ನು ಹಂಚಿರುವ ಉದಾಹರಣೆಗಳೇ ಇಲ್ಲ.

ಅಸಲಿಗೆ ಈ ಸಂಘದ ಬೈಲಾದಲ್ಲಿ ಪೊಲೀಸರಿಗೆ ನಿವೇಶನ ಕೊಡಲು ಮತ್ತು ಮನೆಕಟ್ಟಿಸಿಕೊಡಲು ನಿಯಮ ಮಾಡಿಕೊಂಡಿದ್ದಾರೆಯೇ ವಿನಃ ಕಮರ್ಷಿಯಲ್ ಮಾರಾಟಕ್ಕಲ್ಲ. ಆದರೆ ಈ ಸಂಘದ ಹೆಸರಿನಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರ ಎಂಬ ಊರಿನ ಸುತ್ತಮುತ್ತಲಿರುವ ಸಕಲ ಭೂಮಿಯನ್ನು ಪಡೆಯಲಾಗಿದ್ದರೂ ಅದಕ್ಕೆಲ್ಲ ನಂಜುಂಡೇಗೌಡನೇ ಒಡೆಯನಾಗಿದ್ದಾನೆ ಎಂದರೆ ಇವನ ಕರಾಮತ್ತು ಅರ್ಥವಾಗುತ್ತದೆ.



ನಂಜುಂಡೇಗೌಡ

ಈತನ ಭೂದಾಹಕ್ಕೆ ಲಲಿತಾದ್ರಿಪುರದ ನೂರಾರು ಕುಟುಂಬಗಳು ಬಲಿಯಾಗಿವೆ. ಭೂಮಾಲಿಕ ಕುಟುಂಬದ ಯಾರಾದರೊಬ್ಬ ಕುಡುಕ ಅಥವಾ ದುರ್ಬಲ ವ್ಯಕ್ತಿಗೆ ಚಿಲ್ಲರೆ ಹಣ ನೀಡಿ ಜಿಪಿಎ ಮಾಡಿಸಿಕೊಳ್ಳುವುದು, ಆನಂತರ ತನ್ನ ಪೊಲೀಸ್‌ಗಿರಿಯನ್ನು ಬಳಸಿ ಜನರನ್ನು ಬೆದರಿಸುವುದು ನಂಜುಂಡೇಗೌಡನ ಸ್ಟೈಲ್. ಹೀಗೆ ಮಾಡಿ ಮಾಡಿಯೇ ಈತ ಈ ಪ್ರದೇಶದಲ್ಲಿ ಸುಮಾರು **700** ಎಕರೆಗಳನ್ನು ಕೊಳ್ಳೆ ಹೊಡೆದಿದ್ದಾನೆ. ಈ ಪ್ರದೇಶ ಈಗ ನಿರ್ಮಾಣಗೊಳ್ಳುತ್ತಿರುವ ರಿಂಗ್‌ರೋಡಿಗೆ ಹತ್ತಿರವಿರುವುದರಿಂದ ಈ ಭೂಮಿಗೆ ಈಗ ಭರ್ಜರಿ ಬೆಲೆ ಬಂದಿದೆ.

ನಂಜುಂಡೇಗೌಡನಿಗೆ ತಮ್ಮ ಭೂಮಿಯನ್ನ ಕೊಡದೆ ಪ್ರತಿರೋಧ ವ್ಯಕ್ತಪಡಿಸಿರುವ ರೈತರಿಗೆ ಬುದ್ಧಿ ಕಲಿಸಲು ಮೂಡಾ ಅಧಿಕಾರಿಗಳ ಮೇಲೆ ಒತ್ತಡ ತಂದು ಅವರ ಭೂಮಿಯನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿಕೊಳ್ಳುವ ಕುತಂತ್ರಗಳನ್ನೂ ಈತ ಮಾಡಿದ್ದಾನೆ. ಈತ ಎಂತಹ ದುಷ್ಟ ಅಂದರೆ ಲಲಿತಾದ್ರಿಪುರದ ರೈತರು ತಮ್ಮ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದರೆ ಅವುಗಳನ್ನೂ ಸಹ ಮೊನ್ನೆ ನೆಲಸಮಗೊಳಿಸಲು ಮೂಡಾ ಅಧಿಕಾರಿಗಳಿಗೆ ಅಮೇಧ್ಯ ತಿನ್ನಿಸಿದ್ದಾನೆ ಎಂದು ಅಲ್ಲಿನ ಜನ ಪ್ರತಿಭಟನೆ ಮಾಡಿದ್ದಾರೆ.

ಲಲಿತಾದ್ರಿಪುರದ ಸುತ್ತಮುತ್ತಲಿರುವ ನೂರಾರು ಎಕರೆ ಗೋಮಾಳಗಳನ್ನು, ದರಖಾಸ್ತು ಭೂಮಿಯನ್ನು, ಕೆರೆ–ಕಟ್ಟೆ ಕಾಲುವೆಗಳನ್ನೂ ಬಿಡದೆ ಒತ್ತುವರಿ ಮಾಡಿಕೊಂಡಿದ್ದಾನೆ. ಅಷ್ಟು ಸಾಲದೆಂಬಂತೆ ಸರ್ವೇ ನಂ.**52**ರಲ್ಲಿ ಇದ್ದ ಸುಮಾರು **50** ವರ್ಷಗಳಷ್ಟು ಹಳೆಯದಾದ ಕೊಂಟಗೆರೆ ಬಸಪ್ಪನ ದೇವಸ್ಥಾನದ ಸುತ್ತ ತಂತಿ ಬಿಗಿದು, ಈ ಉದ್ಯಾನವನದ ಒಳಗೆ ಅಕ್ರಮವಾಗಿ ದೇವಸ್ಥಾನ ಕಟ್ಟಲಾಗಿದೆ ಎಂದು ಆರೋಪಿಸಿ, ಆ ದೇವಸ್ಥಾನವನ್ನೇ ಬೀಳಿಸಿದ್ದಾನಲ್ಲದೆ ಈಗ ಅಲ್ಲಿನ **10.2** ಎಕರೆಗಳನ್ನ ಕಬಳಿಸಿ ಸಮಸ್ತ ಆಸ್ತಿಗೂ ಈತನೇ ಒಡೆಯನಾಗಿದ್ದಾನೆ.

ನೂರಾರು ರೈತರಿಗೆ ತನ್ನ ತೋಳ್ಬಲ ಮತ್ತು ಪೊಲೀಸ್ ಬಲವನ್ನು ಪ್ರದರ್ಶಿಸಿ ಅವರ ಭೂಮಿಯನ್ನು ಬಲವಂತವಾಗಿ ಕಿತ್ತುಕೊಂಡಿದ್ದಾನೆ. ಸೌತ್ ಪೊಲೀಸ್ ಸ್ಟೇಷನ್ನಿನ ಎಸ್ಸೈ ಗೋಪಾಲಕೃಷ್ಣನಂತೂ ನಂಜುಂಡೇಗೌಡನ ಚೇಲಾಗಿರಿ ಮಾಡುತ್ತಲೇ ಪಾಕೆಟ್ ಮನಿ ಪಡೆಯುತ್ತಿದ್ದಾನೆ ಎನ್ನುವ ಸುದ್ದಿ ಇದೆ. ಇದಕ್ಕಾಗಿಯೇ ಲಲಿತಾದ್ರಿಪುರದ ಅಮಾಯಕ ರೈತರ ಮೇಲೆ ಕೇಸುಗಳನ್ನು ಜಡಿದು ನಂಜುಂಡೇಗೌಡನ ಕೃಪೆಗೆ ಪಾತ್ರನಾಗಿದ್ದಾನೆ.

ಅಂಚೆ ಗ್ರಾಮದ ವ್ಯಾಪ್ತಿಯಲ್ಲಿಯೂ ನಂಜುಂಡೇಗೌಡನ ಭೂದಾಹ ಮುಂದುವರಿದಿದೆ. ತನ್ನ ಚೇಲಾ ಹುಚ್ಚಪ್ಪಚಾರಿ ಎಂಬ ಗ್ರಾಮ ಪಂಚಾಯಿತಿ ಅಧ್ಯಕ್ಷನನ್ನು ಬಳಸಿಕೊಂಡು ಲಲಿತಾದ್ರಿಪುರದ ರೈತರಿಗೆ ಮೋಸ ಮಾಡುತ್ತಿದ್ದಾನೆ. ಈ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆದರೆ ಈತ ಜೈಲು ಸೇರುವುದು ನೂರಕ್ಕೆ ನೂರರಷ್ಟು ಸತ್ಯ.

ಮತ್ತೊಬ್ಬ ಖಾಕಿ ರಿಯಲ್ ಎಸ್ಟೇಟ್ ದಂಧೆಕೋರನ ಹೆಸರು ಅರುಣ್ ನಾಗೇಗೌಡ. ಈತ ಈಗ ಮೈಸೂರು ವಿಜಯನಗರ ಠಾಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದಾನೆ. ಮಂಡ್ಯದಲ್ಲಿ ಡಿಡಿಪಿಐ ಆಗಿದ್ದು ನಿವೃತ್ತಿಯ ನಂತರ ಮೈಸೂರಿನಿಂದ ಕಳೆದ ಬಾರಿ ಜೆಡಿಎಸ್‌ನಿಂದ ಎಮ್ಮೆಲ್ಸಿ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದ ಶಾರದಮ್ಮನವರ ಪುತ್ರ ಈ ಅರುಣ್ ನಾಗೇಗೌಡ.

ಮೊದಲಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಪೊಲೀಸ್ 'ಸೇವೆ' ಸಲ್ಲಿಸಲು ಶುರುಮಾಡಿದ ಅರುಣ್ ಹಲವಾರು ಅಪರಾತಪರಾ ಕೆಲಸಗಳನ್ನು ಮಾಡಿ ಅದೆಷ್ಟೋ ಬಾರಿ ರೈತ ಸಂಘದಿಂದ ಉಗಿಸಿಕೊಂಡಿದ್ದ. ಆನಂತರ ಶ್ರೀರಂಗಪಟ್ಟಣದಿಂದ ಎತ್ತಂಗಡಿಯಾದ ಅರುಣ್ ಬಂದು ವಕ್ಕರಿಸಿದ್ದು ಮೈಸೂರಿಗೆ. ಅಂದಿನಿಂದ ಈತ ಇಲ್ಲಿಂದ ಕದಲಲಿಲ್ಲ.

ಅರುಣ್ ಪೊಲೀಸ್ ಸೇವೆಯನ್ನ ಪ್ರಾರಂಭಿಸಲು ಕಾರಣವಾಗಿದ್ದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಂತೆ. ಆದ್ದರಿಂದ ಆತ ಗೌಡರಿಗೆ ಕನಿಷ್ಠ ಸೇವೆಯನ್ನೂ ಮಾಡದೆ ಇರುತ್ತಾನೆಯೇ?

ವಿಜಯನಗರಕ್ಕೆ ಬರುವ ತಕರಾರು ಜಮೀನಿನ ದೂರುಗಳೇ ಈತನ ಅನ್ನದ ಮೂಲ. ಅಂತಹ ಆಸ್ತಿಗಳು ಒಂದೋ ಅರುಣ್ ನಾಗೇಗೌಡನ ಸಂಬಂಧಿಕರ ಪಾಲಾಗುತ್ತದೆ. ಇಲ್ಲವೇ ಅದು ದೇವೇಗೌಡರ ಕುಟುಂಬಕ್ಕೆ ಜಮೆಯಾಗುತ್ತದೆ. ಈತ ತನ್ನ ಹೆಸರಿನಲ್ಲಿ ಒಂದೇ ಒಂದು ಸೈಟನ್ನೂ ಇಟ್ಟುಕೊಳ್ಳದ ಚಾಣಾಕ್ಷ. ಈತ ತನ್ನ ಸಂಬಂಧಿಕರ ಮತ್ತು ತನ್ನ ತಾಯಿಯ ಹೆಸರಿನಲ್ಲಿ ಮಾಡಿಟ್ಟಿರುವ ನೂರಾರು ಸೈಟುಗಳನ್ನು ತನ್ನ ಹಿಂಬಾಲಕರ ಮೂಲಕ ಮಾರಾಟ ಮಾಡಿಸಿ ಕೋಟಿಗಟ್ಟಲೇ ಹಣ ಮಾಡಿದ್ದಾನೆನ್ನುವ ಸುದ್ದಿ ಬಲವಾಗಿ ಹಬ್ಬಿದೆ.

ಪೊಲೀಸ್ ಅಧಿಕಾರಿಯಾಗಿದ್ದುಕೊಂಡು ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವ ಇನ್ನೊಬ್ಬ ಮೈಸೂರು ನಗರದ ಟ್ರಾಫಿಕ್ ಎಸಿಪಿ ಆಗಿರುವ ಶಂಕರೇಗೌಡ. ಈತ ಕಳೆದ **20** ವರ್ಷಗಳಿಂದ ಮೈಸೂರನ್ನು ಬಿಟ್ಟು ಕದಲಲಿಲ್ಲ. ಈತ ಇಲವಾಲ ಸುತ್ತ ರೈತರಿಂದ ಬೇನಾಮಿ ಹೆಸರಿನಲ್ಲಿ ಜಮೀನು ಖರೀದಿಸಿ ರಿಯಲ್ ಎಸ್ಟೇಟ್‌ಗಿಳಿದಿದ್ದಾನೆ ಎನ್ನುವ ಆರೋಪಗಳು ಕೇಳಿಬರುತ್ತಿವೆ.



ಅರುಣ್ ನಾಗೇಗೌಡ

ಎಸಿಪಿ ಶಂಕರೇಗೌಡ ಸಾಹೇಬರು ಕೇವಲ ರಿಯಲ್ ಎಸ್ಟೇಟ್ ಗಿರಾಕಿ ಮಾತ್ರ ಅಲ್ಲ, ಜೊತೆಗೆ ಬಡ್ಡಿದಂಧೆಕೋರನೂ ಹೌದು. ಎಂಟು ವರ್ಷಗಳ ಹಿಂದೆ ಜೆಡಿಎಸ್‌ನ ಎಮ್ಮೆಲ್ಸಿ ಕಂ ಚಿತ್ರ ನಿರ್ಮಾಪಕ ಸಂದೇಶ್ ನಾಗರಾಜುಗೆ ಈತ ಮೂರು ಕೋಟಿ ರೂಪಾಯಿಗಳ ಸಾಲ ನೀಡಿದ್ದನಂತೆ. ಸಂದೇಶ್ ಅದನ್ನು ವಾಪಸ್ ಕೊಡದೆ ಸತಾಯಿಸಲು ಶುರುಮಾಡಿದ ಮೇಲೆ ದೇವೇಗೌಡರ ಪುತ್ರ ಹೆಚ್.ಡಿ.ರೇವಣ್ಣನ ಮೂಲಕ ಧಮಕಿ ಹಾಕಿಸಿ ವಸೂಲಿ ಮಾಡಿಕೊಳ್ಳಲಾಯಿತು ಎಂದು ಪೋಲೀಸ್ ಇಲಾಖೆಯ ಗೋಡೆಗಳು ಪಿಸುಗುಡುತ್ತವೆ.


ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗುವುದು ಮೈಸೂರಿನ ಪೊಲೀಸ್ ಇಲಾಖೆಗೆ ಹೊಸದಲ್ಲ. ಹಿಂದೊಮ್ಮೆ ಎಮ್ಮೆಲ್ಲೆಯಾಗಿ, ಆನಂತರ ಸಚಿವನಾಗಿ ಮೆರೆದಿದ್ದ ಡಿ.ಟಿ.ಜಯಕುಮಾರ್ ಕೂಡ ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದವರೇ. ಅಂದಿನಿಂದ ಇಂದಿನತನಕ ಮೈಸೂರಿನ ಪೊಲೀಸ್ ಅಧಿಕಾರಿಗಳ ರಿಯಲ್ ಎಸ್ಟೇಟ್ ನಂಟು ಮುಂದುವರೆದಿದೆ. ಮೈಸೂರಿನ ಪ್ರತೀ ಠಾಣೆಗಳಲ್ಲೂ ಲ್ಯಾಂಡ್ ಡೀಲ್‌ಗಳಲ್ಲಿ ಅಧಿಕಾರಿಗಳಿಂದ ಪೇದೆಗಳತನಕ ಎಲ್ಲರೂ ಇಳಿದಿದ್ದಾರೆ. ಆದರೆ ಇವತ್ತಿನ ತನಕ ಇದನ್ನು ಕುರಿತು ಗುಪ್ತಚರ ವಿಭಾಗ ಕಣ್ಣುಮುಚ್ಚಿ ಕುಳಿತಿದೆ. ಇಂತಹ ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳಬೇಕಿರುವ ಕಮಿಷನರ್ ಸುನಿಲ್ ಅಗರ್‌ವಾಲ್ ಮೌನವಾಗಿದ್ದಾರೆ.

ಮೈಸೂರು ಅಷ್ಟೇ ಅಲ್ಲ, ರಾಜ್ಯದ ಎಲ್ಲೆಡೆ ಪೊಲೀಸ್ ಅಧಿಕಾರಿಗಳು ತಮ್ಮ ಹೆಂಡತಿ, ಮಕ್ಕಳು, ಸಂಬಂಧಿಕರ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದ್ದಾರೆಂದು ಮೈಸೂರು ಸಂಸದ ಹೆಚ್.ವಿಶ್ವನಾಥ್ ಬಹಿರಂಗವಾಗಿ ಆರೋಪಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳದೆ ತೆಪ್ಪಗಿರುವ ಗೃಹ ಸಚಿವ ಆರ್.ಅಶೋಕ್‌ರ ವರ್ತನೆ ಹಲವಾರು ಗುಮಾನಿಗಳನ್ನು ಹುಟ್ಟಿಸುತ್ತದೆ.

• ಲಕ್ಷ್ಮಣ್ ಚೀರನಹಳ್ಳಿ

ಎಲ್ಲಿ ಮತ್ಸರವು ಅಳಿದು ಮೈತ್ರಿ ಮೂಡುವಲ್ಲಿ ಮೂಡಿತೆಂದೇ ತಿಳಿಯೋ ಧರ್ಮಸ್ಥಳ. ಸುಲಿಗೆ ವಂಚನೆ ಕಳೆದವನ ಮನವೇ ಮಂಜುನಾಥನ ಮಂಚ, ಹೃದಯಕಮಲ!

(ಎಲ್ಲಿ ಮತ್ಸರವು ಅಳಿದು ಗೆಳೆತನವು ಮೂಡುವುದೋ ಅಲ್ಲಿ ನಿಜವಾದ ಧರ್ಮಸ್ಥಳ ಮೂಡುತ್ತದೆ ಎಂದು ತಿಳಿ. ಸುಲಿಗೆ, ವಂಚನೆ, ಹಿಂಸೆಗಳನ್ನು ಕಳೆದವನ ಮನಸ್ಸೇ ಮಂಜುನಾಥನ ಪೀಠ!)



ಮೂಢ ಹೃದಯದ ಗೂಢ ಗಾಢಾಂಧಕಾರವನು ಹೊರದೂಡದೆಯೆ ರೂಢಿ ಎಂಬ ನೆವನದಿ ಕಾಣಿಕೆಯ ಹೆಸರಿಟ್ಟು ಕಾಂಚನವನೆಳೆದುಕೊಳೆ ಜ್ಯೋತಿ ಮೂಡುವುದೆಂದೋ ಜಡದ ಜಗದಿ?

(ಮೂಢರ ಹೃದಯಗಳ ನಿಗೂಢ ಗಾಢಾಂಧಕಾರವನ್ನು, ಕಾಣಿಕೆ ಎಂಬ ಹೆಸರಲ್ಲಿ ಕಾಂಚನವನ್ನು ಸೆಳೆಯುವ ತಂತ್ರಕ್ಕೆ ಪ್ರೋತ್ಸಾಹ ಕೊಟ್ಟರೆ ಜಗತ್ತಿನಲ್ಲಿ ಜ್ಞಾನ ಜ್ಯೋತಿ ಮೂಡುವುದು ಎಂದು?)

ಹೆಮ್ಮೆಯನು ಬಿಡು, ಹಿರಿಯ! ದಮ್ಮಯ್ಯನಿದು ಜನಕೆ! ನಿನ್ನಂತೆ ಸಂಸ್ಥೆಯೂ ನಶ್ವರವದು!

(ಧರ್ಮಸ್ಥಳದ ಹಿರಿಯನೇ, ಅಹಂಭಾವವನ್ನು ತೊರೆದು ಜನನಿಗೆ ಶರಣಾಗು. ನೀನಾಗಲಿ ನಿನ್ನ ಸಂಸ್ಥೆಯಾಗಲಿ ಶಾಶ್ವತವೇನಲ್ಲ!)

ಧರ್ಮಕ್ಕೆ, ಧರ್ಮಸಂಸ್ಥೆಗೆ ನಿಂದೆ ನನದಲ್ತು; ಧರ್ಮವೇಷದ ಅಧರ್ಮಕ್ಕೆ ಮುನಿದೆ, ನಿಜದ ಧರ್ಮಸ್ಥಳಕೆ ನಿಜದ ಧರ್ಮಕೆ ಇದೆಕೋ ಕೈ ಮುಗಿದೆ, ಮಣಿದೆ, ಹಿರಿದು ಕಿರಿದೆನ್ನದೆ!

(ಧರ್ಮ ಮತ್ತು ಧರ್ಮ ಸಂಸ್ಥೆಗಳಿಗೆ ನಾನು ನಿಂದಿಸುವುದಿಲ್ಲ. ಧರ್ಮದ ಹೆಸರಲ್ಲಿ ನಡೆಯುವ ಅಧರ್ಮಕ್ಕೆ ನನ್ನ ಮುನಿಸು. ನಿಜವಾದ ಧರ್ಮಕ್ಕೆ ನಾನು ತಲೆ ಬಾಗುತ್ತೇನೆ ಮತ್ತು ಕೈ ಮುಗಿಯುತ್ತೇನೆ)

ಇದು ಕುವೆಂಪುರವರ ಶ್ರೇಷ್ಠ ಕವನಗಳಲ್ಲೊಂದು ಎಂದೆನಿಸಿದೆ. ಧರ್ಮಸ್ಥಳದಲ್ಲಿ ಪ್ರಮಾಣ ವಚನ ಸ್ವೀಕರಿಸುವುದು, ಆಣೆ ಇಡುವುದು ಧರ್ಮದ ಹೆಸರಲ್ಲಿ ನಡೆಯುವ ಅಧರ್ಮವೆಂದೂ, ಜನರನ್ನು ಮೌಢ್ಯಕ್ಕೆ ತಳ್ಳುವ ಕ್ರಿಯೆಯೆಂದೂ ಅರ್ಧ ಶತಮಾನಗಳ ಹಿಂದೆಯೇ ಕುವೆಂಪುರವರು ಸಾರಿದ್ದರು. ಹಾಗಿರುವಾಗ ಜನನಾಯಕರೆಂದೆನಿಸಿಕೊಂಡಿರುವ ಯಡಿಯೂರಪ್ಪ ಮತ್ತು ಕುಮಾರಸ್ವಾಮಿಯವರ ಕುಕೃತ್ಯಕ್ಕೆ ಅಸಹ್ಯಪಡುತ್ತೇವೆ ಮತ್ತು ಖಂಡಿಸುತ್ತೇವೆ. ಏನಿದ್ದರೂ ಎಲ್ಲ ಅವ್ಯವಹಾರಗಳನ್ನು ಬಯಲು ಮಾಡುವುದು ಅವರ ಆದ್ಯ ಕರ್ತವ್ಯವಾಗಿದೆ. ಆದುದರಿಂದ ಅವುಗಳನ್ನು ನಮ್ಮ ಸಂವಿಧಾನಕ್ಕನುಗುಣವಾಗಿ ಶಾಸನ ಸಭೆಗಳಲ್ಲಿಯೋ, ನ್ಯಾಯಾಲಯಗಳಲ್ಲಿಯೋ ಮಂಡಿಸಿ ಸೂಕ್ತ ಕ್ರಮ ಕೈಗೊಳ್ಳುವ ಜವಾಬ್ದಾರಿ ಅವರದ್ದಾಗಿರುತ್ತದೆ. ಮತ್ತು ಇವುಗಳ ಕುರಿತು ಪೂರ್ಣ ಮಾಹಿತಿಯನ್ನು ಪಡೆಯುವ ಹಕ್ಕು ನಾಗರಿಕರಿಗಿದೆ. ಇದಕ್ಕೆ ಅವರು ಬದ್ಧರಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಂಚನೆಯಿಂದ ಪಾಲಿಸುತ್ತಾರೆ ಎಂದು ಹಾರೈಸುತ್ತೇವೆ.

– ಬಿ.ವಿ.ಕಕ್ಕಿಲಾಯ, ಮಾಜಿ ಸಂಸದರು, ಮಂಗಳೂರು

ಸೋಮಣ್ಣನ ಶಿಷ್ಯರ ಸೈಟು ದಂಧೆ ಶುರು


ಸ್ಲಂ ಜಾಗದಲ್ಲಿ ತಲೆಯೆತ್ತುತ್ತಿರುವ ವಸತಿ ಕಟ್ಟಡ...

ವಿಜಯನಗರದ ವೀರಪುತ್ರ ಸೋಮಣ್ಣ ರಾಜ್ಯ ವಸತಿ ಖಾತೆಗೆ ಮಂತ್ರಿಯಾದ ಶುಭಘಳಿಗೆಯ ಪರಿಯನ್ನು ಎನಿತು ಬಣ್ಣಿಸಿದರೂ ಕಮ್ಮಿಯೇ!

ಒಂದೆಡೆ ಬಲಗೈ ಬಂಟ ರಾಜಪ್ಪ ಇಡೀ ವಸತಿ ಖಾತೆಯನ್ನೇ ಗುತ್ತಿಗೆ ಹಿಡಿದವನಂತೆ ವಸೂಲಿಗೆ ನಿಂತರೆ ಮತ್ತೊಂದೆಡೆ ಕಂಟ್ರ್ಯಾಕ್ಟರ್ ರಾಧಾಕೃಷ್ಣ ಸ್ಲಂಬೋರ್ಡ್‌ಅನ್ನೇ ಅಡ್ಡಡ್ಡ ನುಂಗುತ್ತಿದ್ದಾನೆ. ಮಗದೊಂದೆಡೆ ಮಗ ಅರುಣ್ ಸೋಮಣ್ಣನ ಹಾವಳಿ, ಸಾಲದ್ದಕ್ಕೆ ಛೇಲಾ ವಿಶ್ವನಾಥಗೌಡನ ಎತ್ತುವಳಿ, ಆರಾಧ್ಯನೆಂಬ ಮತ್ತೊಬ್ಬ ಬಂಟನ ಕಿರಿಕಿರಿ: ಹೀಗೆ ವಸತಿ ಖಾತೆಯ ಸೋಮಣ್ಣನ ಮಂತ್ರಿಗಿರಿಯೆಂಬುದು ಏಕಕಾಲಕ್ಕೆ ಅನೇಕಾನೇಕ ಪರೋಪಜೀವಿಗಳ ಗೋಮಾಳ ದಂತಾಗಿದೆ. ಹೌಸಿಂಗ್ ಬೋರ್ಡ್ ಸಿಬ್ಬಂದಿ ಇವರೆಲ್ಲರ ಕಾಟ ತಾಳಲಾರದೆ ಅದ್ಯಾವ ಘಳಿಗೆಯಲ್ಲಿ ಸೋಮಣ್ಣನ ವಿರುದ್ಧ ಬೀದಿಗಿಳಿಯುತ್ತಾರೋ ಗೊತ್ತಿಲ್ಲ!


ಹೌಸಿಂಗ್ ಬೋರ್ಡ್‌ಗೆ ಸದ್ಯ ಜಿಟಿ ದೇವೇಗೌಡ ಅಧ್ಯಕ್ಷರಾದರೂ ವಸತಿ ಖಾತೆಯ ಅಧಿಪತಿ ಸೋಮಣ್ಣನದ್ದೇ ಅಟ್ಟಹಾಸ. ನಗರವಾಸಿ ಬಡವರಿಗೆ ಮನೆ ಕಟ್ಟಿಸಿಕೊಡು ತ್ತೇನೆಂದು ಯಡ್ಡಿ ಫೋಟೋ ಹಾಕಿ ಪ್ರಚಾರಕ್ಕಿಳಿದ ಸೋಮಣ್ಣ ಕೊಳಚಿ ನಿರ್ಮೂಲನ ಮಂಡಳಿಯ ಮೂಲಕ ಸ್ಲಂವಾಸಿಗಳ ಉದ್ಧಾರಕ್ಕೂ ಏಕಕಾಲಕ್ಕೆ ಕೈಯಿಟ್ಟರು. ಮೇಲುನೋಟಕ್ಕಿದು ನಗರದ ಜನಸಾಮಾನ್ಯರ ವಸತಿ ಉದ್ದೇಶದ ಯೋಜನೆಗಳಾದರೂ ಆಳದಲ್ಲಿ ಸೋಮಣ್ಣನ ಲೆಕ್ಕಾಚಾರವೇ ಬೇರೆಯಿತ್ತು.


ಹೊಸ ಯೋಜನೆಗಳನ್ನು ಘೋಷಿಸಿದಂತೆಲ್ಲ ಹೊಸ ಹೊಸ ಕಾಮಗಾರಿಯ ಕಾಂಟ್ರ್ಯಾಕ್ಟುಗಳು ಸೃಷ್ಟಿಯಾಗುತ್ತವೆ. ಸ್ಲಂಬೋರ್ಡ್ ಮತ್ತು ಹೌಸಿಂಗ್ ಬೋರ್ಡ್‌ನ ಕಾಂಟ್ರ್ಯಾಕ್ಟು ಗಳೆಂದರೆ ಅದು ಐವತ್ತೋ ನೂರೋ ಕೋಟಿಯ ತರಹೇ ವಾರಿ ಕಾಮಗಾರಿಗಳ ಬಾಬತ್ತು, ಮತ್ತೊಂದೆಡೆ ಹೊಸ ಮನೆಗಳ ವಿತರಣೆಯಲ್ಲೂ ಕಮೀಷನ್. ಒಂದೇ ಕಲ್ಲಿಗೆ ಎರಡೆರಡು ಹಕ್ಕಿ ಉದುರಿಸಬಹುದು. ಸೋಮಣ್ಣನ ಇಂಥ ತಲೆಗಾರಿಕೆಗೆ ತಕ್ಕಂತೆ ಚೋರ ಗುರುವಿಗೆ ಚಂಡಾಲ ಶಿಷ್ಯಗಣವೂ ಹುಟ್ಟಿಕೊಂಡಿತು. ಈ ಪೈಕಿ ಪ್ರಳಯಾಂತಕನೇ ಪಿನ್ನಾಕಲ್ ರಾಜಪ್ಪ ಉರ್ಫ್ ರೋಲ್‌ಕಾಲ್ ರಾಜಪ್ಪ.


ಸದ್ಯ ಈತನೇ ಸೋಮಣ್ಣನ ಬಲಗೈ ಎಡಗೈ ಕಣ್ಣುಕಿವಿಬಾಯಿ. ಹೌಸಿಂಗ್ ಬೋರ್ಡ್ ಸೈಟು ಬೇಕೆ? ರಾಜಪ್ಪನ ಕೈಗೆ ಐದು ಲಕ್ಷದ ಕಮೀಷನ್ ಕೊಟ್ಟರೆ ಸಾಕು, ಬೇರಾರಿಗೋ ಮಂಜೂರಾದ ಯಾವ ಹೌಸಿಂಗ್ ಬೋರ್ಡ್ ಸೈಟನ್ನಾದರೂ ಬರೆದುಕೊಡುತ್ತಾನೆ. ಬೆಂಗಳೂರಿನ ಬೇರೆ ಬೇರೆ ಭಾಗಗಳಲ್ಲಿ ಈಗಾಗಲೇ ಸಾವಿರಾರು ಸ್ಲಂಬೋರ್ಡ್ ಮನೆಗಳು ನಿರ್ಮಾಣ ಹಂತದಲ್ಲಿವೆ. ಮಾಚೋಹಳ್ಳಿಯಲ್ಲೋ, ಪಂತರಪಾಳ್ಯದಲ್ಲೋ ನಿರ್ಮಾಣ ಹಂತದಲ್ಲಿರುವ ಸಾವಿರಕ್ಕೂ ಅಧಿಕ ಮನೆಗಳ ಪೈಕಿಯೋ, ರಾಗಿಗುಡ್ಡದ ಸ್ಲಂಬೋರ್ಡ್ ಕ್ವಾಟ್ರರ್ಸ್‌ನಲ್ಲೋ ಯಾವುದೇ ಮನೆ ಬೇಕೆಂದರೂ ರಾಜಪ್ಪನ ಕೈಗೆ ಮೂರು ಲಕ್ಷ ಕೊಟ್ಟರೆ ಸಾಕು ಯಾರಿಗೆ ಬೇಕಾದರೂ ಸ್ಲಂ ಬೋರ್ಡ್ ಮನೆಗಳು ಲಭ್ಯ.

ಹಿಂದಿದ್ದ ಜೋಪಡಿಗಳನ್ನು ನೆಲಸಮ ಮಾಡಿ, ಅಲ್ಲಿ ಅಪಾರ್ಟ್‌ಮೆಂಟ್ ರೀತಿಯ ವಸತಿಗೃಹಗಳನ್ನು ನಿರ್ಮಿಸ ಲೆಂದೇ ನರ್ಮ್ ಯೋಜನೆಯ ಐನೂರು ಕೋಟಿ ರೂ.ಗಳನ್ನು ಸ್ಲಂಬೋರ್ಡ್ ಕಾದಿರಿಸಿದೆ. ನಿರ್ಮಿಸಿದ ಹೊಸ ಮನೆಗಳನ್ನು ಹಿಂದೆ ಜೋಪಡಿಗಳಲ್ಲಿದ್ದ ಫಲಾನುಭವಿಗಳಿಗಷ್ಟೇ ಮೀಸಲಿಡಬೇಕು. ಆದರೆ ಸೋಮಣ್ಣನ ಬಂಟ ರಾಜಪ್ಪನ ಕೈಚಳಕದ ಫಲವಾಗಿ ಯಾರಿಗೆ ಎಲ್ಲಿ ಬೇಕಾದರೂ ಸ್ಲಂಬೋರ್ಡ್ ಮನೆ ದಕ್ಕುತ್ತದೆ. ಕೊಳಗೇರಿಗಳ ನಿರ್ಮೂಲ ನೆಯ ಹೆಸರಲ್ಲಿ ಇಲ್ಲಿ ನಡೆಯುತ್ತಿರುವುದು ರಿಯಲ್ ಎಸ್ಟೇಟ್ ದಂಧೆ!


ಪಂತರಪಾಳ್ಯ ಸ್ಲಂ ಒಂದರಲ್ಲೇ ಇನ್ನೂರಕ್ಕೂ ಹೆಚ್ಚು ಬೇನಾಮಿಗಳಿಗೆ ರಾಜಪ್ಪ ಮನೆ ಮಾರಿಕೊಂಡಿದ್ದಾನೆ. ಮಾಚೋಹಳ್ಳಿಯ ಸ್ಲಂಬೋರ್ಡ್ ಕ್ವಾಟ್ರರ್ಸ್‌ನಲ್ಲಿ ಇನ್ನೂರೈ ವತ್ತಕ್ಕೂ ಅಧಿಕ ಮನೆಗಳನ್ನು ತಲಾ ಎರಡು ಲಕ್ಷದಂತೆ ರಾಜಪ್ಪ ಬಕರಿಗಿಟ್ಟಿದ್ದಾನೆ. ರಾಗಿಗುಡ್ಡ ಸ್ಲಂ ಬೋರ್ಡ್ ಕ್ವಾಟ್ರರ್ಸ್‌ನ್ನೂ ಸೇರಿಸಿದರೆ ಈ ರೀತಿ ರಾಜಪ್ಪನ ಗ್ಯಾಂಗ್ ಮಾರಿಕೊಂಡ ಮನೆಗಳ ಸಂಖ್ಯೆಯೇ ಐನೂರನ್ನು ದಾಟುತ್ತದೆ. ಐನೂರು ಮನೆಗಳಿಗೆ ತಲಾ ಎರಡು ಲಕ್ಷದಂತೆ ಕಿತ್ತರೂ ಇದೊಂದೇ ದಂಧೆಯಿಂದ ಸೋಮಣ್ಣನ ಗ್ಯಾಂಗ್ ಹತ್ತುಕೋಟಿ ಕಮಾಯಿಸುತ್ತದೆ. ಬಡಬಗ್ಗರ ಸ್ಲಂಮನೆಗಳನ್ನು ಉಳ್ಳವರ ಮಡಿಲಿಗೆ ಹಾಕುವ ಸೋಮಣ್ಣನ ಕೊಳಗೇರಿ ಉದ್ಧಾರದ ಅಸಲಿ ಮುಖವಾಡವಿದು.


ಛೇಲಾ ಸಿ.ಎಂ. ರಾಜಪ್ಪ


ಕೇಬಲ್ ಶ್ರೀಧರ್


ವಿಶ್ವನಾಥಗೌಡ


ಕೌನ್ಸಿಲರ್ ರೂಪಾದೇವಿ


ಸೋಮಣ್ಣ

ಸ್ಲಂಬೋರ್ಡ್ ಮನೆಗಳ ಕತೆ ಇದಾದರೆ ಹೌಸಿಂಗ್ ಬೋರ್ಡ್ ಸೈಟುಗಳದ್ದು ಇನ್ನೂ ವಿಚಿತ್ರ ಕಥೆ. ಈ ಹಿಂದೆ ಹೌಸಿಂಗ್ ಬೋರ್ಡ್ ಎಲೆಕ್ಟ್ರಾನಿಕ್ ಸಿಟಿಯಿಂದಾಚೆ ಸೂರ್ಯ ನಗರವೆಂಬ ಲೇಔಟ್ ನಿರ್ಮಿಸಿತ್ತು. ಅಲ್ಲಿ ಈಗಾಗಲೇ ಅನೇಕರಿಗೆ ಸೈಟು ಅಲಾಟಾಗಿ ಮಿಕ್ಕ ಸೈಟುಗಳಿಗೆಂದು ಅರ್ಜಿ ಹಾಕಿದವರು ಪ್ರತಿನಿತ್ಯ ಹೌಸಿಂಗ್ ಬೋರ್ಡ್‌ಗೆ ಅಲೆಯುತ್ತಲೇ ಇದ್ದಾರೆ. ನ್ಯಾಯವಾಗಿ ಸೀನಿಯಾರಿಟಿ ಪ್ರಕಾರ ಅರ್ಜಿ ಹಾಕಿದವರಿಗೇ ಸೈಟು ವಿತರಿಸಬೇಕು. ಆದರೆ ಸೋಮಣ್ಣ ಮಂತ್ರಿಯಾದ ಮೇಲೆ ರಾಜಪ್ಪ ಅವತರಿಸಿದ್ದೇ ತಡ, ಇಡೀ ಸೂರ್ಯನಗರಕ್ಕೆ ಗ್ರಹಣ ಹಿಡಿದಂತಾಯ್ತು, ಯಾರ್ಯಾರು ಅರ್ಜಿ ಹಾಕಿದ್ದರೋ ಅಂಥವರ ಅರ್ಜಿಯನ್ನೆಲ್ಲ ಬದಿಗೊತ್ತಿದ ಸೋಮಣ್ಣ ತನ್ನ ಖದೀಮ ಶಿಷ್ಯರಿಗೆ ಸೈಟು ಹಂಚಿಬಿಟ್ಟರು. ಸೋಮಣ್ಣ ಬಂಟ ಆರಾಧ್ಯನಿಗೊಂದು, ಶಿವ ಕುಮಾರ್ ಎಂಬ ಮತ್ತೊಬ್ಬ ಛೇಲಾನಿಗೆ ಇನ್ನೊಂದು, ಬಸವರಾಜು ಎಂಬ ಬಂಟನಿಗೆ ಮಗ ದೊಂದು, ಪಾಲನೇತ್ರನಿಗೊಂದು ಹೀಗೆ ಪಾಗಲ್ ಮಹೇಶ್, ಟೊಮೆಟೊ ಚಂದ್ರ, ವಿಶ್ವನಾಥ್‌ಗೌಡ, ಮಹೇಶ, ಕೋದಂಡ ಇತ್ಯಾದಿ ನೂರಕ್ಕೂ ಅಧಿಕ ಸೋಮಣ್ಣನ ಬಂಟರಿಗೆಲ್ಲ ಸೂರ್ಯನಗರದ ಸೈಟುಗಳು ಮಂಜೂರಾದವು.


ರಾಮಚಂದ್ರಮೂರ್ತಿ

ಇದಲ್ಲದೇ ಮೇಲ್ಕಂಡ ಬಂಟರ ಕಡೆಯಿಂದ ಪ್ರತಿಯೊಬ್ಬರೂ ಕನಿಷ್ಠ ಐದು ಮಂದಿಗೆ ಸೈಟುಕೊಡಿಸಿದ್ದಾರೆ. ಇಂಥ ಪ್ರತಿ ಅಲಾಟ್ ಮೆಂಟ್‌ಗೆ ಸೋಮಣ್ಣನಿಂದ ಲೆಟರ್ ಹಾಕಿಸಲೆಂದು ರಾಜಪ್ಪ ತಲಾ ಮೂರು ಲಕ್ಷದಂತೆ ಕಿತ್ತಿದ್ದಾನೆ. ಹೌಸಿಂಗ್ ಬೋರ್ಡ್ ಸೈಟು ದಂಧೆಯೊಂದರಿಂದಲೇ ರಾಜಪ್ಪ ಕಮಾಯಿಸಿದ್ದು ಮಿನಿಮಮ್ ಮೂರು ಕೋಟಿ!

ಇದು ರಾಜಪ್ಪನ ತಾಕತ್ತು, ಮೂಲತಃ ಅರಸೀಕೆರೆಯ ರಾಜಪ್ಪ ಅದ್ಯಾವತ್ತು ಸೋಮಣ್ಣನ ರಾಶಿಗೆ ಎಂಟ್ರಿಕೊಟ್ಟನೋ ಗೊತ್ತಿಲ್ಲ, ಇಲ್ಲಿಗೆ ಐದು ವರ್ಷದ ಹಿಂದೆ ಕಪ್ ಕಾಫಿಗೂ ತತ್ವಾಡುತ್ತಿದ್ದ ರಾಜಪ್ಪ

ರವೀಂದ್ರನ ರೌಡಿ ಪಾಲಿಟಿಕ್ಸ್ ಮತ್ತು ಸಿಸಿಬಿ ನಟರಾಜ್ ಮಗನಿಗೆ ಮಚ್ಚೇಟು

ವಿಜಯನಗರದ ಮಟ್ಟಿಗೆ ಸೋಮಣ್ಣನ ಪಟಾಲಂ ಎಂಥಾ ಅನಾಹುತಕಾರಿಯಾಗುತ್ತಿದೆ ಎಂಬುದಕ್ಕೆ ಜೂನ್ 29 ರ ಸಂಜೆ ಸೋಮಣ್ಣನ ಮನೆಯ ಹಿಂದಿರುವ ಗಾಂಧಿ ಪಾರ್ಕಿನಲ್ಲಿ ನಡೆದ ರೌಡಿ ದಾಳಿಯೊಂದೇ ಸಾಕು.

ಸದ್ಯ ಮೈತುಂಬಾ ಮಚ್ಚೇಟು ತಿಂದು ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ನರಳುತ್ತಿರುವ 20 ರ ಹರೆಯದ ಪವನ್ ಇದೇ ವಿಜಯನಗರದ ಕಾಂಗ್ರೆಸ್ ನಾಯಕ ಎಂ. ನಟರಾಜ್ ಯಾನೇ ಸಿಸಿಬಿ ನಟರಾಜ್‌ರ ಹಿರಿಯ ಪುತ್ರ. ನಿನ್ನೆ ಅಂದರೆ ಜೂನ್ 29 ರ ಸಂಜೆ ವಿಜಯನಗರದ ಗಾಂಧಿಪಾರ್ಕಿನಲ್ಲಿ ಕ್ರಿಕೆಟ್ ಆಡಿಕೊಂಡಿದ್ದ ಆತನ ಮೇಲೆ ಮಚ್ಚು ಲಾಂಗುಗಳಿಂದ ಅಟ್ಯಾಕ್ ಮಾಡಿದ ರಘು ಮತ್ತು ಬಾಲಿ ಇದೇ ವಿಜಯನಗರದ ಬಿಜೆಪಿ ಕೌನ್ಸಿಲರ್ ರವೀಂದ್ರನ ಬಂಟರು. ಕಾರಣವೇ ಇಲ್ಲದೇ ಪವನ್‌ನನ್ನು ಅಟ್ಟಾಡಿಸಿ ಕತ್ತರಿಸಿದ ಏಳೆಂಟು ಮಂದಿ ರೌಡಿಗಳ ತಂಡದ ನೇತೃತ್ವ ವಹಿಸಿದ್ದು ಚೆಲುವಪ್ಪ ಗಾರ್ಡನ್ನಿನ ರಘು, ಬಾಲಿ ಮತ್ತು ಮಂಜು. ಈ ಮೂವರೂ ಗೌರಮ್ಮ ಎಂಬ ಬಿಜೆಪಿ ಕಾರ್ಯಕರ್ತೆಯ ಮಕ್ಕಳು. ಕಳೆದ ಪಾಲಿಕೆ ಚುನಾವಣೆಯಲ್ಲಿ ತಾಯಿ ಗೌರಮ್ಮ ಸೋಮಣ್ಣನ ಆಣತಿ ಮೇರೆಗೆ ಹೊಸಳ್ಳಿ ವಾರ್ಡಿಗೆ ನಿಂತಿದ್ದ ಬಿಜೆಪಿಯ ಡಾ. ರಾಜು ಪರವಾಗಿ ಪ್ರಚಾರಕ್ಕಿಳಿದಿದ್ದಳು. ಈಕೆಯ ಮಕ್ಕಳಾದ ಬಾಲಿ, ರಘು, ಮಂಜ ಮತ್ತು ನಾಗ ವಿಜಯನಗರದ ಎಚ್. ರವೀಂದ್ರ ಪರವಾಗಿ ಪಾಲಿಕೆ ಎಲೆಕ್ಷನ್ನಿನಲ್ಲಿ ಬಡಿದಾಡಿದ್ದರು. ಎಲೆಕ್ಷನ್ ಮುಗಿದಿದ್ದೇ ಗೌರಮ್ಮನ ಮಕ್ಕಳ ಪೈಕಿ ಅತ್ಯಂತ ಅಪಾಯಕಾರಿಯಂತಿದ್ದ ನಾಗ ಯಾವುದೋ ಹೊಡೆದಾಟದಲ್ಲಿ ಜೈಲುಪಾಲಾದ. ಅದು ಕೌನ್ಸಿಲರ್ ರವೀಂದ್ರನ ಕಾರಣಕ್ಕಾಗೇ ನಡೆದ ಮಾರಾಮಾರಿ!

ವಿಜಯನಗರದ ರಾಜಕಾರಣದ ಮಟ್ಟಿಗೆ ಸದ್ಯ ಸೋಮಣ್ಣನ ಪಾಲಿಗೆ ಕಡುವೈರಿ ಅಂತಿದ್ದರೆ ಅದು ಸಿಸಿಬಿ ನಟರಾಜ್. ಒಬ್ಬ ನಟರಾಜ್ ಇಲ್ಲದಿದ್ದರೆ ಪ್ರಿಯಾಕೃಷ್ಣನ ವಿರುದ್ಧ ಸೋಮಣ್ಣ ಸಲೀಸಾಗಿ ಗೆಲ್ಲುತ್ತಿದ್ದ. ಸೋಮಣ್ಣನ ರೈಟ್‌ಹ್ಯಾಂಡ್ ರವೀಂದ್ರನಿಗೂ ನಟರಾಜ್ ಸಿಂಹಸ್ವಪ್ನ. ಇವತ್ತಲ್ಲ ನಾಳೆ ನಟರಾಜ್ ತನ್ನ ಕೌನ್ಸಿಲರ್‌ಗಿರಿಗೆ ಎದುರಾಳಿಯಾಗುತ್ತಾರೆಂಬ ಭೀತಿಯೂ ರವೀಂದ್ರನಿಗಿದೆ. ನಟರಾಜ್ ಒಬ್ಬರನ್ನು ಮಟ್ಟಾ ಮಾಡಿಬಿಟ್ಟರೆ ಲೇಔಟ್ ಕೃಷ್ಣಪ್ಪನವರ ಅರ್ಧಶಕ್ತಿ ಉಡುಗುತ್ತದೆ ಎಂಬ ಲೆಕ್ಕ ಹಾಕಿಯೇ ರವೀಂದ್ರ ಸ್ಕೆಚ್ ಹಾಕಿದ್ದಾನೆ.

ಆದರೆ ಗುರಿ ಇಟ್ಟಿದ್ದು ಮಾತ್ರ ನಟರಾಜ್ ಪುತ್ರ ಪವನ್‌ನ ಮೇಲೆ. ಮಗನನ್ನು ಮುಗಿಸಿಬಿಟ್ಟರೆ ನಟರಾಜ್ ಅರೆಜೀವವಾಗಿ ಬಿಡುತ್ತಾರೆಂದೇ ಭಾವಿಸಿದ ರವೀಂದ್ರನ ಪಟಾಲಂ ಅದೆಷ್ಟು ದಿನಗಳಿಂದ ಕತ್ತಿ ಮಸೆಯುತ್ತಿತ್ತೊ, ಜೂನ್ 29 ರ ಸಂಜೆ ಗಾಂಧಿ ಪಾರ್ಕಿನಲ್ಲಿ ಕ್ರಿಕೆಟ್ ಆಡುತ್ತಿದ್ದ ಪಡ್ಡೆ ಹುಡುಗರ ಮಧ್ಯೆ ಬೆಟ್ಟಿಂಗ್ ಕಾಸಿನ ವಿಷಯಕ್ಕೆ ಜಗಳವಾಗಿದೆ. ಇದಕ್ಕೂ ನಟರಾಜ್ ಪುತ್ರ ಪವನ್‌ಗೂ ಏನೇನೂ ಸಂಬಂಧವಿರಲಿಲ್ಲ. ಹೊಡೆದಾಡಿಕೊಂಡ ಹುಡುಗರು ಗಾಂಧಿ ಪಾರ್ಕ್‌ನಿಂದ ನಿರ್ಗಮಿಸಿದ ಎಷ್ಟೋ ಹೊತ್ತಿನ ನಂತರ ಅಲ್ಲಿಗೆ ಪವನ್ ಬಂದಿದ್ದಾನೆ. ಏನೂ ಗೊತ್ತಿಲ್ಲದೆ ತನ್ನ ಪಾಡಿಗೆ ತಾನು ಆಡಿಕೊಂಡಿದ್ದ ಪವನ್‌ನನ್ನು ಏಕಾಏಕಿ ಸುತ್ತುವರಿದ ಗೌರಮ್ಮನ ಮಕ್ಕಳ ಗ್ಯಾಂಗ್ ಯಾರೋ ಅದು ಗಲಾಟೆ ಮಾಡಿದ್ದು ಎಲ್ಲೋ ಅವ್ರು? ಎಂದು ಪ್ರಶ್ನಿಸಿದೆ.

ವಿಷಯವೇ ಗೊತ್ತಿಲ್ಲದ ಪವನ್ ಸಹಜವಾಗೇ 'ನನಗೇನೋ ಕೇಳ್ತೀರಾ?' ಎಂದು ರೋಪು ಹಾಕಿದ್ದಾನೆ. ಬಂದವರಿಗೆ ಇಷ್ಟೇ ಸಾಕಾಗಿತ್ತು, ಏಕಾಏಕಿ ಮಚ್ಚು ಲಾಂಗುಗಳನ್ನು ಹೊರತೆಗೆದಿದ್ದೇ ಪವನ್‌ನನ್ನು ಹಿಡಿದು ಕತ್ತರಿಸಿದ್ದಾರೆ. ತಲೆ, ಕತ್ತು, ಎದೆ, ಹೊಟ್ಟೆ, ಕಾಲು ಎಲ್ಲೆಂದರಲ್ಲಿ ಮಚ್ಚೇಟುಗಳು ಬಿದ್ದಿವೆ. ಬೆನ್ನಿಗೇ ಐದು ಕಡೆ ಇರಿತ ಬಿದ್ದಿವೆ. ಬೆನ್ನುಮೂಳೆಗೇ ಏಟು ಬಿದ್ದಿದೆ. ರಕ್ತದ ಓಕುಳಿಯಲ್ಲಿ ಬಿದ್ದು ಚೀರಾಡುತ್ತಿದ್ದ ಪವನ್‌ನನ್ನು ದಾರಿಹೋಕರರು ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ಸೇರಿಸಿದ್ದಾರೆ. ಸದ್ಯ ಪವನ್ ಪ್ರಾಣಾಪಾಯದಿಂದ ಬಚಾವಾಗಿದ್ದಾನೆ ನಿಜ. ಆದರೆ ಯಾವ ತಪ್ಪಿಗೆಂದು ಈ ಶಿಕ್ಷೆ?


ಇದು ರವೀಂದ್ರನ ಗೂಂಡಾ ರಾಜಕಾರಣದ ಒಂದು ಮುಖವಷ್ಟೆ. ಕೊಲೆಗೆ ಯತ್ನಿಸಿದ ರಘು ಮತ್ತು ಬಾಲಿ ರವೀಂದ್ರನ ಶಿಷ್ಯರೆಂಬುದಕ್ಕೆ ಯಾವುದೇ ಅನುಮಾನಗಳಿಲ್ಲ. ಹೊಡೆದ ಸಂದರ್ಭ, ಕತ್ತರಿಸಿದ ರೀತಿ ಮತ್ತು ಹಂತಕ ಪಡೆಯಲ್ಲಿದ್ದವರ ಹಿನ್ನೆಲೆ ಗಮನಿಸಿದರೆ ಇದು ಸೋಮಣ್ಣನ ಕಾರಸ್ಥಾನವಲ್ಲದೆ ಮತ್ತೇನೂ ಆಗಲು ಸಾಧ್ಯವಿಲ್ಲ. ಈಗ ವಿಜಯನಗರ ಪೊಲೀಸ್ ಠಾಣೆಗೆ ಹೊಸ ಇನ್ಸ್‌ಪೆಕ್ಟರ್ ಆಗಿಬಂದ ಚಂದ್ರಶೇಖರ್‌ಗೆ ಎಂಥಾ ಪ್ರಾಣಸಂಕಟವೆಂದರೆ ಒಂದಲ್ಲಾ ಎರಡಲ್ಲ ಮೂವರು ಪ್ರಭಾವಿಗಳನ್ನು ಸಂಭಾಳಿಸಬೇಕು. ಲೇಔಟ್ ಕೃಷ್ಣಪ್ಪನವರನ್ನು ಸಂಭಾಳಿಸುವುದಾ, ಸೋಮಣ್ಣನ ಮಾತು ಕೇಳುವುದಾ ಅಥವಾ ಇವರೆಲ್ಲರಿಗೂ ಒಂದು ಕೈ ಮೇಲೆಂಬಂತೆ ಹಾರಾಡುವ ರವೀಂದ್ರನನ್ನು ನಿಭಾಯಿಸುವುದಾ?

ಪೊಲೀಸರ ಪಾಡೇ ಈ ಗತಿಯಾದರೆ ಇನ್ನು ಜನಸಾಮಾನ್ಯರ ಪಾಡು ನಾಯಿಪಾಡು. ಇಂಥ ಮನೆಹಾಳು ರಾಜಕಾರಣದ ವಿರುದ್ಧ ಕೇವಲ ಸಿಸಿಬಿ ನಟರಾಜ್ ಮಾತ್ರವಲ್ಲ ಇನ್ಯಾರೇ ಉಸಿರೆತ್ತಿದರೂ ನಟರಾಜ್ ಮಗ ಪವನ್‌ಗಾದ ಗತಿಯೇ ಅವರಿಗೂ ಕಾದಿದೆ. ಮುಂದೊಮ್ಮೆ ತಾನೇ ವಿಜಯನಗರದ ಎಮ್ಮೆಲ್ಲೆಯಾಗಲು ಗೃಹ ಮಂತ್ರಿ ಅಶೋಕ್ ಮುಂದಿಟ್ಟುಕೊಂಡು ಹಾವಳಿಯಿಡುವ ರವೀಂದ್ರನ ಅಟ್ಟಹಾಸಕ್ಕೆ ಕೊನೆಯೆಲ್ಲಿದೆ?


ದಾಸರಹಳ್ಳಿಯ ಸ್ಲಂ


ಬೇನಾಮಿಗಳಿಗೆ ಮಾರಾಟವಾಗಿರುವ ಫ್ಲಾಟ್‌ಗಳು

ಇವತ್ತು ಕೋಟ್ಯಾಧಿಪತಿ. ನಾಗರಬಾವಿ ರಿಂಗ್ ರಸ್ತೆಯಲ್ಲಿ ಅಂಬೇಡ್ಕರ್ ಕಾಲೇಜಿನ ಪಕ್ಕದಲ್ಲೇ ಈತನ ಪಿನ್ನಾಕಲ್ ಕಾಲೇಜಿದೆ. ಅಲ್ಲಿ ನರ್ಸಿಂಗ್ ಕೋರ್ಸ್‌ನದ್ದೇ ಭಯಂಕರ ಭರಾಟೆ. ಜೊತೆಗೆ ಬೇರೆ ಬೇರೆ ಕೋರ್ಸುಗಳನ್ನೂ ನಡೆಸು ತ್ತಾನೆ. ಲೆಕ್ಚರರ್‌ಗಳಿಗೆ ಯಾವತ್ತು ನೆಟ್ಟಗೆ ಸಂಬಳ ಕೊಟ್ಟವನಲ್ಲ, ಇಲ್ಲಿನ ಲೆಕ್ಚರರ್‌ಗಳು ಕೂಡ ಆ ಮಟ್ಟದವರೇ. ಇನ್ನು ರಾಜಪ್ಪನ ಕಾಲೇಜಿನಲ್ಲಿ ಓದಿದವರನ್ನು ತಾಯಿ ಶಾರದೆ ತಾನೇ ಕಾಪಾಡ ಬೇಕು?



ಮುನ್ನರಸಪ್ಪ

ಒಂದೆಡೆ ಕಾಲೇಜು, ಇನ್ನೊಂದೆಡೆ ಸೋಮ ಣ್ಣನ ವಸೂಲಿ, ಮತ್ತೊಂದೆಡೆ ರಿಯಲ್ ಎಸ್ಟೇಟ್ ದಂಧೆ ಹೀಗೆ ಏಕಕಾಲಕ್ಕೆ ಅನೇಕಾನೇಕ ಅವತಾರ ಧರಿಸುವ ರಾಜಪ್ಪ ಇತ್ತೀಚೆಗೆ ಹೌಸಿಂಗ್ ಬೋರ್ಡ್ ವರ್ಗಾವರ್ಗಿ ದಂಧೆಗೂ ಕೈಯಿಟ್ಟಿ ದ್ದಾನೆ. ಮೊದಲೇ ಸೈಟು ದಂಧೆಗೆ ಕೈಯಿಟ್ಟು ಹೌಸಿಂಗ್ ಬೋರ್ಡ್ ನೌಕರರನ್ನು ಪೀಡಿಸುತ್ತಿದ್ದ ರಾಜಪ್ಪ ಈಗ ವರ್ಗಾವರ್ಗಿ ದಂಧೆಯನ್ನೂ ಶುರುಹಚ್ಚಿಕೊಂಡಿದ್ದು ವಸತಿ ಇಲಾಖೆ ನೌಕರರನ್ನು ರೊಚ್ಚಿಗೆಬ್ಬಿಸಿದೆ. ಯಾವ ಘಳಿಗೆಯಲ್ಲಿ ನೌಕರರ ಆಕ್ರೋಶ ಸ್ಫೋಟಿಸಿತ್ತೋ, ಯಾವ ಹೊತ್ತಲ್ಲಿ ಸೋಮಣ್ಣನ ಬಂಟರ ಹಾವಳಿಯ ವಿರುದ್ಧ ಸಿಬ್ಬಂದಿ ಬೀದಿಗಿಳಿಯುತ್ತಾರೋ ಗೊತ್ತಿಲ್ಲ.

ಇನ್ನು ಗೋವಿಂದರಾಜ ನಗರ ಕ್ಷೇತ್ರದ ವಿಷಯಕ್ಕೆ ಬಂದರೆ ಇಲ್ಲೂ ರಿಯಲ್ ಎಸ್ಟೇಟ್ ಖದೀಮರದ್ದೇ ಹಾವಳಿ. ಹಳೇ ರೌಡಿ ಕೇಬಲ್ ಶ್ರೀಧರ, ಮಹಿಳಾನಾಯಕಿ ಗಂಗಮ್ಮ, ದಾಸರಹಳ್ಳಿಯ ಕೌನ್ಸಿಲರ್ ರೂಪಾದೇವಿ, ಆಕೆಯ ಗಂಡ ವಿಜಿ. ಈತನ ತಂದೆ ಮುನ್ನರಸಪ್ಪ, ಈತನ ಅಳಿಯ ತ್ಯಾಗರಾಜು ಇತ್ಯಾದಿ ಸೋಮಣ್ಣನ ಬಂಟರೆಲ್ಲ ದಿಕ್ಕಿಗೊಬ್ಬರಂತೆ ಹಾವಳಿಯಿಡುತ್ತಿದ್ದಾರೆ.

ದಾಸರಹಳ್ಳಿ ಮುನ್ನರಸಪ್ಪನ ಸೊಸೆ ರೂಪಾದೇವಿ ಅದ್ಯಾವ ಗಳಿಗೆಯಲ್ಲಿ ಬಿಜೆಪಿಯಿಂದ ಗೆದ್ದು ಪಾಲಿಕೆಗೆ ವಕ್ಕರಿಸಿದಳೋ ಆವತ್ತಿನಿಂದ ಕೈಗಾರಿಕಾನಗರ, ಜೈಮುನಿರಾವ್ ಸರ್ಕಲ್, ದಾಸರಹಳ್ಳಿ ವಾಸಿಗಳ ನೆಮ್ಮದಿಗೆ ಬೆಂಕಿಬಿದ್ದಿದೆ. ಬೇರೆಲ್ಲ ಕೌನ್ಸಿಲರ್‌ಗಳು ತಂತಮ್ಮ ಏರಿಯಾಗಳ ಕಂಟ್ರಾಕ್ಟರ್‌ಗಳಿಂದ ಹತ್ತುಪರ್ಸೆಂಟ್ ಕಮೀಷನ್ ಕಿತ್ತರೆ ತಾಯಿ ರೂಪಾದೇವಿ ಹದಿನೈದು ಪರ್ಸೆಂಟ್ ಸುಲಿಯು ತ್ತಾಳೆ. ಸೋಮಣ್ಣನ ಬಂಟ ಮುನ್ನರಸಪ್ಪನ ಮಗ ವಿಜಿ ಕುಮಾರನೇ ಈಕೆಯ ಗಂಡ. ನೀಟಾಗಿ ಡ್ರೆಸ್ ಮಾಡಿಕೊಂಡು ಯಾವುದೋ ಟೂತ್‌ಪೇಸ್ಟಿಗೆ ಜಾಹೀರಾತು ಕೊಟ್ಟಂತೆ ಹಲ್ಲು ಕಿರಿಯುವುದನ್ನು ಬಿಟ್ಟರೆ ರೂಪಾ ದೇವಿ ದಾಸರಹಳ್ಳಿಗೆ ಉಪಕರಿ ಸಿದ್ದು ರಿಯಲ್ ಎಸ್ಟೇಟ್ ಲೂಟಿಯ ಮೂಲಕವೇ!

ಸದ್ಯ ಕೌನ್ಸಿಲರ್ ರೂಪಾ ದೇವಿ ಗ್ಯಾಂಗಿನ ಹಪಾಹಪಿಗೆ ತುತ್ತಾಗಿರುವುದು ಇದೇ ದಾಸರ ಹಳ್ಳಿಯ ಗುಂಡೂರಾವ್ ಕಾಲೋನಿ. ಇಲ್ಲಿ ಸ್ಲಂಬೋರ್ಡ್ 210 ಮನೆಗಳ ಅಪಾರ್ಟ್ ಮೆಂಟ್ ನಿರ್ಮಿಸುತ್ತಿದೆ. ಹಿಂದಿದ್ದ ಜೋಪಡಿಗಳನ್ನು ನೆಲಸಮ ಮಾಡಿ ಅಲ್ಲಿದ್ದ 204 ಮಂದಿ ಗುಡಿಸಲು ವಾಸಿಗಳಿಗೆ ನರ್ಮ್ ಯೋಜನೆಯಡಿ ವಸತಿ ಕಲ್ಪಿಸುವ ಯೋಜನೆಯಿದು. ಗುಡಿಸಲುಗಳಿದ್ದ ಜಾಗದಲ್ಲಿ ಹೊಸ ಕಟ್ಟಡ ಸಮುಚ್ಚಯ ನಿರ್ಮಾಣಗೊಳ್ಳುತ್ತಿರುವುದರಿಂದ ಅಲ್ಲಿದ್ದ ಅಷ್ಟೂ ಗುಡಿಸಲುವಾಸಿಗಳನ್ನು ಸದ್ಯ ಪಕ್ಕದಲ್ಲೇ ಖಾಲಿ ಬಿದ್ದಿದ್ದ ಎರಡೆಕರೆ ಬಿಡಿಎ ನಿವೇಶನಕ್ಕೆ ಸ್ಥಳಾಂತರಿಸಲಾಗಿದೆ. ವಸತಿ ಕಾಂಪ್ಲೆಕ್ಸ್ ಕಾಮಗಾರಿ ಮುಗಿದಿದೆಯಾದ್ದರಿಂದ ಎರಡೆಕರೆ ಬಿಡಿಎ ಆಸ್ತಿಯಲ್ಲಿದ್ದ ಗುಡಿಸಲು ವಾಸಿಗಳನ್ನೆಲ್ಲ ಹೊಸಕಟ್ಟಡಕ್ಕೆ ಸ್ಥಳಾಂತರಿಸಿ ಎರಡೆಕರೆ ಸ್ವತ್ತನ್ನು ಮತ್ತೆ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಡಬೇಕು.


ರಾಜಪ್ಪನ ಪಿನ್ನಾಕಲ್ ಕಾಲೇಜ್

ಆದರೆ ಕೌನ್ಸಿಲರ್ ರೂಪಾ ದೇವಿ ಮತ್ತು ಸೋಮಣ್ಣನ ಸಹಪಾಠಿಗಳ ರಿಯಲ್ ಎಸ್ಟೇಟ್ ದಂಧೆಗೆ ಸ್ಲಂಬೋರ್ಡ್‌ನ ಕಾಂಪ್ಲೆಕ್ಸ್ ಮತ್ತು ಪಕ್ಕದ ಬಿಡಿಎ ಸ್ವತ್ತುಗಳೆರಡೂ ಸಾಕಾಗುತ್ತಿಲ್ಲ. ಹೊಸ ಕಾಂಪ್ಲೆಕ್ಸ್‌ಗೆ ಮೂಲ ಫಲಾನುಭವಿಗಳನ್ನು ವಂಚಿಸಿ ಯಾರ್‍ಯಾರನ್ನೋ ಕರೆತಂದು ತೂರಿಸಲಾಗುತ್ತಿದೆ. ಯಾರ್‍ಯಾರು ರೂಪಾದೇವಿ ಗ್ಯಾಂಗಿಗೆ ಎರಡು ಲಕ್ಷ ಕೊಡುತ್ತಾರೋ ಅಂಥವರಿಗೇ ಹೊಸ ಮನೆ. ಇವರ್‍ಯಾರೂ ನಿರ್ಗತಿಕರಲ್ಲ. ಹೀಗೆ ಯಾರ್‍ಯಾರಿಗೋ ಹೊಸ ಮನೆಗಳನ್ನು ಮಾರಿಕೊಂಡಿದ್ದರಿಂದಾಗಿ ಮೂಲ ಫಲಾನುಭವಿಗಳಿಗೆ ಬೀದಿಯೇ ಗತಿಯಾಗಿದೆ. ಈ ಪೈಕಿ ಬಹುತೇಕರು ದಲಿತ ವಿಧವೆಯರು. ಹಿಂದಿದ್ದ ಗುಡಿಸಲೂ ಇಲ್ಲ, ಹೊಸ ಮನೆಯೂ ಇಲ್ಲ. ಸೋಮಣ್ಣನ ಬಂಟರಿಗೆ ತಿನ್ನಿಸಲು ಕಾಸು ಇಲ್ಲವೇ ಇಲ್ಲ.

ಗುಂಡೂರಾವ್ ಕಾಲೋನಿಯ ಬಡವರ ಪಾಡು ಹೀಗಾದರೆ ಇನ್ನು ಹೊಸ ಕ್ವಾಟ್ರಸ್ಸಿಗೆ ಬಂದವರದ್ದು ನಾಯಿಪಾಡು. ಈ ಹಿಂದೆ ಅಂಗನವಾಡಿ ಮತ್ತು ಸಮಾಜಕಲ್ಯಾಣ ಇಲಾಖೆಯ ಕಚೇರಿಗೆಂದು ಕಾಲೋನಿಯಲ್ಲಿ ಮೀಸಲಾಗಿದ್ದ ಜಾಗವನ್ನೂ ರೂಪಾದೇವಿ ಗ್ಯಾಂಗ್ ಮಾರಿ ಕೊಂಡಿದೆ. ಮೂಲ ಫಲಾನು ಭವಿಗಳ ಪೈಕಿ ಸುಮಾರು ಇಪ್ಪತ್ತು ಮಂದಿ ವಿಧವೆಯರ ಮನೆಗಳನ್ನು ತಲಾ ಎರಡು ಲಕ್ಷದಂತೆ ರೂಪಾದೇವಿ ಮಾರಿಕೊಂಡಿದ್ದಾಳೆ. ಇನ್ನು ಪಕ್ಕದ ಬಿಡಿಎ ಸೊತ್ತಿನಲ್ಲಿದ್ದ ಗುಡಿಸಲುಗಳು ಸಹಜವಾಗೇ ಖಾಲಿಯಾಗಬೇಕಲ್ಲವೆ?

ಹಾಗಾಗಿಲ್ಲ. ಖಾಲಿ ಬಿದ್ದ ಬಿಡಿಎ ಸ್ವತ್ತಿನ ಗುಡಿಸಲು ಗಳಿಗೆ ಹೊಸಬರನ್ನು ತಂದು ಸೇರಿಸುವುದು ಮತ್ತೊಂದು ದಂಧೆ. ಇಲ್ಲೂ ಅಷ್ಟೆ, ಬಿಡಿಎ ನಿವೇಶನದ ಖಾಲಿ ಶೆಡ್ ಒಂದಕ್ಕೆ ಕನಿಷ್ಠ ಎರಡು ಲಕ್ಷ ಕೊಡಬೇಕು. ಕಟ್ಟಿದ ಹೊಸ ಕಟ್ಟಡದ ಮನೆಗಳಿಂದಲೂ ದುಡ್ಡು, ಖಾಲಿ ಬಿದ್ದಿದ್ದ ಬಿಡಿಎ ಸೊತ್ತಿನ ಶೆಡ್ಡುಗಳಿಂದಲೂ ದುಡ್ಡು. ಎರಡೆಕರೆ ಬಿಡಿಎ ಸೊತ್ತನ್ನೂ ಕಬಳಿಸಿ ದಂತಾಯ್ತು, ಕಟ್ಟಿದ ಸ್ಲಂ ಬೋರ್ಡ್ ಮನೆಗಳನ್ನೂ ಮಾರಿಕೊಂಡಂತಾಯ್ತು.

ಈ ಬಗ್ಗೆ ಸೋಮಣ್ಣನಿಗೆ ಜನ ಕೌನ್ಸಿಲರ್ ರೂಪಾದೇವಿ ವಿರುದ್ಧ ದೂರು ಕೊಟ್ಟರೆ ಸೋಮಣ್ಣ ವಾಚಾಮ ಗೋಚರ ಬೈದು ಹೊರ ದಬ್ಬುತ್ತಿದ್ದಾನೆ. ಖಾಲಿ ಬಿದ್ದಿದ್ದ ಬಿಡಿಎ ಸೊತ್ತಿನ ಸುತ್ತಮುತ್ತಲ ನಾಗರಿಕರೆಲ್ಲ ತಮ್ಮ ಮಕ್ಕಳಿಗೆ ಆಟದ ಮೈದಾನವಾಗಿದ್ದ ಭೂಮಿ ಕಬಳಿಕೆಯಾಗಿದ್ದನ್ನು ಕಂಡು ಸೋಮಣ್ಣನಿಗೆ ಹಿಡಿಶಾಪ ಹಾಕುತ್ತಾರೆ. ಈ ರೀತಿ ಯಾರ್‍ಯಾರೂ ರೂಪಾದೇವಿ ಮತ್ತು ಸೋಮಣ್ಣನ ವಿರುದ್ಧ ತಿರುಗಿಬೀಳು ತ್ತಾರೋ ಅಂಥವರನ್ನು ಬೆದರಿಸುವುದು ಕೇಬಲ್ ಶ್ರೀಧರನ ಗ್ಯಾಂಗ್.


ಕೇಬಲ್ ಶ್ರೀಧರನ ಪಾಲಿಗೆ ಸದ್ಯ ಸೋಮಣ್ಣನೇ ಗಾಡ್‌ಫಾದರ್. ದಾಸರಹಳ್ಳಿಯ ಬಹುಪಾಲು ಕಾಮಗಾರಿಗಳೆಲ್ಲ ಈತನ ಶಿಷ್ಯರಿಗೇ ಮೀಸಲು. ಸಾಲದ್ದಕ್ಕೆ ಯಾರ್‍ಯಾರದೋ ಕೇಬಲ್ಲಿಗೂ ಶ್ರೀಧರ ಕೈಹಾಕಿದ್ದಾನೆ. ಅಕ್ಕಪಕ್ಕದ ಕೇಬಲ್ ಕುಳಗಳ ಕನೆಕ್ಷನ್ನುಗಳನ್ನು ತನ್ನ ರೌಡಿಪಡೆಯನ್ನು ಛೂ ಬಿಟ್ಟು ಕತ್ತರಿಸಿ ಅದನ್ನು ತಾನು ಆಕ್ರಮಿಸಿಕೊಳ್ಳುವುದು ಈತನ ಹುನ್ನಾರ. ದಾಸರಹಳ್ಳಿಯ ಈತನ ಅಡ್ಡೆಯಲ್ಲಿ ದಿನದ ಯಾವುದೇ ಗಳಿಗೆಯಲ್ಲೂ ಎರಡು ಡಜನ್ನುಗಳಷ್ಟು ರೌಡಿ ಹಿಂಡಿರುತ್ತದೆ. ಹೆಣ್ಣುಮಕ್ಕಳು ರಸ್ತೆಗೆ ಬರುವುದೇ ಇಲ್ಲಿ ಮಹಾಪಾಪ. ಇನ್ನು ರೌಡಿ ಹಾವಳಿಯ ವಿರುದ್ಧ ನಾಗರಿ ಕರು ಕಾಮಾಕ್ಷಿಪಾಳ್ಯ ಪೊಲೀ ಸರಿಗೆ ದೂರು ಕೊಡ ಬೇಕೆಂದರೆ ಕಾಮಾಕ್ಷಿಪಾಳ್ಯದ ಇನ್ಸ್‌ಪೆಕ್ಟರ್ ರಾಮಚಂದ್ರ ಯ್ಯನವರೇ ಶ್ರೀಧರನ ಅಡ್ಡೆಗೆ ಬಂದು ಹರಟೆ ಹೊಡೆಯು ತ್ತಿರುತ್ತಾರೆ.

ಸೋಮಣ್ಣನ ಸಾಮ್ರಾಜ್ಯದಲ್ಲಿ ಬಡವರ ಗುಡಿಸಲಿಗೂ ರಕ್ಷಣೆಯಿಲ್ಲ, ಸ್ಲಂಬೋರ್ಡ್ ಮನೆಗಳಿಗೂ ಉಳಿಗಾಲವಿಲ್ಲ. ಕೊನೆಗೆ ಹೆಣ್ಣುಮಕ್ಕಳ ಮಾನಕ್ಕೂ ಮೂರು ಕಾಸಿನ ಕಿಮ್ಮತ್ತಿಲ್ಲ.

-ರಾ. ಸೋಮನಾಥ್


ಕೋಮುವಾದಿ ಸರ್ಕಾರ ಮತ್ತು ಭಾವೈಕ್ಯತೆಯ ಭಜನೆ!

ಪೂರ್ತಿ ಹಾಳಾದ ಹೆಸರಿಗೆ ಪಾಲಿಷ್ ಮಾಡಲು ಮುಖ್ಯಮಂತ್ರಿ ಯಡಿಯೂರಪ್ಪ ನಡೆಸುತ್ತಿರುವ ಕಸರತ್ತುಗಳು ನಿಜಕ್ಕೂ ಕರುಣಾಜನಕವಾಗಿವೆ. ಹೊಸಾ ಕೊಚ್ಚೆಗೆ ಎರಡೂ ಕಾಲಿಟ್ಟು ಹಳೇ ಕಲೆ ಹೋಗಲಾಡಿಸಲು ಹೆಣಗುವ ಮೂರ್ಖ ಯಡ್ಡಿ ಸದ್ಯ ಕರ್ನಾಟಕದ ಭಾವೈಕ್ಯತೆಯ ಬಗ್ಗೆ ಶ್ಯಾನೆ ತಲೆಕೆಡಿಸಿಕೊಂಡಿದ್ದಾರೆ. ಮುಖ್ಯಮಂತ್ರಿಗಳು ಬಲು ಅವಸರದಿಂದ ರಾಜ್ಯ ಭಾವೈಕ್ಯ ಮಂಡಳಿ ಅಂತೊಂದನ್ನು ರಚಿಸಿ ಮಹಾತ್ಮನ ಪೋಸು ಕೊಡ ಲಾರಂಭಿಸಿದ್ದಾರೆ.



ಎಲ್ಲ ಜನವರ್ಗ, ಧರ್ಮಗಳವರೂ ಸಹಬಾಳ್ವೆಯಿಂದ ಬದುಕುತ್ತಿರುವ ಕರ್ನಾ ಟಕದಲ್ಲಿ ಕೆಲವು ಸಮಾಜಘಾತುಕ ಶಕ್ತಿಗಳು ಸಾಮರಸ್ಯ ಹಾಳುಗೆಡವುತ್ತಿವೆ ಯಂತೆ. ಮತೀಯ ಗಲಭೆಗಳಿಗೂ ಪ್ರಯತ್ನಿಸುತ್ತಿವೆಯಂತೆ. ಇದೆಲ್ಲವನ್ನು ಹೋಗಲಾಡಿಸಿ ಧರ್ಮ-ಜಾತಿಗಳ ನಡುವೆ ಬೆಸುಗೆ ಹಾಕಲು ರಾಜ್ಯ ಭಾವೈಕ್ಯತಾ ಮಂಡಳಿಯನ್ನು ರಚಿಸಲಾಗಿದೆಯಂತೆ! ಬಿಜೆಪಿ ಸರ್ಕಾರದ ಕಡೆಯಿಂದ ಇಂಥ ಮಾತುಗಳು ತೂರಿ ಬಂದರೆ ಸಹಿಸಿಕೊಳ್ಳುವುದು ಕಷ್ಟಕರ ವಿಚಾರ. ಯಾಕೆಂದರೆ ಮೇಲೆ ಉಲ್ಲೇಖಿಸಿರುವ ಎಲ್ಲ ಘಟನಾವಳಿಗೂ ಬಿಜೆಪಿ ಮಂದಿಯೇ ಪಿತೃ ಸ್ಥಾನದಲ್ಲಿದ್ದಾರೆ.

ಅದಿರಲಿ, ಈ ಭಾವೈಕ್ಯತಾ ಮಂಡಳಿಯಾದರೂ ನೆಟ್ಟಗೆ ನಡೆದಿದೆಯಾ? ಅದರ ಸದಸ್ಯರುಗಳನ್ನು ಹೇಗೆ, ಯಾವ ಮಾನದಂಡದಲ್ಲಿ ಆಯ್ಕೆ ಮಾಡಲಾಗಿದೆ? ಸದ್ಯ ಪಟ್ಟಿ ಯಲ್ಲಿರುವ ಜನರನ್ನು ನಂಬಬಹುದೇ? ಇದರ ಉದ್ದೇಶ ಗಳಾದರೂ ಸ್ಪಷ್ಟವಾಗಿವೆಯೇ? ಮೊದಲಾದ ದಂಡಿದಂಡಿ ಪ್ರಶ್ನೆಗಳನ್ನಿಟ್ಟುಕೊಂಡು ತಲಾಷಿಗಿಳಿದರೆ ನಿಜಕ್ಕೂ ತನಗಂಟಿ ರುವ ಕೋಮುವಾದದ ಕೆಸರನ್ನು ತೊಡೆದುಕೊಳ್ಳುವ ಸರ್ಕಾರದ ಹುನ್ನಾರವನ್ನೇ ಜೀವಾಳವಾಗಿಸಿಕೊಂಡು ಸದರಿ ಮಂಡಳಿ ಜೀವಪಡೆ ದಿದೆಯೆಂಬ ವಿಚಾರ ಸ್ಪಷ್ಟ ವಾಗುತ್ತದೆ.



ಮುಖ್ಯಮಂತ್ರಿ, ಗೃಹ ಸಚಿವ, ವಕ್ಫ್ ಸಚಿವ ಹಾಗೂ ಸಮಾಜ ಕಲ್ಯಾಣ ಸಚಿವರು ಸರ್ಕಾರದ ಕಡೆ ಯಿಂದ ಈ ಮಂಡಳಿಗೆ ಪ್ರಮುಖ ಸದಸ್ಯರು. ಇನ್ನುಳಿದಂತೆ ಅಖಂಡ ಐವತ್ತು ಮಂದಿಯನ್ನು ಇದರ ಸದಸ್ಯರೆಂದು ಪಟ್ಟಿ ಮಾಡಲಾಗಿದೆ. ಇದರ ಮೊದಲ ಸ್ಥಾನದಲ್ಲಿ ವಿರಾಜಮಾನರಾಗಿರುವವರು ಪೇಜಾವರ ವಿಶ್ವೇಶತೀರ್ಥ ಸ್ವಾಮಿಗಳು. ಎರಡನೆಯ ಸ್ಥಾನ ಬಾಲ ಗಂಗಾಧರನಾಥ ಸ್ವಾಮಿಗೆ ಲಭಿಸಿದೆ. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ, ಅಜೀಂಪ್ರೇಂಜಿ, ಪ್ರಕಾಶ್ ಪಡುಕೋಣೆ, ಮಾಜಿ ಬಂಡಾಯ ಸಾಹಿತಿ ಸಿದ್ದಲಿಂಗಯ್ಯ, ಐಐಎಸ್‌ಸಿ ನಿರ್ದೇಶಕ ಸಿ.ಎನ್.ಆರ್.ರಾವ್, ಡಾ.ರಾಮದಾಸ್ ಪೈ, ಇನ್ಫಿ ನಾರಾ ಯಣನ ಹೆಂಡತಿ ಸುಧಾ ಮೂರ್ತಿ, ಕ್ರಿಕೆಟಿಗರಾದ ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ವಿಶ್ವನಾಥ್ ಮುಂತಾದವರು ಈ ಮಂಡಳಿಯ ಪ್ರಮುಖ ಸದಸ್ಯರಾಗಿದ್ದಾರೆ.

ಅನಿಲ್‌ಕುಂಬ್ಳೆ, ರಾಹುಲ್ ದ್ರಾವಿಡ್‌ನಂಥ ಕ್ರಿಕೆಟಿಗರಿಗೆ ಸಾಮಾಜಿಕ ಕಳಕಳಿ ಇರಬಹುದು. ಆದರೆ ಸದರಿ ಮಂಡಳಿ ಕೋಮುಗಲಭೆಯಂಥ ಪ್ರಕ್ಷುಬ್ಧ ಪರಿಸ್ಥಿತಿಯ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ನೀಡುವಂಥ ಜವಾಬ್ದಾರಿ ಹೊಂದಿದೆ. ದ್ರಾವಿಡ್‌ನಂಥವರಿಗೆ ಕೋಮುವಾದದ ಹುಟ್ಟು, ಹುನ್ನಾರಗಳ ಬಗ್ಗೆ ಖಂಡಿತವಾಗಿಯೂ ಆಳವಾದ ಗ್ರಹಿಕೆಯಿರಲು ಸಾಧ್ಯವಿಲ್ಲ. ಇಂಥವರ ಸಲಹೆ ಕಟ್ಟಿಕೊಂಡು ಸರ್ಕಾರ ಅದೇನು ಮಾಡುತ್ತದೋ?


ಇನ್ನು ಪೇಜಾವರರ ವಿಚಾರ, ಇವರಂತೂ ತನ್ನನ್ನು ತಾನು ಹಿಂದೂ ಧರ್ಮದ ರಕ್ಷಕ ಎಂದೇ ಬಿಂಬಿಸಿಕೊಳ್ಳುತ್ತಾ ಆಗಾಗ ಪರೋಕ್ಷವಾಗಿ ಸಾಮರಸ್ಯದ ತಲೆ ತರಿಯುತ್ತಿರುತ್ತಾರೆ. ಯಡಿಯೂರಪ್ಪನಿಗೆ ಸುತ್ತಿಕೊಂಡ ಸಂಕಟ ತನ್ನ ಕುತ್ತಿಗೆ ಸುತ್ತಲೇ ಸರಿದಂತೆ ಸಂಕಟ ಪಡುವ ಈ ಯತಿವರ್ಯರು ಕೋಮುಗಲಭೆಗಳ ನೈಜ ಸ್ಥಿತಿಗೆ ಕಣ್ಣಾಗಬಲ್ಲ ಗುಣವನ್ನೇ ಕಳೆದುಕೊಂಡಿದ್ದಾರೆ. ಹಿಂದೂ ಪರವೆಂದು ಮೈಪರಚಿ ಕೊಳ್ಳೋ ಮಂದಿಯೆಲ್ಲ ಇವರ ಕಣ್ಣಿಗೆ ಮಹಾನ್ ದೇಶಭಕ್ತರಂತೆಯೇ ಕಾಣುತ್ತಾರೆ. ಹಿಂದೂ-ಮುಸ್ಲಿಂ ಕೋಮುಗಲಭೆಯೊಂದು ನಡೆದರೆ ಪೇಜಾವರರು ಯಾರನ್ನು ಮೊದಲು ಆರೋಪಿ ಸ್ಥಾನದಲ್ಲಿಡುತ್ತಾರೆಂಬುದನ್ನು ಯಾರು ಬೇಕಾದರೂ ಊಹಿಸಬಹುದು.

ಅಷ್ಟಕ್ಕೂ ಬಿಜೆಪಿ ಸರ್ಕಾರಕ್ಕೆ ಭಾವೈ ಕ್ಯತೆಯ ಬಗ್ಗೆ ಮಾತಾಡುವ ಯಾವ ಯೋಗ್ಯತೆಯೂ ಇಲ್ಲ. 'ನಮ್ಮ ಸಮಾಜ ಬಹುಮತ, ಬಹು ಭಾಷೆಗಳ, ಬಹುಕಾಲ ದಿಂದ ಕೂಡಿದ ಸಮಾಜ. ಇಲ್ಲಿ ಎಲ್ಲರೂ ಸಮನ್ವಯದಿಂದ ಜೀವಿಸುತ್ತಿರುವಾಗ ಕೆಲವು ಸಮಾಜಘಾತುಕ ಶಕ್ತಿಗಳು ಜಾತಿಮತಗಳ ನಡುವೆ ಸಾಮರಸ್ಯ ಹಾಳು ಮಾಡಿ, ಜನರ ನಡುವೆ ತಪ್ಪು ಭಾವನೆ ಸೃಷ್ಟಿಸಿ ಮತೀಯ ಗಲಭೆಗೆ ಪ್ರಚೋದಿಸು ತ್ತಿವೆ...' ಇದು ಭಾವೈಕ್ಯತಾ ಮಂಡಳಿಯ ಪ್ರಸ್ತಾವನೆಯಲ್ಲಿರುವ ಬಡಬಡಿಕೆ.

ಅಷ್ಟಕ್ಕೂ ಧರ್ಮಧರ್ಮಗಳ ನಡುವೆ ಕೊಳ್ಳಿಯಿಕ್ಕಿರು ವುದು ಬಿಜೆಪಿಯ ಅಂಗಸಂಸ್ಥೆಗಳಾದ ಆರೆಸ್ಸೆಸ್, ಭಜರಂಗ ದಳಗಳೇ ಅಲ್ಲವೇ? ಯಡಿಯೂರಪ್ಪ ಅಧಿಕಾರಕ್ಕೇರಿರು ವುದರಲ್ಲಿ ಅಂಥ ಸಂಘಟನೆಗಳ ಪಾತ್ರ ಪ್ರಮುಖವಾಗಿದೆ. ಅಂದರೆ ಯಡ್ಡಿ ಕೂಡಾ ಸಾಮರಸ್ಯ ಕೆಡ್ಡಿಸಿದ ಪಾಪದ ಪಾಲುದಾರ!

ಹುಣಸೂರಿನ ಅಮಾಯಕ ವಿದ್ಯಾರ್ಥಿಗಳನ್ನು ಕೊಂದವರು ಕೆಎಫ್‌ಡಿಯವರೆಂಬ ಆರೋಪವಿತ್ತಲ್ಲಾ? ಈ ಬಗ್ಗೆ ಖಾಸಗಿ ಚಾನೆಲ್ಲೊಂದರಲ್ಲಿ ಚರ್ಚೆಯಿತ್ತು, ಇದರಲ್ಲಿ ಭಾಗವಹಿಸಿ ತಲೆಮಾಸಿದವನಂತೆ ಮಾತಾಡಿದಾತ ಜಯನಗರದ ಶಾಸಕ ವಿಜಯಕುಮಾರ್. ತೀರಾ ನೇರ ಪ್ರಸಾರ ಕಾರ್ಯಕ್ರಮದಲ್ಲೇ ಈತ 'ದೇಶ ಹಾಳಾಗುತ್ತಿರೋದೆ ಮುಸ್ಲಿಮರಿಂದ, ನಿಮ್ಮನ್ನೆಲ್ಲ ಪಾಕಿಸ್ತಾನಕ್ಕೋಡಿಸಬೇಕು? ಎಂಬರ್ಥದಲ್ಲಿ ಒದರಾಡಿದ! ಯಾರೋ ಒಂದಿಬ್ಬರು ಮಾಡಿದ ತಪ್ಪಿಗೆ ಇಡೀ ಸಮುದಾಯವನ್ನೇ ಗುರಿಯಾಗಿಸಿ ವಿಷ ಬಿತ್ತಲೆತ್ನಿಸಿದ ವಿಜಯಕುಮಾರ್ ಬಿಜೆಪಿ ಶಾಸಕ. ಇಂಥವರನ್ನು ಬಗಲಲ್ಲಿಟ್ಟುಕೊಂಡಿರುವ ಯಡಿಯೂರಪ್ಪ ಭಾವೈಕ್ಯತೆಯ ಬಗ್ಗೆ ಮಾತಾಡುತ್ತಿರುವುದು ಆತ ಎಂಥ ಆತ್ಮವಂಚಕನೆಂಬುದಕ್ಕೆ ಸ್ಪಷ್ಟ ಉದಾಹರಣೆ.

ಇನ್ನು ಮಂಡಳಿಯ ಪ್ರಸ್ತಾವನೆಯಲ್ಲೇ ಜಾತಿಜಾತಿಗಳ ನಡುವಿನ ಸಾಮರಸ್ಯದ ಬಗ್ಗೆ ವಿಪರೀತ ಕಾಳಜಿ ತೋರಿಸ ಲಾಗಿದೆ. ಜಾತಿಪ್ರಜ್ಞೆಯನ್ನು ಹೀನಾಯವಾಗಿ ಬಡಿದೆಬ್ಬಿಸಿದ್ದೇ ಯಡಿಯೂರಪ್ಪನೆಂಬುದು ಕಣ್ಣೆದುರಿನ ಸತ್ಯ. ಜಾತಿಯ ಆಧಾರದಲ್ಲೇ ಆಡಳಿತ ನಡೆಸುತ್ತಿರುವ, ಜಾತಿ ಓಲೈಕೆಗಾಗಿಯೇ ಬೊಕ್ಕಸ ಬರಿದಾಗಿಸುತ್ತಿರುವ ಈ ಸರ್ಕಾರಕ್ಕೆ ಜಾತಿ ಭ್ರಾತೃತ್ವದ ಬಗ್ಗೆ ಮಾತಾಡಲು ಯಾವ ಯೋಗ್ಯತೆ ಇದೆ?



ವಿಜಯಕುಮಾರ್

ರಾಜ್ಯ ಭಾವೈಕ್ಯತಾ ಮಂಡಳಿಯನ್ನು ಒಟ್ಟಾರೆ ಅವಲೋಕಿಸಿದರೆ ಇದು ಸಾಮರಸ್ಯ ಸಂಸ್ಥಾಪನೆಯ ನೆಪದಲ್ಲಿ ಓಟ್ ಬ್ಯಾಂಕ್ ಭದ್ರ ಪಡಿಸಿಕೊಳ್ಳುವ ಹುನ್ನಾರವಷ್ಟೇ. ಕೋಮುಗಲಭೆಗಳು ನಡೆದ ಸಂದರ್ಭದಲ್ಲಿ ಸರ್ಕಾರದ ಪರವಿರುವವರೇ ತುಂಬಿರುವ ಮಂಡಳಿ ಅದಕ್ಕೆ ಪೂರಕವಾಗಿಯೇ ಅಭಿಪ್ರಾಯಪಡುವುದು ನಿಶ್ಚಿತ. ಆ ನಿಟ್ಟಿನಲ್ಲಿ ನೋಡಹೋದರೆ ಇದು ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಬಚಾವಾಗುವ ಹುನ್ನಾರ.

ಈ ಸರ್ಕಾರಕ್ಕೆ ಧರ್ಮಧರ್ಮಗಳ ನಡುವಿನ ತಿಕ್ಕಾಟ, ಕೋಮುದಳ್ಳುರಿಗಳನ್ನು ತಡೆಯುವ ಇಂಗಿತವಿದ್ದರೆ ತನ್ನದೇ ಅಂಗಸಂಸ್ಥೆಗಳಾದ ಭಜರಂಗದಳ, ಆರೆಸ್ಸೆಸ್‌ನಂಥ ಸಂಘಟನೆಗಳನ್ನು ನಿಷೇಧಿಸಲಿ. ಭಾವೈಕ್ಯತಾ ಮಂಡಳಿಯಂಥ ಗಿಮಿಕ್ಕುಗಳನ್ನ ನಂಬಲು ಜನರೇನು ಮೂರ್ಖರೇ?

ಕಬ್ಬು ಬೆಳೆಗಾರರನ್ನು ಕ್ರಷ್ ಮಾಡುತ್ತಿರುವ ಬಿಜೆಪಿ ಮಂತ್ರಿಗಳು

ಕೆಲವು ತಿಂಗಳ ಕೆಳಗೆ ಪ್ರಜಾವಾಣಿಯಲ್ಲಿ ದಿನೇಶ್ ಅಮೀನ್ ಮಟ್ಟು ಅವರು 'ಶರದ್ ಪವಾರ್ ಎಂಬ ರಾಷ್ಟ್ರೀಯ ಶಾಪ' ಎಂಬ ಲೇಖನವೊಂದನ್ನು ಬರೆದಿದ್ದರು. ಪವಾರ್ ಹೇಗೆ ದೇಶದ ರಾಜಕಾರಣದಲ್ಲಿ ಸದಾ ಪವರ್‌ಫುಲ್ ಆಗಿರುತ್ತಾರೆ, ಅವರ ಭ್ರಷ್ಟತೆಯ ಆಳ, ರಾಜಕಾರಣದ ದುಷ್ಟ ವರಸೆಗಳು ಇವೆಲ್ಲವನ್ನೂ ಕಣ್ಣಿಗೆ ಕಟ್ಟುವ ಹಾಗೆ ಅದರಲ್ಲಿ ವಿವರಿಸಿದ್ದರು. ಆದರೆ ಅದರಲ್ಲಿ ಗಾಬರಿಗೊಳಿಸುವ ಮತ್ತೊಂದು ಸಂಗತಿಯನ್ನೂ ದಿನೇಶ್ ಬಿಚ್ಚಿಟ್ಟಿದ್ದರು. ಅದು ಕೇಂದ್ರ ಕೃಷಿ ಸಚಿವರಾದ ಶರದ್‌ಪವಾರ್ ಕೃಷಿ ಕ್ಷೇತ್ರವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಸಾವಿರಾರು ಕೋಟಿ ಲಾಭವನ್ನು ಮಾಡುತ್ತಿರುವ ಕುರಿತದ್ದು. ಇವತ್ತು ಈ ದೇಶದ ಒಟ್ಟಾರೆ ಆರ್ಥಿಕತೆಯಲ್ಲಿ ಸೇವಾವಲಯದ್ದೇ ಅತ್ಯಂತ ಹೆಚ್ಚಿನ ಪಾಲು ಇದೆ, ಅದರ ನಂತರ ಇತರ ಕೈಗಾರಿಕಾ ಕ್ಷೇತ್ರದ್ದು ನಂತರದ್ದು ಕೃಷಿ ಕ್ಷೇತ್ರ. ಆದರೂ ನೂರ ಇಪ್ಪತ್ತು ಕೋಟಿ ಜನಬಾಹುಳ್ಯವಿರುವ ದೇಶದಲ್ಲಿ ಶೇ.65ರಷ್ಟು ಜನರು ಗ್ರಾಮೀಣ ಭಾಗದಲ್ಲಿ ಮತ್ತು ಕೃಷಿ ಆಧಾರಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆಂದರೆ ಅದರ ಅಗಾಧತೆ ಕಡಿಮೆಯೇನಲ್ಲ, ರಿಲೆಯನ್ಸ್ ಅಂಬಾನಿಗಳು, ಟಾಟಾಗಳು ದುಡಿಯುವಷ್ಟು ಅಲ್ಲದಿದ್ದರೂ, ದೇಶದ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸಲು ಸಾಧ್ಯವಾಗುವಷ್ಟು ಹಣವನ್ನು ಕೃಷಿಯಲ್ಲೂ ದುಡಿಯಬಹುದು. ಶರದ್‌ಪವಾರ್ ಮಾಡುತ್ತಿರುವುದು ಅದನ್ನೇ.


ಕುರುಬೂರು ...ತಕುಮಾರ್

ದೇಶದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾದ ಕಬ್ಬಿನ ಸುತ್ತ ಹರಡಿಕೊಂಡಿರುವ ಸಕ್ಕರೆ ಹಾಗೂ ಇನ್ನಿತರ ಉದ್ದಿಮೆಗಳಲ್ಲಿ ಯಾರ್‍ಯಾರಿದ್ದಾರೆ ಎಂಬುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಕರ್ನಾಟಕದ ಸಕ್ಕರೆ ಕಾರ್ಖಾನೆಗಳ ಒಡೆತನ ಯಾರ್‍ಯಾರದ್ದಿವೆ ಎಂದು ನೋಡಿದರೆ ಆತಂಕವೆನಿಸುತ್ತದೆ. ಭಾರೀ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಸಚಿವರಾದ ಲಕ್ಷ್ಮಣ ಸವದಿ, ಉಮೇಶ್ ಕತ್ತಿ, ಬಿಜೆಪಿ ಸಂಸದರಾದ ಸಿದ್ದೇಶ್, ಪ್ರಭಾಕರ ಕೋರೆ ಇವರೆಲ್ಲರೂ ಸಕ್ಕರೆ ಕಾರ್ಖಾನೆ ಮಾಲೀಕರೇ. ಇವರ ಜೊತೆಗೆ ತಲಾ ಮೂರು ಸಕ್ಕರೆ ಕಾರ್ಖಾನೆಗಳನ್ನು ಹೊಂದಿರುವ ಕಾಂಗ್ರೆಸ್‌ನ ಶಾಮನೂರು ಶಿವಶಂಕರಪ್ಪ ಹಾಗೂ ಸಿದ್ದು ನ್ಯಾಮಗೌಡರಿದ್ದಾರೆ. ಉತ್ತರ ಕರ್ನಾಟಕದ ಪ್ರಭಾವಿ ರಾಜಕಾರಣಿಗಳಾದ ಜಾರಕಿಹೊಳಿ ಕುಟುಂಬ, ಬಂಡೆಪ್ಪ ಕಾಶೆಂಪುರ, ಡಿ.ಬಿ.ಇನಾಂದಾರ್, ಭೀಮಣ್ಣ ಖಂಡ್ರೆ, ಗುರುಪಾದಪ್ಪ ನಾಗಮಾರಪಳ್ಳಿ ಇವರೆಲ್ಲರೂ ಸಕ್ಕರೆ ಕಾರ್ಖಾನೆಯನ್ನು ಹೊಂದಿದ್ದಾರೆ. ಕೇಂದ್ರ ಸಚಿವ ಜೈಪಾಲ್‌ರೆಡ್ಡಿಯ ಮಗನದ್ದೂ ಒಂದು ಕಾರ್ಖಾನೆ ಇದೆ. ಒಟ್ಟು 62 ಕಾರ್ಖಾನೆಗಳಲ್ಲಿ ಸುಮಾರು 22ರಷ್ಟು ರಾಜಕೀಯ ಧುರೀಣರದ್ದೇ ಆಗಿವೆ.


ಇಂದು ಸರ್ಕಾರೀ ವಲಯದಲ್ಲಿರುವ ಸಕ್ಕರೆ ಕಾರ್ಖಾನೆಗಳೆಂದರೆ ಮೈಷುಗರ್ (ಸದ್ಯಕ್ಕೆ ಪಾಂಡವಪುರ ಸಹಕಾರಿ ಕಾರ್ಖಾನೆಯೂ ಇದರ ವಶದಲ್ಲೇ ಇದೆ), ಭದ್ರಾವತಿಯ ಎಂಪಿಎಂ ಕಾರ್ಖಾನೆಗಳು ಮಾತ್ರ. ಸಹಕಾರಿ ಸಕ್ಕರೆ ಕಾರ್ಖಾನೆಗಳೆಲ್ಲವೂ ಮಲಗಿವೆ. ಉಳಿದಂತೆ ದೊಡ್ಡ ಬಂಡವಾಳಶಾಹಿಗಳಷ್ಟೇ ಕಾರ್ಖಾನೆಗಳನ್ನು ನಡೆಸುತ್ತಿರುವುದು. ಇದರಲ್ಲಿ ಈ ಕ್ಷೇತ್ರದ ದೊಡ್ಡ ತಿಮಿಂಗಿಲಗಳಾದ ರೇಣುಕಾ ಶುಗರ್ಸ್ (ಕರ್ನಾಟಕದಲ್ಲಿ 3 ಕಾರ್ಖಾನೆ ಹೊಂದಿರುವ ಈ ಕಂಪೆನಿ ಬ್ರೆಜಿಲ್ ದೇಶದಲ್ಲೂ ಸಕ್ಕರೆ ಕಾರ್ಖಾನೆ ನಡೆಸುತ್ತದೆ), ಬನ್ನಾರಿಯಮ್ಮನ್ ಕಂಪೆನಿ (ತಮಿಳುನಾಡಿನ ಈ ಕಂಪೆನಿ ಕರ್ನಾಟಕದಲ್ಲೇ 2 ಕಾರ್ಖಾನೆಗಳನ್ನು ಹೊಂದಿದೆ), ಐಸಿಎಲ್ ಇತ್ಯಾದಿಗಳು ಸಕ್ಕರೆ ಉದ್ಯಮದಲ್ಲಿವೆ. ಒಂದು ಕಾಲದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಮೈಷುಗರ್ ಮತ್ತು ಪಿಎಸ್‌ಎಸ್‌ಕೆಗಳು ಮಾತ್ರವಿದ್ದರೆ, ಇಂದು ಅವೆರಡೂ ದುಸ್ಥಿತಿಯಲ್ಲಿದ್ದು ಚೆನ್ನಾಗಿ ನಡೆಯುತ್ತಿರುವ ಮೂರು ಖಾಸಗಿ ಕಾರ್ಖಾನೆಗಳಿವೆ. ಕೃಷ್ಣಾ ನೀರಿನ ಅಚ್ಚುಕಟ್ಟಿನಲ್ಲಿ ಕಬ್ಬು ಬೆಳೆಯುತ್ತಿರುವ ಬಾಗಲಕೋಟೆ ಜಿಲ್ಲೆಯಲ್ಲಿ 9 ಕಾರ್ಖಾನೆಗಳಿವೆ.

ರೈತ ಕೇಂದ್ರಿತವಾಗಿರಬೇಕಿದ್ದ ಇಡೀ ಉದ್ಯಮ ಖೂಳ ಕಂಪೆನಿಗಳ ಕೈಯಲ್ಲಿವೆ. ಅವುಗಳ ಚುಕ್ಕಾಣಿ ಹಿಡಿದಿರುವವರು ಪ್ರಭಾವೀ ರಾಜಕಾರಣಿಗಳಾಗಿದ್ದಾರೆ. ಸಕ್ಕರೆ ಬೆಲೆಯನ್ನು ನಿರ್ಧರಿಸುವಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಮಹತ್ವದ ಪಾತ್ರವಿದ್ದು, ಅದನ್ನು ಶರದ್‌ಪವಾರ್ ಸಕ್ಕರೆ ಲಾಬಿಯ ಪರವಾಗಿ ತಿರುಗಿಸುವಷ್ಟು ಸಶಕ್ತರಾಗಿದ್ದರೆ, ಕರ್ನಾಟಕದಲ್ಲಿ ರಾಜ್ಯ ಸರ್ಕಾರದ ಮಟ್ಟದಲ್ಲಿ ಈ ಕೆಲಸವನ್ನು ನಿರಾಣಿ, ಕತ್ತಿ, ಸವದಿಗಳು ಮಾಡುತ್ತಾರೆ.

ಇದರ ಫಲವಾಗಿ ಇಂದು ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ನ್ಯಾಯಯುತ ಬೆಲೆಯನ್ನು ಕೇಳಿ ಹೋರಾಟ ಮಾಡುವುದು ಅನಿವಾರ್ಯವಾಗಿರುವುದರಿಂದ ಕಬ್ಬು ಬೆಳೆಗಾರರ ಸಂಘ ಮತ್ತು ಕರ್ನಾಟಕ ರಾಜ್ಯ ರೈತಸಂಘದ ನೇತೃತ್ವದಲ್ಲಿ ಬೀದಿಗಿಳಿದಿದ್ದಾರೆ. ಮಠಾಧೀಶರನ್ನು ಓಲೈಸುವುದರಲ್ಲಿ, ಆಣೆ-ಪ್ರಮಾಣಗಳನ್ನು ಮಾಡುವುದರಲ್ಲಿ, ಡೀನೋಟಿಫಿಕೇಷನ್‌ಗಳಲ್ಲಿ ಸಿಎಂ ಯಡ್ಡಿ ಬ್ಯುಸಿ. ಅವರ ಸಂಪುಟದ ಸಕ್ಕರೆ ಸಚಿವರುಗಳು ರೈತರ ತಲೆ ಮೇಲೆ ಚಪ್ಪಡಿ ಹಾಕಲು ಬೇಕಾದ್ದನ್ನೆಲ್ಲ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಕ್ಕರೆ ಉದ್ದಿಮೆಯ ವಾಸ್ತವವನ್ನು ಮತ್ತು ರೈತರ ಅಸಲೀ ಸಮಸ್ಯೆ ಏನೆಂಬುದನ್ನು 'ಪತ್ರಿಕೆ'ಯ ಓದುಗರ ಮುಂದೆ ಇಡುವುದು ಅಗತ್ಯವಾಗಿದೆ.

ಪ್ರತೀ ಸಾರಿ ಕಬ್ಬನ್ನು ಅರೆಯುವ ಸೀಸನ್ ಜುಲೈನಿಂದ ಆರಂಭವಾಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಜುಲೈ ಆಗಸ್ಟ್‌ನಲ್ಲಿ ಕಡ್ಡಾಯವಾಗಿ ಆರಂಭವಾದರೆ, ಮುಂಬೈ ಕರ್ನಾಟಕದಲ್ಲಿ ಸ್ವಲ್ಪ ತಡವಾಗುತ್ತದೆ. ಹೈದ್ರಾಬಾದ್ ಕರ್ನಾಟಕದಲ್ಲಿ ನವೆಂಬರ್ ಹೊತ್ತಿಗೆ ಚಾಲೂ ಮಾಡಲಾಗುತ್ತದೆ. ಸಕ್ಕರೆ ಕಾರ್ಖಾನೆಗಳು ಸೀಸನ್‌ಗೆ ಸಾಕಷ್ಟು ಮುಂಚೆಯೇ ರೈತರ ಹತ್ತಿರ ಕಬ್ಬನ್ನು 'ಒಪ್ಪಿಗೆ' ಮಾಡಿಸಿಕೊಳ್ಳುತ್ತವೆ. ಇದರರ್ಥ, ಆ ರೈತರು ಬೆಳೆದು ನಿಂತ ಕಾಲಕ್ಕೆ ಕಡ್ಡಾಯವಾಗಿ ಅದೇ ಕಾರ್ಖಾನೆಗೇ ಕಬ್ಬನ್ನು ಸರಬರಾಜು ಮಾಡಬೇಕು ಮತ್ತು ಕಾರ್ಖಾನೆಯವರು ತಮ್ಮ ದಿನನಿತ್ಯದ ಸಾಮರ್ಥ್ಯ ಮತ್ತು ಬೆಳೆಯ ವಯಸ್ಸಿನ ಆಧಾರದ ಮೇಲೆ 'ಪರ್ಮಿಟ್' ಕೊಟ್ಟು ಅದನ್ನು ಕಡ್ಡಾಯವಾಗಿ ಅರೆಯುವುದು ಈ 'ಒಪ್ಪಿಗೆ'ಯ ಒಪ್ಪಂದದ ಮುಖ್ಯ ಅಂಶಗಳು. ಆದರೆ ಈ ಒಪ್ಪಂದದ ಉಲ್ಲಂಘನೆ ಎರಡೂ ಕಡೆಯಿಂದ ನಡೆಯುತ್ತದೆ. ಕಾರ್ಖಾನೆಯಲ್ಲಿ ಸರಿಯಾದ ದರ ಕೊಡದೇ ಇದ್ದು, ಮಾರುಕಟ್ಟೆಯಲ್ಲಿ ಬೆಲ್ಲದ ರೇಟು ಹೆಚ್ಚಾದರೆ, ಆಲೆಮನೆಗಳಿಗೆ ರೈತರು ಕಬ್ಬು ಸರಬರಾಜು ಮಾಡಿಬಿಡುತ್ತಾರೆ (ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಹೆಚ್ಚಿನ ಆಲೆಮನೆಗಳಿರುವುದು). ಆದರೆ ಈ ಸಾಧ್ಯತೆ ಬಹಳ ಕಡಿಮೆ. ಹೆಚ್ಚಿನ ಉಲ್ಲಂಘನೆ ಕಾರ್ಖಾನೆಯ ಕಡೆಯಿಂದ ಆಗುತ್ತದೆ. ಒಂದು ವೇಳೆ ಕಬ್ಬಿನ ಉತ್ಪಾದನೆ ಹೆಚ್ಚಿದ್ದು ಸಕ್ಕರೆಯ ಬೆಲೆ ಹೆಚ್ಚಿಲ್ಲದಿದ್ದರೆ ಕಾರ್ಖಾನೆಗಳು ಅರೆಯುವಿಕೆಯನ್ನು ಕಡಿಮೆ ಮಾಡಿ ರೈತರ ಬೆಳೆ ಒಣಗುವಂತೆ ಮಾಡುತ್ತಾರೆ. ಅಂತಿಮವಾಗಿ ರೈತರು, ಎಷ್ಟು ಬೆಲೆಯನ್ನಾದರೂ ಕೊಡಲಿ ಕಬ್ಬು ಖಾಲಿಯಾದರೆ ಸಾಕು ಎಂಬ ಪರಿಸ್ಥಿತಿ ತಲುಪುತ್ತಾರೆ. ಖಾಲಿಯಾಗದಿದ್ದರೆ ಬೆಳೆಗೆ ಬೆಂಕಿ ಇಟ್ಟು ಸುಟ್ಟುಬಿಡುತ್ತಾರೆ. ಅಂತಹ ಸಂದರ್ಭಗಳಲ್ಲಿ ತಮ್ಮನ್ನೂ ಸುಟ್ಟುಕೊಂಡು ಬಿಟ್ಟವರೂ ಎಷ್ಟೋ ಇದ್ದಾರೆ. 2006-07ನೇ ಸಾಲಿನಲ್ಲಿ 40ಕ್ಕೂ ಹೆಚ್ಚು ರೈತರು ಇದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡರು.

ಪ್ರತೀ ಸಾಲಿನಲ್ಲಿ ಕಬ್ಬನ್ನು ಅರೆಯುವ ಪ್ರಕ್ರಿಯೆ ಶುರುವಾಗುವ ಮುಂಚೆಯೇ, ಈ ಸಾಲಿನಲ್ಲಿ ಕಬ್ಬಿನ ದರ ಟನ್ನಿಗೆ ಇಂತಿಷ್ಟು ಎಂದು ಕಾರ್ಖಾನೆಗಳು ಘೋಷಿಸಬೇಕು. ಆದರೆ ಈ ನಿಯಮಕ್ಕೆ ಕಾರ್ಖಾನೆಗಳು ತಿಲಾಂಜಲಿ ಇಟ್ಟು ಸಾಕಷ್ಟು ಕಾಲವಾಯಿತು. ಕೇಂದ್ರ ಸರ್ಕಾರ ನಿಗದಿಪಡಿಸುವ ಕನಿಷ್ಠ ದರದ ಮೇಲೆ ತಾವು ಎಷ್ಟು ದರವನ್ನು ಕೊಡುತ್ತೇವೆ ಎಂಬುದನ್ನು ರಾಜ್ಯ ಸರ್ಕಾರವಾಗಲೀ, ಕಾರ್ಖಾನೆಗಳಾಗಲೀ ಘೋಷಿಸುವುದೇ ಇಲ್ಲ, ಬದಲಿಗೆ ಮುಂಗಡ ಎಂದು ಒಂದು ದರವನ್ನು ಹೇಳಿ ಅರೆಯುವಿಕೆಯನ್ನು ಆರಂಭಿಸುತ್ತಾರೆ. ಕೊನೆಯಲ್ಲಿ ಅದೇ ಅಂತಿಮ ಬೆಲೆಯೂ ಆಗಿಬಿಡುತ್ತದೆ. ಉದಾಹರಣೆಗೆ ಕಳೆದ ಸಾಲಿನಲ್ಲಿ ಟನ್ನಿಗೆ 1800 ರೂ. ಮುಂಗಡ ಎಂದು ಘೋಷಿಸಲಾಗಿತ್ತು, ರೈತರು 2,500 ರೂ. ಕೊಡಬೇಕೆಂಬ ಒತ್ತಾಯ ಮುಂದಿಟ್ಟಿದ್ದರು. ಮಾರ್ಚ್‌ನಿಂದ ಜೂನ್ ಒಳಗೆ ಅರೆಯುವಿಕೆ ನಿಂತಿತು. ಇದುವರೆಗೂ ಅಂತಿಮ ದರ ನಿಗದಿಯಾಗಿಲ್ಲ, ಈ ಮುಂಗಡ ಹಣವನ್ನೂ ಎಲ್ಲಾ ಕಡೆ ಒಂದೇ ಸಮಕ್ಕೆ ಕೊಡಲಿಲ್ಲ, ಬೀದರ್‌ನ ಕಾರ್ಖಾನೆಗಳಲ್ಲಿ ಕಟಿಂಗ್, ಟ್ರಾನ್ಸ್‌ಪೋರ್ಟ್‌ಅನ್ನು ಕಾರ್ಖಾನೆಗಳೇ ಮಾಡಿಕೊಂಡು 1500 ರೂ. (ಜೈಪಾಲ್ ರೆಡ್ಡಿ ಮಗನ ಕಾರ್ಖಾನೆ 1,400 ರೂ) ಕೊಟ್ಟರೆ, ಉತ್ತರ ಕರ್ನಾಟಕದ ಇತರೆಡೆಗಳಲ್ಲಿ 1800 ರೂ. ಕೊಡಲಾಯಿತು. ದಕ್ಷಿಣ ಕರ್ನಾಟಕದಲ್ಲಿ ಕಟಿಂಗ್ ಮತ್ತು ಟ್ರಾನ್ಸ್‌ಪೋರ್ಟ್‌ಗಳನ್ನು ರೈತರೇ ಮಾಡಿ ಬರೀ 1800 ರೂ.ಗಳನ್ನಷ್ಟೇ ಪಡೆದುಕೊಂಡಿದ್ದಾರೆ. ಇದರ ಬಗ್ಗೆ ಸಕ್ಕರೆ ಮತ್ತು ತೋಟಗಾರಿಕೆ ಸಚಿವ ಎಸ್.ಎ.ರವೀಂದ್ರನಾಥ್ ಬಾಯೇ ಬಿಡುವುದಿಲ್ಲ, ದಾವಣಗೆರೆ ಸಂಸ್ಥಾನದಲ್ಲಿ ಅಧಿಪತಿಯಾಗಿ ಕೂತು ಮಠಗಳ ಸೇವೆ ಬಿಟ್ಟು ಈತನಿಗೆ ಇನ್ನೇನೂ ಕೆಲಸ ಗೊತ್ತಿದ್ದಂತೆ ಇಲ್ಲ.


ಪುಟ್ಟಣ್ಣಯ್ಯ

ರೈತರು ಕೇಳಿದ 2,500 ರೂ. ವೈಜ್ಞಾನಿಕ ಲೆಕ್ಕಾಚಾರದ ಪ್ರಕಾರ ಕಡಿಮೆಯೇ ಹೊರತು ಹೆಚ್ಚೇನಲ್ಲ, ಒಂದು ಟನ್ ಕಬ್ಬು ಬೆಳೆಯಲು 1850 ರೂ. ವೆಚ್ಚ ತಗುಲುತ್ತದೆಂದು ಕೃಷಿ ಇಲಾಖೆಯೇ ಹೇಳುತ್ತದೆ. ಆದರೆ ಇದರಲ್ಲಿ ರೈತರು ಹಾಕುವ ಪ್ರಾರಂಭಿಕ ಬಂಡವಾಳದ ಬಡ್ಡಿಯನ್ನಾಗಲೀ, ರೈತರು ತಾವು ಬೆಳೆಯ ಸಿದ್ಧತೆಗೆ ಮತ್ತು ರಕ್ಷಣೆಗೆ ಹಾಕುವ ಶ್ರಮದ ಕೂಲಿಯನ್ನಾಗಲೀ ಸರಿಯಾಗಿ ಲೆಕ್ಕ ಹಾಕುವುದಿಲ್ಲ, ಕಬ್ಬು ಬೆಳೆಗಾರರ ಸಂಘದ ಅಂದಾಜಿನ ಪ್ರಕಾರ ಒಂದು ಟನ್‌ಗೆ ತಗಲುವ ಖರ್ಚು 2,280 ರೂ.ಗಳಾಗಿವೆ. ಹೀಗಾಗಿ ಟನ್‌ವೊಂದಕ್ಕೆ 2,500 ರೂ. ನೀಡುವುದು ನ್ಯಾಯೋಚಿತ ಮಾತ್ರವಲ್ಲ, ಅದಕ್ಕಿಂತ ಕಡಿಮೆ ನೀಡುವುದು ಅನ್ಯಾಯವಲ್ಲದೇ ಮತ್ತೇನೂ ಅಲ್ಲ.

ರೈತರು ತಮ್ಮ ಶ್ರಮ, ಬಂಡವಾಳಕ್ಕೆ ತಕ್ಕದ್ದನ್ನು ಪಡೆಯುವ ಲೆಕ್ಕಾಚಾರ ಬಿಟ್ಟುಬಿಡೋಣ. ಕಾರ್ಖಾನೆಗಳ ಲಾಭ ನಷ್ಟದ ಮೇಲೆಯೇ ಲೆಕ್ಕ ಹಾಕಿ ನೋಡೋಣ. ಒಂದು ಟನ್ ಕಬ್ಬನ್ನು ಅರೆದರೆ ಕಾರ್ಖಾನೆ ಎಷ್ಟು ಗಳಿಸುತ್ತದೆ ಎಂಬುದರ ಬಗ್ಗೆ ಹಾಲಿ ಮಾರುಕಟ್ಟೆ ಬೆಲೆಗಳ ಆಧಾರದ ಮೇಲೆ ಲೆಕ್ಕ ಹೀಗಿದೆ. ಟನ್‌ಗೆ ಶೇ.10ರ ಇಳುವರಿ ಸಿಕ್ಕರೆ (ಅಂದರೆ ಒಂದು ಟನ್ ಕಬ್ಬನ್ನು ಅರೆದರೆ ಎಷ್ಟು ಸಕ್ಕರೆ ಸಿಗುತ್ತದೆ ಎಂಬ ಆಧಾರ. ಹಾಲಿ ಸರಾಸರಿ ಇದಕ್ಕಿಂತ ಹೆಚ್ಚೇ ಇದೆ), 100 ಕೆಜಿ ಸಕ್ಕರೆ ಸಿಗುತ್ತದೆ. ಇವತ್ತಿನ ಬೆಲೆಯಲ್ಲಿ ಇದೊಂದರಲ್ಲೇ ಕಾರ್ಖಾನೆಗೆ 2,500 ರೂ. ಸಿಗುತ್ತದೆ. ಸರಾಸರಿ 300-350 ಕೆ.ಜಿ. ಸಿಪ್ಪೆ ಸಿಗುತ್ತದೆ. ಇಷ್ಟು ಸಿಪ್ಪೆಯಲ್ಲಿ ಕೋಜನರೇಷನ್ ಅಳವಡಿಸಿಕೊಂಡಿರುವ ಕಾರ್ಖಾನೆಗಳು 144 ಯೂನಿಟ್ ವಿದ್ಯುತ್ ತಯಾರಿಸುತ್ತವೆ. ಯೂನಿಟ್‌ವೊಂದಕ್ಕೆ ಸರ್ಕಾರೀ ಬೆಲೆ 5.25 ರೂ. ಇದ್ದು ಕನಿಷ್ಠ 600 ರೂ. ದೊರೆಯುತ್ತದೆ. ಟನ್ ಕಬ್ಬಿನಲ್ಲಿ ಸುಮಾರು 40 ಕೆ.ಜಿ. ಮೊಲಾಸಸ್ ಸಿಗುವುದರಿಂದ ಅದರಲ್ಲಿ ಕನಿಷ್ಠ 12 ಲೀಟರ್ ಸ್ಪಿರಿಟ್ ಸಿಗುತ್ತದೆ. ಲೀಟರ್‌ವೊಂದಕ್ಕೆ 30 ರೂ.ನಂತೆ ಈ ಬಾಬ್ತಿನಲ್ಲಿ ಕಾರ್ಖಾನೆಗೆ 360 ರೂ. ಸಿಗುತ್ತದೆ. ಇದಲ್ಲದೇ 100 ಕೆ.ಜಿ. ಮಡ್ಡಿ ಮತ್ತು 500 ಲೀಟರ್ ನೀರು ಕಾರ್ಖಾನೆಗೆ ಉಳಿಯುತ್ತದೆ. ಅಂದರೆ ರೈತರಿಗೆ 2,500 ರೂ. ಕೊಟ್ಟೂ ಕಾರ್ಖಾನೆಗೆ ಟನ್‌ವೊಂದಕ್ಕೆ ಕನಿಷ್ಠ 1000 ರೂ. ಉಳಿಯುತ್ತದೆ.


ಕಳೆದ ವರ್ಷ 59 ಕಾರ್ಖಾನೆಗಳು ಸೇರಿ ಸುಮಾರು 2 ಕೋಟಿ 78 ಲಕ್ಷ ಟನ್ ಕಬ್ಬನ್ನು ಅರೆದಿದ್ದಾರೆ. ಯಾರೂ 2,500 ಕೊಟ್ಟಿಲ್ಲ ಎಂಬುದನ್ನು ಗಮನಿಸಬೇಕು. ಅಂದರೆ ಈ ಎಲ್ಲಾ ಕಾರ್ಖಾನೆಗಳು ಸೇರಿ ಎಷ್ಟು ಲಾಭ ಮಾಡಿವೆ ಎಂಬುದನ್ನು ಊಹಿಸಬಹುದು. ಅವರ ಬಂಡವಾಳದ ಮೇಲಿನ ಬಡ್ಡಿ, ನಿರ್ವಹಣೆ ವೆಚ್ಚ ಎಲ್ಲವನ್ನೂ ತೂಗಿದರೂ 2,500 ಕೋಟಿ ಲಾಭ ಮಾಡಿದ್ದಾರೆ. ರೈತರು ತಮ್ಮ ಹೊಲದಲ್ಲಿ ತಾವು ದುಡಿದಿದ್ದಕ್ಕೆ, ಕೂಲಿಯನ್ನೂ ಕಳೆದುಕೊಂಡಿದ್ದಾರೆ.

ಈ ಕಬ್ಬಿನ ಬೆಲೆ ನಿಗದಿಗೆ ಸಂಬಂಧಿಸಿದಂತೆ ಹಲವು ನಿಯಮಗಳಿದ್ದರೂ, 2004ರ ಸುಪ್ರೀಂಕೋರ್ಟ್ ನಿರ್ದೇಶನವಿದ್ದರೂ, ಅವೆಲ್ಲವೂ ಸಕ್ಕರೆ ಲಾಬಿ ಜನಕ್ಕೆ ಕಾಲಕಸವಷ್ಟೇ. ಕೇಂದ್ರ ಕೃಷಿ ಬೆಳೆ ನಿಗದಿ ಆಯೋಗ ಕಳೆದ ಸಾಲಿನಲ್ಲಿ ಎಫ್‌ಆರ್‌ಪಿ (Fair renumeration price)ಯನ್ನು 1680 ಎಂದು ನಿಗದಿ ಮಾಡಿದ್ದರೂ, ಅದನ್ನು ಪಕ್ಕಕ್ಕೆ ತಳ್ಳಿ ಕೇಂದ್ರ ಸರ್ಕಾರ 1450 ರೂ.ಗಳನ್ನಷ್ಟೇ ನಿಗದಿ ಮಾಡಿತ್ತು, ಇದರ ಆಧಾರದ ಮೇಲೆ SAP (State advisory price) ನಿಗದಿಪಡಿಸಬೇಕಾದ ರಾಜ್ಯ ಸರ್ಕಾರವೂ ನ್ಯಾಯ ಕೊಡಲಿಲ್ಲ, ಇಲ್ಲಿನ ಕಾರ್ಖಾನೆ ಮಾಲೀಕರ ಹತ್ತಿರ ಕತ್ತಿ, ಗುರಾಣಿಗಳೆಲ್ಲಾ ಇದ್ದ ಮೇಲೆ, ಅವರೇ ಸರ್ಕಾರದಲ್ಲಿ ಮಂತ್ರಿಗಳೆಂದ ಮೇಲೆ ಇನ್ನು ರೈತರಿಗೆ ನ್ಯಾಯಯುತ ಬೆಲೆ ಎಲ್ಲಿಂದ ತಾನೇ ಸಿಕ್ಕೀತು? ಕಳೆದ ಸಾಲಿನಲ್ಲಿ ನಿರಾಣಿಯ ಕಾರ್ಖಾನೆಯಿಂದ ರೈತರಿಗೆ ಕೊಡಬೇಕಿದ್ದ 11 ಕೋಟಿ ಬಾಕಿ ಹಣವನ್ನು ಕೊಡಲು 6 ತಿಂಗಳು ತಡ ಮಾಡಲಾಯಿತು. ಕಬ್ಬು ಸರಬರಾಜು ಮಾಡಿದ ಮೇಲೆ 15 ದಿನದಲ್ಲಿ ಹಣ ನೀಡಬೇಕೆಂಬುದು ಕಾನೂನಿನ ನಿಯಮ. ಆದರೆ ಯಡಿಯೂರಪ್ಪನ ಸಂಪುಟದ ಸಚಿವರಿಗೆ ಕಾನೂನು ಅನ್ವಯಿಸುವುದಿಲ್ಲ.

ಇಷ್ಟು ಲಾಭವಿದ್ದೂ, ಕಳೆದ ಸಾಲಿನಲ್ಲಿ ಕಬ್ಬು ಹೆಚ್ಚಾಗಿರುವುದರಿಂದ ಎಲ್ಲವನ್ನೂ ಅರೆಯಲು ಸಾಧ್ಯವಿಲ್ಲ, 1,600 ರೂ. ನೀಡಬಹುದು ಅಷ್ಟೇ ಎಂದು ಕಾರ್ಖಾನೆ ಮಾಲೀಕರು ಹುಯಿಲೆಬ್ಬಿಸಿದರು. ಬೆಳಗಾಂನ ಯಡಿಯೂರಪ್ಪನವರ ನೆಚ್ಚಿನ ಬಂಟ ಪ್ರಭಾಕರ ಕೋರೆಯೇ ಅದರಲ್ಲಿ ಮುಂಚೂಣಿಯಲ್ಲಿದ್ದರು. ಆದರೆ ಕಳೆದ ಸಾಲು ಮುಗಿಯುವಷ್ಟರಲ್ಲಿ ಆ ಜಿಲ್ಲೆಯ ಎಲ್ಲಾ ಕಬ್ಬನ್ನೂ ಸಂಪೂರ್ಣವಾಗಿ ಅರೆಯಲಾಯಿತು. ಇಂತಹ ಹಲವು ತಂತ್ರಗಳನ್ನು ಕಾರ್ಖಾನೆಯ ಮಾಲೀಕರು ಬಳಸುತ್ತಲೇ ಇದ್ದಾರೆ.

ಬೇರೆ ಬೇರೆ ಬೆಳೆಗಳ ರೈತರು ಸಂಕಷ್ಟದಲ್ಲಿದ್ದರೂ, ಕಬ್ಬು ಬೆಳೆಗಾರರು ಇದ್ದುದರಲ್ಲಿ ಒಂದು ಮಟ್ಟಿಗೆ ಸಂಘಟಿತರಾಗುತ್ತಿದ್ದಾರೆ. ಈ ಸಾಲಿನಲ್ಲಾದರೂ ನ್ಯಾಯ ಪಡೆಯಬೇಕೆಂದು ಈಗಾಗಲೇ ಒಂದು ಸುತ್ತು ಪ್ರತಿಭಟನೆಗಳನ್ನು ನಡೆಸಿದ್ದಾರೆ. ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಬೆಳಗಾಂನ ರುದ್ರಪ್ಪ ಮೊಕಾಶಿಯವರು, ಬಾಗಲಕೋಟೆಯ ವಿನೋದ್ ನಾಯ್ಕ, ದಾವಣಗೆರೆಯಲ್ಲಿ ತೇಜಸ್ವಿ ಪಟೇಲ್ ಇವರೆಲ್ಲರೂ ಸಕ್ರಿಯರಾಗಿದ್ದಾರೆ. ಕರ್ನಾಟಕ ರಾಜ್ಯ ರೈತಸಂಘವು ಮತ್ತಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡಿದರೆ, ಕಬ್ಬು ಬೆಳೆಗಾರರಿಗೆ ದೊಡ್ಡ ಶಕ್ತಿ ಒದಗುವುದರಲ್ಲಿ ಸಂಶಯವಿಲ್ಲ, ಕಬ್ಬಿನ ವಿಚಾರವೂ ಸೇರಿದಂತೆ ಹಲವು ಬೇಡಿಕೆಗಳನ್ನಿಟ್ಟುಕೊಂಡು ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಒಂದು ದೊಡ್ಡ ಪ್ರತಿಭಟನೆಯೂ ಇತ್ತೀಚೆಗೆ ನಡೆದಿದೆ.


ಈ ಹೋರಾಟದಲ್ಲಿ ಸಮಾಜದ ಇತರ ವರ್ಗಗಳೂ ಕೈ ಜೋಡಿಸುವ ಅಗತ್ಯವಿದೆ. ಯಡಿಯೂರಪ್ಪನವರ ಸರ್ಕಾರವು ಎಲ್ಲಾ ಜನವಿರೋಧಿ ಆಯಾಮಗಳ ಸಾಕಾರದಂತಿದ್ದು, ಪ್ರತೀ ಕ್ಷೇತ್ರದ ಅತ್ಯಂತ ದುಷ್ಟ ಶಕ್ತಿಗಳೆಲ್ಲರೂ ಬಿಜೆಪಿ ಪಕ್ಷದೊಳಗೆ ಸೇರಿಕೊಳ್ಳುತ್ತಿದ್ದಾರೆ. ಸಕ್ಕರೆ ಲಾಬಿ ಅಂತಹ ಒಂದು ಉದಾಹರಣೆಯಷ್ಟೇ. ಹಾಗಾಗಿ ಕರ್ನಾಟಕದ ಜನಸಾಮಾನ್ಯರೆಲ್ಲರೂ ಕಬ್ಬು ಬೆಳೆ ಬೆಳೆಯುವ ರೈತರ ಜೊತೆ ಸೇರುವುದು, ಕರ್ನಾಟಕ ಕಂಡ ಅತ್ಯಂತ ಕೆಟ್ಟ ಆಡಳಿತದ ವಿರುದ್ಧದ ಹೋರಾಟದ ಜೊತೆಗೂಡಿದಂತೆಯೇ ಆಗಿದೆ.



ಪ್ರತಿಭಟನಾ ನಿರತ ಕಬ್ಬು ಬೆಳೆಗಾರರು

• ಡಾ. ವಾಸು ಎಚ್.ವಿ., ಕರ್ನಾಟಕ ಜನಶಕ್ತಿ

ಅಬ್ಬಾ.....! ಇದು ಯಡ್ಡಿ ಮಕ್ಕಳ ಆಸ್ತಿಪಟ್ಟಿ!

ಹಾಲಿ ಕರ್ನಾಟಕದ ಅತೀ ಶ್ರೀಮಂತ ಫ್ಯಾಮಿಲಿಗಳ ಲಿಸ್ಟಿಗೆ ಯಡಿಯೂರಪ್ಪ ಅಂಡ್ ಸನ್ಸ್ ಕೂಡ ಸೇರುವ ಅರ್ಹತೆ ಪಡೆದುಕೊಂಡಿದ್ದಾರೆ. ಕೇವಲ ನಲವತ್ತು ವರ್ಷಗಳ ಹಿಂದೆ ಓಡಾಡಲು ಒಂದು ಸೈಕಲ್ ಕೂಡ ಇರದಿದ್ದ ಯಡ್ಡಿ ಇವತ್ತು ರಾಶಿ ಹಾಕಿಕೊಂಡಿರುವ ಅಗಾಧ ಪ್ರಮಾಣದ ಆಸ್ತಿಯತ್ತ ನೋಡಿದರೆ ದಿಗ್ಭ್ರಮೆಯಾಗದಿರದು. ಯಡಿಯೂರಪ್ಪ, ರಾಘವೇಂದ್ರ, ವಿಜಯೇಂದ್ರ, ಅರುಣಾದೇವಿ ಮುಂತಾದವರ ಹೆಸರುಗಳಲ್ಲೇ ಈ ಬೃಹತ್ ಆಸ್ತಿ ಖರೀದಿಗಳಾಗಿವೆ. ಇನ್ನು ಹಲವು ದೊಡ್ಡ ಆಸ್ತಿಗಳನ್ನು ಯಡ್ಡಿಯ ಸಂಬಂಧಿಗಳಾದ ವಿಜಯ ಸಂಗಮದೇವ್, ಸೋಹನ್ ಕುಮಾರ್, ಸಂಗಮದೇವ ಪರಪ್ಪ ಕೆ.ಬಿ. ಜಯಣ್ಣ ಉದಯ ಕುಮಾರ, ಬಿ.ಕೆ. ಸೋಮಶೇಖರ್ ಮುಂತಾದವರ ಹೆಸರುಗಳಲ್ಲಿ ಖರೀದಿಸಲಾಗಿದೆ.





ಕಳೆದ ಮೂರ್ನಾಲ್ಕು ವರ್ಷಗಳಿಂದ ನಡೆದಿರುವ ಈ ಖರೀದಿ ದಂಧೆಯ ಒಟ್ಟು ಮೌಲ್ಯ ಹಲವು ಕೋಟಿ ರೂಪಾಯಿಗಳಷ್ಟಿದೆ.

ಇಷ್ಟು ದುಡ್ಡು ಯಡ್ಡಿ ಅಂಡ್ ಸನ್ಸ್‌ಗೆ ಎಲ್ಲಿಂದ ಬಂತು? ಅಸಲಿಗೆ ಇದು ನ್ಯಾಯವಾಗಿ ದುಡಿದ ಹಣ-ಆಸ್ತಿಯಾ?

ಈ ಪ್ರಶ್ನೆಗಳಿಗೆ ಉತ್ತರ ಏನೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಯಡ್ಡಿ ಮಕ್ಕಳ ಆಸ್ತಿಗಳು ಎಲ್ಲೆಲ್ಲೂ ಎಷ್ಟೆಷ್ಟಿದೆ ಎಂಬ ಬಗ್ಗೆ ಕೆಲವು ಹೊಸ ಮಾಹಿತಿಗಳು ಸಿಕ್ಕಿದ್ದು ಅದನ್ನು ಇಲ್ಲಿ ಪ್ರಕಟಿಸಿದೆ.

ರಾಘವೇಂದ್ರನ ಮಹಿಮೆ

ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟಿನಲ್ಲಿ ಬೇರೆಯವರಿಗೆ ಮಂಜೂರಾಗಿದ್ದ ಬಿಡಿಎ ಸೈಟು ಲಪಟಾಯಿಸಿ ಸಿಕ್ಕಿಬಿದ್ದಿರುವ ಸಂಸದ ಬಿ.ವೈ. ರಾಘವೇಂದ್ರ ಶಿವಮೊಗ್ಗದಲ್ಲಿ ಡಜನ್‌ಗಟ್ಟಲೆ ಆಸ್ತಿ ಖರೀದಿಸಿದ್ದಾನೆ.

ಅಲ್ಲಿನ ಮಾಳಿಗೇನಹಳ್ಳಿಯ ಸರ್ವೆ ನಂಬರ್ 3,4,5,6 ರಲ್ಲಿ ಒಟ್ಟು 20 ಎಕರೆ ಜಮೀನನ್ನು 41 ಲಕ್ಷ ರೂಪಾಯಿ ಕೊಟ್ಟು ಖರೀದಿಸಲಾಗಿದೆ. ಈ ಡೀಲ್ ನಡೆದದ್ದು 7.6.2003 ರಲ್ಲಿ. ಅದೇ ರೀತಿ 2006 ರಲ್ಲಿ ಉರ್ಗದೂರಿನ ಸರ್ವೆ ನಂ. 148, 149 ರಲ್ಲಿ ನಾಲ್ಕೂವರೆ ಎಕರೆ ಜಮೀನು 15.5 ಲಕ್ಷಕ್ಕೆ ಖರೀದಿಯಾಗಿದೆ. ನಂತರ 5.2.2007 ರಲ್ಲಿ ಪ್ರೇರಣ ಎಜುಕೇಷನ್ ಟ್ರಸ್ಟ್ ಹೆಸರಲ್ಲಿ ಗುಡ್ಡದ ಅರಕೆರೆ ಗ್ರಾಮದಲ್ಲಿ ಅನಾಮತ್ತು 30 ಎಕರೆ ಖರೀದಿಯಾಗಿದೆ. ಮಜಾ ಅಂದರೆ ಸರ್ವೆ ನಂ. 17/p1, p2, 33, 34 ರಲ್ಲಿನ 27.28 ಲಕ್ಷ ರೂಪಾಯಿ ಬೆಲೆಯ ಜಮೀನನ್ನು ಯಡ್ಡಿಯ ಅಳಿಯ ಸೋಹನ್ ಕುಮಾರನೇ ಮಾರಿದಂತೆ ತೋರಿಸಲಾಗಿದೆ.

2010 ರಲ್ಲಿ ಊರ್ಗದೂರಿನಲ್ಲೇ ಸರ್ವೆ ನಂ. 151/1, 151/2 ರ ಎರಡೂವರೆ ಎಕರೆ ಭೂಮಿಯನ್ನು 28.93 ಲಕ್ಷ ತೆತ್ತು ವಿಜಯ ಸಂಗಮೇಶವನೆಂಬ ಯಡ್ಡಿಯ ಬೇನಾಮಿದಾರ ಖರೀದಿಸಿದ್ದಾನೆ. ಗದಗದ ಸಂಗಮೇಶ ಪರಪ್ಪನೆಂಬುವನ ಮೂಲಕ ಹರಕೆರೆಯಲ್ಲಿ 31 ಎಕರೆ ಭೂಖರೀದಿಯಾಗಿದೆ. 2007 ರಿಂದ 2009 ರ ತನಕ ಬಿಟ್ಟೂಬಿಡದೆ ಈ ಖರೀದಿಯಾಗಿದೆ. ಸರ್ವೆ ನಂ. 144/1, 142, 143/1, 143/2, 146, 148, 149, 150, 229, 230, 231 ರ ಈ ಭೂಮಿಗೆ ಒಂದೂವರೆ ಕೋಟಿ ರೂಪಾಯಿ ಬೆಲೆ ನೀಡಲಾಗಿದೆ.

ಅರುಣಾದೇವಿ ಪವಾಡ

ಕಳೆದ ವಾರ ತಾನೆ ಲಂಕೇಶ್‌ನಲ್ಲಿ ಈಕೆ ಶಿವಮೊಗ್ಗದಲ್ಲಿ ಒಂದೇ ಏಟಿಗೆ ನಾಲ್ಕು ದೊಡ್ಡ ಸೈಟು ನುಂಗಿದ ವರದಿ ಪ್ರಕಟವಾಗಿದೆ. ಹೆಬ್ಬಾವಿನ ಸೈಜಿನ ಬಾಯಿ ಹೊಂದಿರುವ ಅರುಣಾ ಹಣ-ಆಸ್ತಿ ಮಾಡುವುದರಲ್ಲಿ ತನ್ನ ಸೋದರರೊಂದಿಗೆ ರೇಸಿಗೆ ಬಿದ್ದವಳಂತೆ ಕಾಣುತ್ತಿದ್ದಾಳೆ. ಶಿವಮೊಗ್ಗದ ಪತ್ರಕರ್ತರೆಂದು ನಕಲಿ ದಾಖಲೆ ಸೃಷ್ಟಿಸಿ ಕೃಷ್ಣ ಸಂದೇಶ್ ಗೌಡ, ಮಂಜುನಾಥ, ಶಿವಶಂಕರ ಎಂಬುವರ ಹೆಸರಲ್ಲಿ ಮೊದಲು ಸೈಟು ಮಂಜೂರು ಮಾಡಿಸಿಕೊಂಡು ಕೆಲದಿನಗಳ ನಂತರ ತನ್ನ ಹೆಸರಿಗೆ ಬರೆಸಿಕೊಂಡಳು. ಇಂಥ ಕಿಲಾಡಿ ಹೆಣ್ಣು ಅರುಣಾ ಬಿಕೆಎಸ್ ಪ್ರಾಪರ್ಟೀಸ್ ಇಂಡಿಯಾ ಪ್ರೈವೇಟ್ ಲಿ. ಹೆಸರಿನಲ್ಲಿ ಎಚಿವಾಡಿ ಗ್ರಾಮದಲ್ಲಿ 97 ಎಕರೆ ಭೂಮಿ ಖರೀದಿಸಿದ್ದಾಳೆ. ಸರ್ವೆ ನಂಬರ್ 17, 18 ರಿಂದ ಶುರುವಾಗಿ ಸರ್ವೆ ನಂ. 30 ರವರೆಗೂ ಒಂದೇ ಪ್ಲಾಟಿನ ಈ ಜಮೀನಿಗೆ 1 ಕೋಟಿ ಎಪ್ಪತ್ತು ಲಕ್ಷ ಹಣ ಕೊಡಲಾಗಿದೆ. 2010 ರಲ್ಲಿ ನಡೆದಿರುವ ಭೂ ಖರೀದಿ ಇದು.

ವಿಜಯೇಂದ್ರ ವೈಭವ

ಹೊರನೋಟಕ್ಕೆ ಅಮಾಯಕನಂತೆ ಕಾಣುವ ವಿಜಯೇಂದ್ರ ಹಾಲಿ ಶಿವಮೊಗ್ಗೆಯ ಸುಲ್ತಾನ ಎಂದರೂ ಅಡ್ಡಿಯಿಲ್ಲ. ಅಲ್ಲಿನ ಬಿ.ಎಚ್. ರಸ್ತೆಯಲ್ಲಿ 9430 ಚದರಡಿಯ ದೊಡ್ಡ ಸೈಟನ್ನು 2010 ರಲ್ಲಿ ವಿಜಯೇಂದ್ರ ತನ್ನದಾಗಿಸಿಕೊಂಡಿದ್ದಾನೆ. ಇದರ ಘೋಷಿತ ಬೆಲೆ 1 ಕೋಟಿ 65 ಲಕ್ಷ ರೂಪಾಯಿಗಳು. 2010 ರಲ್ಲೇ ಸಂಗಮೇಶ್ ಪರಪ್ಪ ಎಂಬುವರಿಂದ 81 ಸಾವಿರ ಚದರಡಿಯ ಜಾಗಕ್ಕೆ ಒಂದು ಕೋಟಿ ಇಪ್ಪತ್ತೊಂದು ಲಕ್ಷ ರೂಪಾಯಿ ಕೊಟ್ಟುಕೊಂಡಿದ್ದಾನೆ.

2011 ರ ಫೆಬ್ರವರಿ 9 ರಂದು ಗುಡ್ಡದ ಅರಕೆರೆಯಲ್ಲಿ ಸರ್ವೆ ನಂ. 12 ರಿಂದ 21 ರತನಕದ ಭೂಮಿ ಖರೀದಿಸಿ 1.60 ಕೋಟಿ ಕೊಡಲಾಗಿದೆ.

ಮತ್ತೆ ಶಿವಮೊಗ್ಗೆ ಟೌನಿಗೆ ಬರುವುದಾದರೆ 2010 ರಲ್ಲೇ ಬಿ.ಎಚ್. ರಸ್ತೆಯಲ್ಲಿ 2061 ಚದರಡಿಯ ಸೈಟನ್ನು 51.58 ಲಕ್ಷ ರೂಪಾಯಿ ನೀಡಿ ಬೇಲಿ ಸುತ್ತಿಕೊಂಡಿದ್ದಾನೆ. ಇವರೆಂತಾ ಕಿಲಾಡಿ ಫ್ಯಾಮಿಲಿಯೆಂದರೆ ಯಡ್ಡಿ ಅಳಿಯ ಸೋಹನ್ ಕುಮಾರ್ 17.8.2010 ರಲ್ಲಿ 1.39 ಕೋಟಿ ರೂ.ಗಳನ್ನು ವಿಜಯೇಂದ್ರನಿಂದ ಪಡೆದು ಜಮೀನೊಂದನ್ನು ಬರೆದು ಕೊಟ್ಟಿದ್ದಾನೆ.


ಇದಲ್ಲದೆ ರಾಘವೇಂದ್ರ-ವಿಜಯೇಂದ್ರ ಗುಂಪಿಗೆ ಸೇರಿರುವ ಕೆ.ಬಿ. ಜಯಣ್ಣ, ಉದಯಕುಮಾರ್, ಬಿ.ಕೆ. ಸೋಮಶೇಖರ್ ಎಂಬುವರ ಮೂಲಕವೂ ಕೋಟ್ಯಂತರ ರೂಪಾಯಿಗಳ ಭೂ ಖರೀದಿ ಮಾಡಿದ್ದಾರೆ. ಶಿವಮೊಗ್ಗೆಯ ಕಿಮ್ಮನೆ ಜಯರಾಂ, ನಾಗರಾಜ, ಅಂದಾನಪ್ಪ ಆದಿಲಕ್ಷ್ಮಮ್ಮ, ಆದಿತ್ಯ ಮುಂತಾದವರು ಯಡ್ಡಿ ಮಕ್ಕಳಿಗೆ ತಮ್ಮ ಆಸ್ತಿ ಮಾರಿಕೊಂಡಿದ್ದಾರೆ.

ಈ ಭ್ರಷ್ಟರ ಗುಂಪಿಗೆ ಕಡಿವಾಣ ಹಾಕುವವರು ಯಾರು?

ಹೆಬ್ಬಾವುಗಳಂತೆ ಆಸ್ತಿ ನುಂಗುವ ಈ ಖದೀಮರ ಬಾಯಿಗೆ ಹೊಲಿಗೆ ಹಾಕುವುದು ಹೇಗೆ?

Sl No.	B.Y. Raghavendra Date of Sale	Doc.No.	Sy.No/Site No.	Extent	Area	Purchase Value	Market Value
				Agriculture Lands			
1	2/11/06	5571	228	20 G	Harakere	1.32 laks	3 laks
2	2/11/06	4662	228	1 Acre	Harakere	6.55 laks	15 laks
3	2/11/06	4660	228	1 Acre	Harakere	6.55 laks	15 laks
4	18/10/2007	4221	32/1	37 G	Guddadaarakere	1.00 laks	3 laks
5	6/2/06	4652	149	23 G	Uragaduru	1.85 laks	6 laks
6	6/2/06	4653	149	22 G	Uragaduru	1.75 laks	6 laks
7	7/2/06	4664	149	23 G	Uragaduru	1.75 laks	6 laks
8	24/02/2006	5109	148	3 Acre 26 G	Uragaduru	6.40 laks	20 laks
9	24/02/2006	5110	148	3 Acre 26 G	Uragaduru	6.08 laks	20 laks
10	27/11/2003	5064	3	8 Acre 38 G	Malligenahalli	7.30 laks	20 laks
11	17/07/2006	2409	5	2 Acre 29 G	Malligenahalli	2.58 laks	8 laks
12	17/07/2006	2411	6	1 Acre 26 G	Malligenahalli	1.56 laks	5 laks
13	30/11/2007	5139	7	6 Acre 05 G	Malligenahalli	30.00 laks	1 Crore
				Total 31 Acre 875 G		Total 74.69 laks	Total 2Cr 27 laks
				Site, Commercial & Residential Buildings			
1	28/11/2007	5119	5	16x70	Shimoga	7.55 laks	24 laks
2	28/11/2007	5117	4	16x70	Shimoga	7.55 laks	24 laks
3	21/04/2006	2401	55/2	20 G	Rachenahalli (allienated)	20.00 laks	1 Crore
4	12/7/04	9935	3/1,3/3,3/4,13/6	107E Manyata Residency	Site+ Building Value	2 Crore 5 laks	4 Crore
						Total 2Cr 40 laks	Total 5Cr 48 laks
				Agriculture Lands for Prerana Education Trust			
1	5/2/07	6542	35/1,33/3,36/2	8 Acre 14 G	Guddadaarakere	6.65 laks	20 laks
2	5/2/07	6693	34/P1,	4 Acre	Guddadaarakere	4.20 laks	13 laks
3	5/2/07	6695	17,17/P2,35,35/2	7 Acre	Guddadaarakere	7.78 laks	24 laks
4	5/2/07	6742	17,32,33,34/P2	7 Acre 17 G	Guddadaarakere	7.80 laks	24 laks
1	26/09/2007	2521	101	16519.68 Sq.ft.	Madavanagar	98.94 laks	2 Crores
2	2007/08			Residential	Chamarajpet	36.00 laks	1 crore 50 laks
3	2007/08			Residential	Nagarabhavi	30.78 laks	1 crore 50 laks
4	2007/08			Residential	Frazer Town	22.31 laks	1 crore
5	2007/08			Residential	H S R Layout	93.96 laks	3 Crore
6	2007/08			Residential	Shimoga	30.60 laks	1 Crore
7	2008/09			Residential	Shimoga	44.89 laks	1Crore 50 laks
8	2008/09			Residential	Shimoga	1 Crore 22 laks	2 Crore 50 laks
9	2008/09			Bhagath Homes Pvt Ltd., (Smt. Thejaswini)		4 Crore 60 Laks	8 Crore
10	2008/09		19/C&D	Fluid Power Technologies Pvt Ltd., 2Acre		84 laks	2 Crore
11	2008/09		144/1 to 147& 148	Sahyadri Health Care Pvt Ltd., 5 Acre 34 G		50 laks	1Crore
12	7/8/09	3004	123, 21, 118, 86, & 114/2	17 Acre	Hunasekatte, Bdvt.	15.30 laks	50 laks
14	7/8/09	3001	10, 91, 17, 116	16 Acre	Hunasekatte, Bdvt.	14.40 laks	50 laks
15	7/8/09	3002		16 Acre	Hunasekatte, Bdvt.	14.40 laks	50 laks
16	7/8/09	3003	119, 122,	12 Acre	Hunasekatte, Bdvt.	10.80 laks	30 laks
17	7/8/09	3000	115, 111	8 Acre	Hunasekatte, Bdvt.	7.20 laks	25 laks
18	11/12/09	9429	131/131/226	5362 Sq Ft	Shimoga	35.50 laks	1Crore 25 laks
19	11/12/09	9434	131/131/226	9500 Sq Ft	Shimoga	95.00 laks	3 Crore
20	25/05/2010	474	70/3	791 Sq Ft	Bangalore	16.50 laks	40 laks
21	25/05/2010	475	70/3	765 Sq Ft	Bangalore	16.50 laks	40 laks
						Total 13 Crore	Total 33 Crore
				Shares & Investments			
1				1.3 laks shares of Rs. 10		13.00 laks	
2				0.125 laks shares of Rs. 10		1.25 laks	
3				5.45 laks Shares of Rs 10		54.50 laks	
4				9.50 laks Shares of Rs 10		95.00 laks	
5				2.77 laks Shares of Rs. 10		93.46 laks	
6				Condoor Business solutions Pvt Ltd.,		18.30 laks	
7	4/8/10	2030	14/1 &14/2	Srirampura Share holders		3Crore 75 laks	32 Crore 50 laks
						Total 6 Cr 50 Laks	Total 32 Cr 50 laks
						27 crores	90 crores

ಯಡ್ಡಿ ಮಕ್ಕಳ ಆಸ್ತಿಪಟ್ಟಿ!



ಡಿಕೆ-ಯಡ್ಡಿ ಯಾವ ಜನ್ಮದ ಮೈತ್ರಿ?

ಕಾಂಗ್ರೆಸ್ಸು-ಜೆಡಿಎಸ್‌ನವರೆಲ್ಲ ಬಿಟ್ಟೂಬಿಡದೆ ಬಿಜೆಪಿ ಹಾಗೂ ಯಡ್ಡಿ ವಿರುದ್ಧ ಯುದ್ಧ ನಡೆಸುತ್ತಿರುವಾಗ ಒಬ್ಬ ಡಿಕೆ ಶಿವಕುಮಾರ್ ಮಾತ್ರ ಯಡ್ಡಿ ಜೊತೆ ಸ್ನೇಹ ಕುದುರಿಸಿಕೊಂಡಿರುವ ಸುದ್ದಿಗಳು ಕೇಳಿಬರುತ್ತಿವೆ. ಕನಕಪುರದ ಮಟ್ಟಿಗಂತೂ ಡಿಕೆಗೆ ಯಡ್ಡಿ ಸರ್ಕಾರ ಪೂರ್ಣ ಸಹಕಾರ ಕೊಡುತ್ತಾ ಜೆಡಿಎಸ್‌ನವರನ್ನು ತುಳಿಯಲು ಕುಮ್ಮಕ್ಕು ಕೊಡುತ್ತಿರುವುದು ಈಗ ಗುಟ್ಟಾಗೇನೂ ಉಳಿದಿಲ್ಲ.

ಇತ್ತ ಬೆಂಗಳೂರಿನಲ್ಲೂ ಡಿಕೆ-ಯಡ್ಡಿ ಅಲ್ಲಿ-ಇಲ್ಲಿ ಆಗಿಂದ್ದಾಗ್ಗೆ ಭೇಟಿಯಾಗಿ ಮಾತನಾಡುತ್ತಿದ್ದಾರೆಂತಲೂ ಪುಕಾರುಗಳಿವೆ.

ಕಳೆದ ವರ್ಷ ಬಿಜೆಪಿಗಳು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಿದಾಗ ಕಾಂಗ್ರೆಸಿಗರು ಅದನ್ನು ಟೀಕಿಸಿದ್ದರು. ಆದರೆ ಡಿಕೆ ಮಾತ್ರ ನೀಟಾಗಿ ಸಫಾರಿ ಧರಿಸಿ ಸಮಾವೇಶಕ್ಕೆ ಹೋಗಿ "ನಾನು ಬನ್ನೇರುಘಟ್ಟ ರೋಡ್‌ನಲ್ಲಿ 60 ಕೋಟಿ ಬಂಡವಾಳ ಹಾಕಿ ಒಂದು ಶಿಕ್ಷಣ ಸಂಸ್ಥೆ ಮಾಡಬೇಕೆಂದಿದ್ದೇನೆ. ಅದಕ್ಕೆ ಬಂದೆ" ಎಂದಿದ್ದರು. ಈಗ ರಾಜಾಜಿನಗರ ಎಂಟ್ರೆನ್ಸ್ ಬಳಿ ಮಿನರ್ವ ಮಿಲ್‌ನ 15 ಎಕರೆ ಜಾಗ ಡಿಕೆ ಕೈಲಿದೆ. ಆದರೆ ಅದಕ್ಕೆ ಕೆಲವು ಲೀಗಲ್ ಪ್ರಾಬ್ಲಮ್‌ಗಳಿವೆ. ಅದನ್ನೆಲ್ಲಾ ಬಗೆಹರಿಸಿಕೊಳ್ಳಲು ಡಿಕೆ ಟ್ರೈ ಮಾಡುತ್ತಿದ್ದಾರೆ. ಹಾಗಾಗಿ ಯಡ್ಡಿ ಬಗ್ಗೆ ಕೊಂಚ ಮೃದುವಾಗಿದ್ದಾರೆ ಎನ್ನಲಾಗಿದೆ.

ನಿಜ ಏನೆಂದು ಡಿಕೆಗೆ ಗೊತ್ತು?

ಕುಂಚಿಟಿಗ ಸ್ವಾಮಿಗೆ ಚುಂಚನಗಿರಿ ಗೂಟ

ಒಕ್ಕಲಿಗರಿಗೆಂದೇ ಹುಟ್ಟಿಕೊಂಡ ಬಾಲಗಂಗಾಧರ ಸ್ವಾಮಿಯ ಅಗಣಿತ ಸಾಮ್ರಾಜ್ಯ ಒಂದೆಡೆ ಅದರ ಭಾರಕ್ಕೆ ಕುಸಿಯುತ್ತಿದ್ದರೆ, ಅದರ ವಿರುದ್ಧ ದೇವೇಗೌಡರು ಹುಟ್ಟು ಹಾಕಿದ ಕು.ಚಂ.ನಾಥರಿಗೆ ಅರ್ಧ ರಾತ್ರಿಯ ಐಶ್ವರ್ಯ ಬಂದಂತಾಗಿ ತಲೆ ತಿರುಗಿಬಿಟ್ಟಿದೆ. ಮತ್ತೊಂದೆಡೆ ನಂಜಾವಧೂತರ ಅವತಾರ ಅವರ ವಿರುದ್ಧ ಈಗ ಹನುಮಂತನಾಥರ ಸಾಕ್ಷಾತ್ಕಾರ! ಒಕ್ಕಲಿಗ ಸ್ವಾಮಿಗಳ ಪ್ರತಿಷ್ಠೆ, ಪೈಪೋಟಿ, ಕುಚೇಷ್ಟೆಗಳೆಲ್ಲ ಕೊನೆಗೆ ಎಲ್ಲಿಗೆ ಬಂದು ನಿಲ್ಲುತ್ತೋ, ಏನು ಗತಿಯಾಗುತ್ತೋ ಬಲ್ಲವರ್‍ಯಾರು?

ಆದಿಚುಂಚನಗಿರಿ ಬಾಲಗಂಗಾಧರನಾಥರ ಹೆಸರೆತ್ತಿದರೆ ಸಾಕು ಕುಂಚಿಟಿಗ ಜಗದ್ಗುರು ನಂಜಾವಧೂತರ ಪಿತ್ಥ ಸರಕ್ಕಂತ ನೆತ್ತಿಗೇರುತ್ತದೆಯಂತೆ!

ಅವನ್ಯಾದ ದೊಡ್ಡ ಮನುಷ್ಯ ಅಂತ ಹೇಳ್ತೀರ್ರೀ.....!


ಹನುಮಂತನಾಥ ಸ್ವಾಮಿ

ಎಂದು ಇತ್ತೀಚೆಗಷ್ಟೇ ಆದಿಚುಂಚನಗಿರಿ ಸ್ವಾಮಿಯ ವಿರುದ್ಧ ಪಟ್ಟನಾಯಕನಹಳ್ಳಿಯ ಸ್ಪಟಿಕಪುರಿ ಪೀಠಾಧೀಶ ನಂಜಾವಧೂತರು ಕಿಡಿಕಾರಿದ್ದು ಅದ್ಯೇಗೋ ಬಾಲಗಂಗಾಧರರ ಕಿವಿ ಮುಟ್ಟಿ ರಾದ್ಧಾಂತವಾಯಿತಂತೆ. ಇನ್ನು ಮುಂದೆ ನಂಜಾವಧೂತರನ್ನು ಕರೆಸಿದ ಯಾವುದೇ ವೇದಿಕೆಗೆ ತಾನು ಕಾಲಿಕ್ಕಲ್ಲ ಎಂದು ಬಾಲಗಂಗಾಧರನಾಥರು ಶಪಥಗೈದಿದ್ದು, ನಂಜಾವಧೂತರ ವಿರುದ್ಧ ಆದಿಚುಂಚನಗಿರಿ ಮಠಿಯಿಂದಲೇ ಹನುಮಂತನಾಥರೆಂಬ ಪುಡಿ ಕುಂಚಿಟಿಗ ಸ್ವಾಮಿಯೊಬ್ಬರನ್ನು ಬಾಲಗಂಗಾಧರರು ಹುಟ್ಟುಹಾಕಿದ್ದು, ಕುಂಚಿಟಿಗ ಮಠಕ್ಕೆಂದು ನಂಜಾವಧೂತರಿಗೆ ಕೊಟ್ಟಿದ್ದ ಐದೆಕರೆಯನ್ನು ರಾಜ್ಯ ಕುಂಚಿಟಿಗರ ಮಹಾಮಂಡಳದ ಅಧ್ಯಕ್ಷ ದೇವರಾಜಯ್ಯ ಕಿತ್ತುಕೊಂಡು ಅದನ್ನು ಚುಂಚನಗಿರಿ ಕೃಪಾಪೋಷಿತ ಹನುಮಂತನಾಥರಿಗೆ ಕೊಟ್ಟಿದ್ದು, ಸ್ಪಟಿಕಪುರಿ ಪೀಠದ ವಿರುದ್ಧ ಕೊರಟಗೆರೆ ತಾಲ್ಲೂಕು ಎಲೆರಾಂಪುರದಲ್ಲಿ ಕುಂಚಿಟಿಗರ ಮಹಾಸಂಸ್ಥಾನ ಮಠ ಎಂಬ ಹೊಸ ಮಠ ತಲೆ ಎತ್ತುತ್ತಿರುವುದು-

ಹೀಗೆ ಒಕ್ಕಲಿಗರ ವಿವಿಧ ಮಠಗಳು ಮತ್ತು ಸ್ವಾಮಿಗಳ ಮಧ್ಯೆ ತಣ್ಣಗೆ ಶುರುವಾದ ಕಚ್ಚಾಟ ಕೊನೆಗೆ ಎಲ್ಲಿಗೆ ಬಂದು ನಿಲ್ಲುತ್ತೋ ಬಲ್ಲವರ್‍ಯಾರು?

ನಿನ್ನೆ ಮೊನ್ನೆಯತನಕ ಕುಂಚಿಟಿಗರ ಏಕಮೇವಾದ್ವಿತೀಯ ಜಗದ್ಗುರುವಾಗಿದ್ದ ತನ್ನ ವಿರುದ್ಧ ಮತ್ತೊಬ್ಬ ಸ್ವಾಮಿಯನ್ನು ಎತ್ತಿ ಕಟ್ಟಿರುವುದು ಆದಿಚುಂಚನಗಿರಿ ಸ್ವಾಮಿಯಲ್ಲದೆ ಮತ್ತಾರೂ ಅಲ್ಲ ಎಂಬುದೇ ನಂಜಾವಧೂತರ ಸಿಟ್ಟಿನ ಮೂಲ. ಇಲ್ಲಿಗೆ ಆರು ತಿಂಗಳ ಹಿಂದೆ ಏಕಾಏಕಿ ತಲೆ ಎತ್ತಿದ ಶ್ರೀಶ್ರೀಶ್ರೀ ಹನುಮಂತನಾಥಸ್ವಾಮಿ ಮತ್ತು ಕೊರಟಗೆರೆ ಎಲೆರಾಂಪುರದ ಕುಂಚಿಟಿಗರ ಮಹಾಸಂಸ್ಥಾನ ಮಠದ ಹುಟ್ಟು ಅದಕ್ಕಿರುವ ಕಾರಣದ ಹಿಂದಿನ ಕತೆ ತಮಾಷೆಯಾಗಿದೆ.

ಅದು ಒಕ್ಕಲಿಗರ ಮತ್ತೊಂದು ಪಂಗಡವಾದ ಕುಂಚಿಟಿಗರ ಸೋಕಾಲ್ಡ್ ಜಗದ್ಗುರು ನಂಜಾವಧೂತರ ವಿರುದ್ಧ ಆದಿಚುಂಚನಗಿರಿ ಸ್ವಾಮೀಜಿ ಇಟ್ಟ ಫಿಟ್ಟಿಂಗ್!

ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಯಲ್ಲಿ 'ಸ್ಪಟಿಕಪುರಿ' ಸಂಸ್ಥಾನ ಕಟ್ಟಿಕೊಂಡು ಅದಕ್ಕೆ ತಾನೇ ಜಗದ್ಗುರು ಎಂದು ಸ್ವಯಂ ಘೋಷಿಸಿಕೊಂಡ ನಂಜಾವಧೂತರನ್ನು ಕೆಲವರು ಒಕ್ಕಲಿಗರ ಮೂರನೇ ಸ್ವಾಮಿ ಎಂದೇ ನಂಬುವುದುಂಟು. ಆದಿಚುಂಚನಗಿರಿಯ 'ಬಾಲಗಂ' ಸ್ವಾಮಿ, ಅವರ ವಿರುದ್ಧ ಮಣ್ಣಿನ ಮಕ್ಕಳು ಛೂಬಿಟ್ಟ ಕೆಂಗೇರಿಯ ಕುಮಾರ ಚಂದ್ರಶೇಖರನಾಥ ಸ್ವಾಮಿ ಬಿಟ್ಟರೆ ಒಕ್ಕಲಿಗರ ಮೂರನೇ ಸ್ವಾಮಿಯೆಂಬಂತೆ ಚಾಲ್ತಿಗೆ ಬಂದವರು ನಂಜಾವಧೂತರು. ಅದೇನು ಶೋಕಿಯೋ; ಸಂಸ್ಥಾನದ ಹೆಸರೇ ಸ್ಪಟಿಕಪುರಿಯಾದ್ದರಿಂದ ತನ್ನ ಹಲ್ಲುಗಳು ಕೂಡ ಸ್ಪಟಿಕದಂತೆ ಹೊಳೆಯಬೇಕೆಂದು ತುಮಕೂರಿನ ಡೆಂಟಿಸ್ಟ್ ಒಬ್ಬರಿಗೆ ಎರಡು ಲಕ್ಷ ತೆತ್ತು ಹಲ್ಲು ಪಾಲಿಶ್ ಮಾಡಿಕೊಂಡರು. ಜೊತೆಗೆ ತುಟಿಗೂ ಲಿಪ್‌ಸ್ಟಿಕ್ ಹಚ್ಚಲಾರಂಭಿಸಿದ ನಂಜಾವಧೂತರು ಬಾಲಗಂ ಮತ್ತು ಕು.ಚಂ. ನಾಥರಿಗೆ ಹೋಲಿಸಿದರೆ ಗ್ಲಾಮರ್ ಸ್ವಾಮಿಯೆಂದೇ ಚಾಲ್ತಿಗೆ ಬಂದರು.

ಬಾಲಗಂ ಮತ್ತವರ ಎದುರಾಳಿ ಕುಚಂನಾಥರು ಜಾತಿಯಲ್ಲಿ ಗಂಗಟಕಾರ ಒಕ್ಕಲಿಗರಾದ್ದರಿಂದ ಕುಂಚಿಟಿಗ ಸ್ವಾಮಿಯೆಂದು ಚಾಲ್ತಿಗೆ ಬಂದ ನಂಜಾವಧೂತರಿಗೆ ಅಷ್ಟಿಷ್ಟು ಡಿಮ್ಯಾಂಡ್ ಸೃಷ್ಟಿಯಾಗಿತ್ತು, ವಿಶೇಷವಾಗಿ ತುಮಕೂರಿನ ಮಧುಗಿರಿ, ಶಿರಾ, ಕೊರಟಗೆರೆ, ಹಿರಿಯೂರು, ಬೆಂಗಳೂರಿನ ಯಲಹಂಕ ಇತ್ಯಾದಿ ಭಾಗಗಳಲ್ಲಿರುವ ಕುಂಚಿಟಿಗರದ್ದು ನಿಜಕ್ಕೂ ಅತಂತ್ರ ಸ್ಥಿತಿ. ಇಲ್ಲಿಗೆ ಮೂರು ವರ್ಷದ ಹಿಂದಿನ ವರೆಗೆ ಆದಿಚುಂಚನಗಿರಿಗೇ ನಡೆಕೊಳ್ಳುತ್ತಿದ್ದ ಕುಂಚಿಟಿಗರಿಗೆ ನಂಜಾವಧೂತರು ತಲೆ ಎತ್ತಿದ್ದು ಸಹಜವಾಗೇ ಖುಷಿಯಾಗಿತ್ತು, ಕಳ್ಳಂಬೆಳ್ಳದ ಶಾಸಕ ಟಿ.ಬಿ. ಜಯಚಂದ್ರ, ಶಿರಾದಲ್ಲಿ ಮಾಜಿ ಮಂತ್ರಿ ಸತ್ಯನಾರಾಯಣರಂಥವರು ತಮ್ಮ ರಾಜಕೀಯಕ್ಕಾದರೂ ನಂಜಾವಧೂತರನ್ನು ಪೋಷಿಸಬೇಕಿತ್ತು, ಮಾಜಿ ಮಂತ್ರಿ ಚನ್ನಿಗಪ್ಪನವರಂತೂ ನಂಜಾವಧೂತರನ್ನು ಎತ್ತಾಡಿ ಮೆರೆಸಿಬಿಟ್ಟರು.

ಆದಿಚುಂಚನಗಿರಿ ಸ್ವಾಮಿಗೆ ಅನಾರೋಗ್ಯ ಮತ್ತು ವೃದ್ಧಾಪ್ಯ. ಕೆಂಗೇರಿಯ ಕುಮಾರ ಚಂದ್ರಶೇಖರನಾಥ ಹುಟ್ಟು ಸೋಮಾರಿ ಮತ್ತು ಪುಕ್ಕಲ. ಒಕ್ಕಲಿಗ ಜಗತ್ತಿನ ಇಂಥ ಕೊರತೆಯೊಂದನ್ನು ಬಳಸಿಕೊಂಡು ಕ್ರಮೇಣ ಬೆಂಗಳೂರಿಗೂ ವ್ಯಾಪಿಸಿದ ನಂಜಾವಧೂತರನ್ನು ಕೆಲ ಒಕ್ಕಲಿಗ ಸಂಘಟನೆಗಳು ಪೋಷಿಸತೊಡಗಿದವು. ಇತ್ತೀಚೆಗೆ ಕುಣಿಗಲ್ ಶಂಕರಮಠದ ಸಿದ್ಧರಾಮ ಚೈತನ್ಯ ಸ್ವಾಮೀಜಿ ಒಕ್ಕಲಿಗ ಜಗದ್ಗುರು ಸಿದ್ಧರಾಮಪೀಠ ಸ್ಥಾಪಿಸಿ ವಿದ್ವತ್ತಿನಲ್ಲಿ ಬೇರೆಲ್ಲ ಒಕ್ಕಲಿಗ ಸ್ವಾಮಿಗಳಿಗಿಂತಲೂ ಒಂದು ಹೆಜ್ಜೆ ಮುಂದಾಗುವುದಕ್ಕೂ ಮುನ್ನ ನಂಜಾವಧೂತರ ಕೋಲ್ಗೇಟ್ ನಗು ಮತ್ತು ಲಿಪ್‌ಸ್ಟಿಕ್ ಮುಖಾರವಿಂದವೇ ಎಲ್ಲೆಂದರಲ್ಲಿ ಮಿಂಚುತ್ತಿತ್ತು.

ಹಕೀಕತ್ತೇನೆಂದರೆ ನಂಜಾವಧೂತರು ಕೂಡ ಒಂದಾನೊಂದು ಕಾಲಕ್ಕೆ ಆದಿಚುಂಚನಗಿರಿಯ ಆಧೀನ ಸ್ವಾಮಿಯಾಗಿದ್ದವರೇ. ಆದಿಚುಂಚನಗಿರಿ ಅನ್ನ ತಿಂದೇ ಬೆಳೆದು ಅಲ್ಲೇ ವೇದಾಧ್ಯಯನ ಮುಗಿಸಿ ಕ್ರಮೇಣ ಆದಿಚುಂಚನಗಿರಿಯ ಶಾಖಾಮಠವಾಗಿದ್ದ ಸ್ಪಟಿಕಪುರಿ ಸಂಸ್ಥಾನಕ್ಕೆ ಮರಿಸ್ವಾಮಿಯಾಗಿ ಬಾಲಗಂಗಾಧರರಿಂದ ನೇಮಕಗೊಂಡವರು ನಂಜಾವಧೂತರು. ಇಲ್ಲಿಗೆ 10 ವರ್ಷದ ಹಿಂದೆ ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಯ ಸ್ಪಟಿಕಪುರಿ ಮಠ ಕೂಡ ಆದಿಚುಂಚನಗಿರಿಯ ಶಾಖಾಮಠಗಳ ಪೈಕಿ ಒಂದೆಂದೇ ಚಾಲ್ತಿಯಲ್ಲಿತ್ತು. ಅದನ್ನು ಆದಿಚುಂಚನಗಿರಿಗೆ ಬರೆದು ಕೊಡ್ತೀನಿ ಎಂದೇ ಹೇಳಿಕೊಂಡು ಬಂದಿದ್ದ ಕರಿಗೌಡರು ಸಂಬಂಧದಲ್ಲಿ ನಂಜಾವಧೂತರಿಗೆ ತಾತನಾಗಬೇಕು. ಪಟ್ಟನಾಯಕನಹಳ್ಳಿಯ ಗುರುಗುಂಡೇಶ್ವರ ದೇವಾಲಯ ಮತ್ತು ಸ್ಪಟಿಕಪುರಿ ಮಠದ ಜಮೀನಿನ ಮಾಲೀಕರಾಗಿದ್ದ ಕರಿಗೌಡರು ಅದನ್ನು ಆದಿಚುಂಚನಗಿರಿಗೆ ಬರೆದು ಕೊಡುತ್ತೇನೆಂದೇ ಬಾಲಗಂಗಾಧರರನ್ನು ನಂಬಿಸಿಕೊಂಡು ಬಂದರು.


ಬಾಲಗಂ ಸ್ವಾಮಿ

ನಂಬಿದ 'ಬಾಲಗಂ' ಸ್ವಾಮಿ ಪಟ್ಟನಾಯಕನಹಳ್ಳಿಯ ಗುರುಗುಂಡೇಶ್ವರ ದೇವಾಲಯವನ್ನು ತಮ್ಮ ಶಾಖಾ ಮಠವೆಂದೇ ಘೋಷಿಸಿಕೊಂಡಿದ್ದರು.

ಯಾವತ್ತು ನಂಜಾವಧೂತರನ್ನು ಪಟ್ಟನಾಯಕನನ್ನಾಗಿಸಿ ಮರಿಸ್ವಾಮಿಯಾಗಿ ಬಾಲಗಂ ನೇಮಿಸಿದರೋ ತಾತಾ ಕರಿಗೌಡರ ದುರಾಶೆ ಹೆಡೆಯೆತ್ತಿದೆ. ಕ್ರಮೇಣ ನಂಜಾವಧೂತರನ್ನೇ ಸ್ವತಂತ್ರವಾಗಿ ಸ್ವಾಮಿಯಾಗಿ ಚಾಲ್ತಿಗೆ ತರಲಾರಂಭಿಸಿದರು. ಜಾತಿಯಲ್ಲಿ ಕುಂಚಿಟಿಗರಾದ್ದರಿಂದ ಒಕ್ಕಲಿಗರ ಒಳಪಂಗಡವಾದ ಕುಂಚಿಟಿಗರಿಗೇ ಪ್ರತ್ಯೇಕ ಸ್ವಾಮಿಯೆಂದು ಸ್ವಯಂಘೋಷಿಸಿಕೊಂಡ ನಂಜಾವಧೂತರಿಗೆ ತುಮಕೂರು ಸುತ್ತಮುತ್ತಲ ಅವರದ್ದೇ ಜಾತಿಯ ಒಕ್ಕಲಿಗರಿಂದ ಸಾಕಷ್ಟು ಬೆಂಬಲವೂ ದೊರೆತಿತ್ತು, ಇದು ಗೊತ್ತಾಗಿದ್ದೇ ಆದಿಚುಂಚನಗಿರಿ ಸ್ವಾಮಿಯ ಹೊಟ್ಟೆಯಲ್ಲಿ ಖಾರ ಕಲಿಸಿದಂತಾಯ್ತು, ತಾನೇ ಸಾಕಿದ ಗಿಣಿ ತನ್ನನ್ನೇ ಕುಕ್ಕಲಾರಂಭಿಸಿದ್ದನ್ನು ಗಂಭೀರವಾಗೇ ಪರಿಗಣಿಸಿದ 'ಬಾಲಗಂ' ನಂಜಾವಧೂತರನ್ನು ಅದುಮಲೆಂದೇ ಶಿರಾದಲ್ಲಿ ಶಾಖಾ ಮಠವೊಂದನ್ನು ಹುಟ್ಟುಹಾಕಿದ್ದು ಇಲ್ಲಿಗೆ ಮೂರು ವರ್ಷದ ಹಿಂದೆ.

ಶಿರಾದ ಶಾಖಾಮಠದ ಕಾರ್ಯಕ್ರಮಕ್ಕೆಂದು ನಂಜಾವಧೂತರನ್ನೇ ವೇದಿಕೆಗೆ ಕರೆಸಲಾಗಿತ್ತು, ಅದೇ ವೇದಿಕೆಯಲ್ಲಿ ಮಾತಿಗೆ ನಿಂತ ಬಾಲಗಂ ತಮ್ಮ ಪಕ್ಕ ಕೂತಿದ್ದ ನಂಜಾವಧೂತರನ್ನುದ್ದೇಶಿಸಿ ಇನ್ನು ಮುಂದೆ ನಂಜಾವಧೂತರು ನಮ್ಮ ಈ ಶಾಖಾಮಠದ ಅಭಿವೃದ್ಧಿಗಾಗಿಯೇ ಶ್ರಮಿಸಬೇಕೇ ಹೊರತು ತಮ್ಮದೇ ಪ್ರತ್ಯೇಕ ಸಾಮ್ರಾಜ್ಯ ಸ್ಥಾಪಿಸುವುದಲ್ಲ. ಇದರಿಂದ ಜನಾಂಗದ ಏಳ್ಗೆಗೆ ಹಿನ್ನಡೆಯಾಗುತ್ತೆ, ಇದನ್ನು ನಂಜಾವಧೂತರು ಅರ್ಥ ಮಾಡ್ಕೋಬೇಕು ಎಂದು ಫರ್ಮಾನು ಹೊರಡಿಸಿದ್ದರು. ಅವತ್ತು ವೇದಿಕೆಯಲ್ಲಿ ಹಿರಿಸ್ವಾಮಿಗೆ ನಿಷ್ಠುರಾಗುಳಿಯುವ ಮಾತಾಡಿದ ನಂಜಾವಧೂತರು ಅಲ್ಲಿಂದಾಚೆಗೆ ಆದಿಚುಂಚನಗಿರಿಯತ್ತ ತಲೆ ಹಾಕುವುದನ್ನೇ ಬಿಟ್ಟುಬಿಟ್ಟರು. ತಾವೇ ಕುಂಚಿಟಿಗ ಜಗದ್ಗುರುವೆಂದು ಸ್ವತಂತ್ರ ಘೋಷಿಸಿಕೊಂಡರು.

ಬರುಬರುತ್ತ ಆದಿಚುಂಚನಗಿರಿ ಸ್ವಾಮಿಯ ಜೊತೆ ನಂಜಾವಧೂತರನ್ನೂ ಜನ ಕಾರ್ಯಕ್ರಮಕ್ಕೆ ಆಹ್ವಾನಿಸತೊಡಗಿದ್ದು ಬಾಲಗಂಗೆ ಇನ್ನಷ್ಟು ಹೊಟ್ಟೆಕಿಚ್ಚು ಹುಟ್ಟಿಸಿತು. ರಾಜಕೀಯವಾಗಿ ನಂಜಾವಧೂತರು ಪ್ರಬಲರಾದರು. ತನ್ನ ಆದೇಶವನ್ನೂ ಧಿಕ್ಕರಿಸಿ ಸ್ವತಂತ್ರ ಘೋಷಿಸಿಕೊಂಡ ಬಂಡುಕೋರ ಸ್ವಾಮಿಗೆ ಒಂದು ಗತಿ ಕಾಣಿಸಲೆಂದೇ ಚಡಪಡಿಸುತ್ತಿದ್ದ ಬಾಲಗಂಗೆ ಹೊಳೆದ ಉಪಾಯವೆಂದರೆ ನಂಜಾವಧೂತರ ವಿರುದ್ಧವೇ ಮತ್ತೊಂದು ಕುಂಚಿಟಿಗ ಮಠ ಹುಟ್ಟುಹಾಕುವುದು!


ನಂಜಾವಧೂತರು

ಬಾಲಗಂಗಾಧರರ ಈ ಷಡ್ಯಂತ್ರಕ್ಕೆ ಸಿಕ್ಕವರು ಹನುಮಂತನಾಥ ಸ್ವಾಮೀಜಿ. ನಂಜಾವಧೂತರಂತೆ ಮಠದಲ್ಲೇ ಬೆಳೆದು ಅಲ್ಲೇ ವೇದಾಧ್ಯಯನ ಮಾಡಿ ಮಠದ ಸೇವೆ ಮಾಡಿಕೊಂಡಿದ್ದ ಪಾವಗಡದ ಹನುಮಂತರಾಜು ಎಂಬ ಕುಂಚಿಟಿಗ ಯುವಕನಿಗೇ ದೀಕ್ಷೆ ಕೊಟ್ಟು ಹನುಮಂತನಾಥಸ್ವಾಮಿ ಎಂದು ಹೆಸರಿಟ್ಟರು. ನಂಜಾವಧೂತ ಲಿಪ್‌ಸ್ಟಿಕ್ ಸ್ವಾಮಿಯಾದರೆ ಹನುಮಂತನಾಥ ಪೌಡರ್ ಸ್ವಾಮಿ. ಮುಖಕ್ಕೆ ಪೌಡರ್ ಮೆತ್ತಿಕೊಂಡು ನಂಜಾವಧೂತರಂತೆ ಹಲ್ಲು ಕಿರಿದರೆ ಜನ ತನ್ನನ್ನೂ ಸ್ವಾಮಿ ಎಂದುಕೊಳ್ಳುತ್ತಾರೆಂಬುದು ಹನುಮಂತನಾಥರ ಭ್ರಮೆ. ಇಲ್ಲಿಗೆ ಆರು ತಿಂಗಳ ಹಿಂದೆ ಆದಿಚುಂಚನಗಿರಿ ದೀಕ್ಷೆ ತೊಟ್ಟು ಹೊರಬಿದ್ದ ಹನುಮಂತನಾಥ ಸ್ವಾಮಿ ತನ್ನ ಆಪರೇಷನ್ ಶುರು ಹಚ್ಚಿಕೊಂಡಿದ್ದು ಕೊರಟಗೆರೆಯ ಎಲೆರಾಂಪುರದಿಂದ.

ಅದೂ ನಂಜಾವಧೂತರಿಗೆಂದು ಯಲಹಂಕ ಪುರಸಭೆಯ ಮಾಜಿ ಅಧ್ಯಕ್ಷ ದೇವರಾಜಯ್ಯ ಕೊರಟಗೆರೆ ಎಲೆರಾಂಪುರದಲ್ಲಿ ಖರೀದಿಸಿಟ್ಟಿದ್ದ ಐದೆಕರೆ ಭೂಮಿಯಲ್ಲೇ ಹನುಮಂತನಾಥರ ಕುಂಚಿಟಿಗ ಮಹಾ ಸಂಸ್ಥಾನ ಮಠ ತಲೆ ಎತ್ತಿತ್ತು, ನಂಜಾವಧೂತರು ಎಲೆರಾಂಪುರಕ್ಕೆ ಬಂದು ಕುಂಚಿಟಿಗ ಮಹಾಸಂಸ್ಥಾನ ಮಠ ಸ್ಥಾಪಿಸುವ ಬದಲು ಈ ಭೂಮಿಯನ್ನೆಲ್ಲ ಮಾರಿ ಅದೇ ದುಡ್ಡನ್ನು ತನ್ನ ಸ್ಪಟಿಕಪುರಿ ಮಠಕ್ಕೆ ಕೊಡು ಎಂದು ದೇವರಾಜಯ್ಯನಿಗೆ ಆದೇಶ ಕೊಟ್ಟರಂತೆ. ಸಿಟ್ಟಿಗೆದ್ದ ದೇವರಾಜಯ್ಯ ನೇರವಾಗಿ ಆದಿಚುಂಚನಗಿರಿ ಸ್ವಾಮಿಗೇ ನಂಜಾವಧೂತರ ವಿರುದ್ಧ ದೂರಿತ್ತರಂತೆ. ಮೊದಲೇ ಸಮಯ ಕಾಯುತ್ತಿದ್ದ ಬಾಲಗಂ ಸ್ವಾಮಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ತಮ್ಮ ಶಿಷ್ಯನನ್ನು ಛೂಬಿಟ್ಟಿದ್ದಾರೆ. ಅಲ್ಲಿಗೆ ಕುಂಚಿಟಿಗರ ಸಾಮ್ರಾಜ್ಯವೇ ಇಬ್ಭಾಗವಾಗಿ ಆದಿ ಚುಂಚನಗಿರಿ ನಿಷ್ಠ ಹನುಮಂತನಾಥರಿಗೂ ಬಂಡುಕೋರ ನಂಜಾವಧೂತರಿಗೂ ಘರ್ಷಣೆ ಶುರುವಾಗಿದೆ.

ಸದ್ಯ ಕುಂಚಿಟಿಗರ ಸ್ವಾಮಿಗಳ ಪೈಕಿ ಹನುಮಂತನಾಥರು ತಮ್ಮೆಲ್ಲಾ ಪ್ರಚಾರಕ್ಕೆ ಬಾಲಗಂ ಸ್ವಾಮಿಗಳ ಫೋಟೋ ಬಳಸುತ್ತಿದ್ದಾರೆ. ಸ್ಪಟಿಕಪುರಿ ಸಂಸ್ಥಾನ ಮತ್ತು ಪಟ್ಟನಾಯಕನಹಳ್ಳಿಯ ಗುರುಗುಂಡೇಶ್ವರ ಕ್ಷೇತ್ರದ ವಿರುದ್ಧ ಈಗ ಕುಂಚಿಟಿಗರ ಮಹಾಸಂಸ್ಥಾನ ಮಠ ತಲೆ ಎತ್ತಿದೆ. ರಾಜ್ಯ ಕುಂಚಿಟಿಗರ ಮಹಾ ಮಂಡಲದ ಅಧ್ಯಕ್ಷ ದೇವರಾಜಯ್ಯನವರೇ ಹನುಮಂತನಾಥರ ಬೆನ್ನಿಗೆ ನಿಂತಿದ್ದಾರೆ. ಜೂನ್ 10 ರಂದು ಕೊರಟಗೆರೆ ವಡ್ಡಗೆರೆಯಲ್ಲಿ ನಡೆದ ಹನುಮಂತನಾಥರ 29 ನೇ ಹುಟ್ಟುಹಬ್ಬದ ಸಮಾರಂಭಕ್ಕೆ ಅರ್ಧ ಡಜನ್ ಸ್ವಾಮಿಗಳಲ್ಲದೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್‌ರನ್ನೇ ಉದ್ಘಾಟನೆಗೆ ಆಹ್ವಾನಿಸಲಾಗಿತ್ತು, ತುಮಕೂರಿನ ಅಷ್ಟೂ ರಾಜಕಾರಣಿಗಳನ್ನು ಕಲೆಹಾಕಿ ಹೊಸ ಸ್ವಾಮಿಗೆ ಭೋಪರಾಕ್ ಹಾಕಿಸುವ ಪ್ರಯತ್ನವನ್ನೂ ನಡೆಸಲಾಯ್ತು, ಸಮಾರಂಭದುದ್ದಕ್ಕೂ ಆದಿಚುಂಚನಗಿರಿ ಸ್ವಾಮಿಯ ಕಟೌಟನ್ನು ಮೆರೆಸಲಾಯಿತು.

ಇಷ್ಟಾದ ಮೇಲೆ ನಂಜಾವಧೂತರನ್ನು ಕೇಳಬೇಕೆ? ಕಂಡಕಂಡಲ್ಲಿ ಬಾಲಗಂಗಾಧರನಾಥರ ವಿರುದ್ಧ ಕಿಡಿಕಾರುತ್ತಿದ್ದಾರೆ. ಬಹಿರಂಗ ವೇದಿಕೆಗಳಲ್ಲೇ ಆದಿಚುಂಚನಗಿರಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಒಕ್ಕಲಿಗರಿಗೆಂದೇ ಹುಟ್ಟಿಕೊಂಡ ಬಾಲಗಂಗಾಧರ ಸ್ವಾಮಿಯ ಅಗಣಿತ ಸಾಮ್ರಾಜ್ಯ ಒಂದೆಡೆ ಅದರ ಭಾರಕ್ಕೆ ಕುಸಿಯುತ್ತಿದ್ದರೆ, ಅದರ ವಿರುದ್ಧ ದೇವೇಗೌಡರು ಹುಟ್ಟು ಹಾಕಿದ ಕು.ಚಂ.ನಾಥರಿಗೆ ಅರ್ಧ ರಾತ್ರಿಯ ಐಶ್ವರ್ಯ ಬಂದಂತಾಗಿ ತಲೆ ತಿರುಗಿಬಿಟ್ಟಿದೆ. ಮತ್ತೊಂದೆಡೆ ನಂಜಾವಧೂತರ ಅವತಾರ ಅವರ ವಿರುದ್ಧ ಈಗ ಹನುಮಂತನಾಥರ ಸಾಕ್ಷಾತ್ಕಾರ!


ಒಕ್ಕಲಿಗ ಸ್ವಾಮಿಗಳ ಪ್ರತಿಷ್ಠೆ ಪೈಪೋಟಿ, ಕುಚೇಷ್ಟೆಗಳೆಲ್ಲ ಕೊನೆಗೆ ಎಲ್ಲಿಗೆ ಬಂದು ನಿಲ್ಲುತ್ತೋ, ಏನು ಗತಿಯಾಗುತ್ತೋ ಬಲ್ಲವರ್‍ಯಾರು?

ಎಲ್ಲಾ ಕಾಲಭೈರವನ ಲೀಲೆ.....!


ಪಟ್ಟನಾಯಕನ ಹಳ್ಳಿಯ ಸ್ಪಟಿಕಪುರಿ

• ರಾ. ಸೋಮನಾಥ್

...ನ ಮನಸು ಹುಳ್ಳಗೆ



ದೇವರಿಗೆ ಹೆದರಿದನಾ ಯಡ್ಡಿ

...ಖ್ಯಮಂತ್ರಿ ಯಡಿಯೂರಪ್ಪ ಕಾನೂನಿಗಾಗಲಿ, ನ್ಯಾಯಕ್ಕಾಗಲಿ ...ಮನುಷ್ಯನಲ್ಲ. ಪಕ್ಷದ ಹೈಕಮಾಂಡಿಗಂತೂ ಕೇರೇ ಮಾಡುತ್ತಿಲ್ಲ. ...ರೋಧ ಪಕ್ಷಗಳಾಗಲೀ ಮತದಾರ ಪ್ರಭುವಿಗಾಗಲಿ ಕಿಲುಬು ...ಬೆಲೆಯನ್ನು ಕೊಡುತ್ತಿಲ್ಲ.

...ಷ್ಟು ಭಂಡತನವಿರುವ ಯಡ್ಡಿ ದೇವರಿಗೆ ಹೆದರಿದ್ದು ...ನಿಜ.

...ೂನ್ 27 ರಂದು ಧರ್ಮಸ್ಥಳಕ್ಕೆ ಬಾ, ಅಲ್ಲಿ ಆಣೆ ... ಎಂದು ವೀರಾಧಿವೀರನಂತೆ ಸವಾಲು ಹಾಕಿದ್ದ ...ಮಂಜುನಾಥ ದೇವರೆದುರು ಯಾಕೆ ಆಣೆ ...ಲ್ಲವೆಂದರೆ ಯಡ್ಡಿಗೆ ನಿಜವಾಗಲೂ ದೇವರ ...ನಂಬಿಕೆ ಇರುವುದರಿಂದ. ಅಷ್ಟೇ ಅಲ್ಲ ...ಮಡ್ಡು ದೋಚುತ್ತಿರುವುದು ಹಂಡ್ರೆಡ್ ...ತ್ ಸತ್ಯವೆಂಬುದು ಸ್ವತಃ ಯಡ್ಡಿಗೇ ...ವುದರಿಂದ.

...ರಡೂ ಸತ್ಯವಾದ್ದರಿಂದಲೇ ಹೆದರಿ ... ಆಣೆ ಮಾಡದೆ ರಣರಂಗದಿಂದ ಯಡ್ಡಿ ...ಮಾಗಿ, ಜನಸಾಮಾನ್ಯರೆದುರು ಬೆತ್ತಲಾಗಿ ...ದ್ದಾರೆ.

...ತಡೆದದ್ದು ವೀರೇಂದ್ರ ಹೆಗ್ಗಡೆ

...ಮು ನಿಜ.

... ಆಣೆ ಪ್ರಹಸನದಲ್ಲಿ ಇದ್ದವರು ಮೂವರು. ...ಯಡ್ಡಿ, ಇನ್ನೊಬ್ಬ ಕುಮಾರಸ್ವಾಮಿ. ...ನೆಯುವರೆಂದರೆ ಅದು ಸಾಕ್ಷಾತ್ ...ಸ್ಥಳದ ಮಂಜುನಾಥ ಸ್ವಾಮಿ!

...ಸದಿಯಾದಂತೆ ಜೂನ್ 27 ರ ಬೆಳಗ್ಗೆ ...ಹಾಗೂ ಕುಮಾರಸ್ವಾಮಿ ದೇವರೆದುರು ... ನಾನೇ ಸತ್ಯವಂತನೆಂದು ಆಣೆ ...ಮೇ ಮಾಡುತ್ತಿದ್ದರು. ಇದ್ದವರು ...ರಲ್ಲಿ ಕದ್ದೋರ್‍ಯಾರು ...ವಂತೆ ಇವರಿಬ್ಬರು ...ರೆಂದು ಸ್ವಯಂ ಘೋಷಣೆ ...ಕೊಂಡರೆ ಆಗ ...ರನಾಗುವುದು ಬೇರಾರೂ ...

...ಂಜುನಾಥ ಸ್ವಾಮಿ ತಾನೆ? ...ದನ್ನು ಯೋಚಿಸಿದ ...ದ್ರ ಹೆಗ್ಗಡೆ ಈ ಇಬ್ಬರು ...ಗಳಿಂದ ದೇವರನ್ನು ...ಕೆಂದು ತೀರ್ಮಾನಿಸಿ ... ತಡೆಯೊಡ್ಡಿಬಿಟ್ಟರು.



...ಮು ಪೇಜಾವರ ಸ್ವಾಮಿ ಜೊತೆಗೆ ಚರ್ಚಿಸಿ ತನ್ನ ...ದಲ್ಲಿರುವ ಮಂಜುನಾಥ ದೇವರ ಮಹಿಮೆಯನ್ನು ... ಕೊಳ್ಳಬೇಕೆಂದರೆ ಈ ಇಬ್ಬರು ಬಂದು ಆಣೆ ...ದಂತೆ ನೋಡಿಕೊಳ್ಳಿ ಎಂದರು. ಅದರಂತೆ ...ಕ್ಕಿಳಿದ ಪೇಜಾವರ ಯಡ್ಡಿ-ಎಚ್‌ಡಿಕೆ ಜೊತೆ ...ಡಿದರು. ಅಷ್ಟರಲ್ಲಾಗಲೇ ಯಡ್ಡಿಗೆ ಆಣೆ ಮಾಡುವ ...ಜವಾಗಲೂ ಭಯವಾಗಿತ್ತು. ತಾನು ನಡೆಸಿರುವ ... ಭ್ರಷ್ಟಾಚಾರಗಳೆಲ್ಲಾ ನೆನಪಾಗಿ ರಕ್ತಕಾರಿ ಸಾಯುವ ಕನಸೂ ಬಿತ್ತೇನೋ....? ... ಆಣೆ ಪ್ರಮಾಣದ ಸಹವಾಸವೇ ಬೇಡವೆಂದು ತೀರ್ಮಾನಿಸಿಕೊಂಡಿದ್ದರು. ...ವೇಳೆಗೆ ಪೇಜಾವರ, ಇನ್ನಿತರ ಬಿಜೆಪಿ ನಾಯಕರು ಆಣೆ ಬೇಡವೆಂದರು. ... ಅದೇ ಬೇಕಿತ್ತು. ಆಣೆ ಕಾರ್ಯಕ್ರಮ ರದ್ದಾಯಿತು. ಈ ಮಧ್ಯೆ ಪೇಜಾವರ ಇಲ್ಲೂ ತಮ್ಮ ಕುತಂತ್ರ ಬುದ್ಧಿ ತೋರಿಸಿಯೇ ಬಿಟ್ಟರು. 'ಆಣೆ ಮಾಡಲ್ಲ ಎಂದು ಮೊದಲು ಹೇಳಿದ್ದು ಕುಮಾರಸ್ವಾಮಿ' ಎನ್ನುವಂತೆ ಗೊಂದಲ ಮೂಡಿಸಲು ಯತ್ನಿಸಿದರು. ಆದರೆ ಅಷ್ಟರಲ್ಲಿ ಯಡ್ಡಿ ಅಳುಕಿ ಹಿಂದೆ ಸರಿದಿದ್ದು ಜನರಿಗೆ ಗೊತ್ತಾಗಿಹೋಗಿತ್ತು.

ಒಟ್ಟಿನಲ್ಲಿ ವೀರೇಂದ್ರ ಹೆಗಡೆ ಮಂಜುನಾಥ ಸ್ವಾಮಿಗೆ ಒದಗಿದ್ದ ಬಿಕ್ಕಟ್ಟನ್ನು ಚಾಣಕ್ಯ ತಂತ್ರ ಬಳಸಿ ನಿವಾರಿಸಿಕೊಂಡಿದ್ದಾರೆ.

[illegible]

ಕರ್ನಾಟಕದ ರಾಜಕಾರಣದಲ್ಲಿ ಇದುವರೆಗೂ ಭ್ರಷ್ಟಾಚಾರ, ವಾಸ್ತು, ಸ್ವಜನಪಕ್ಷಪಾತ, ತೋಳ್ಬಲಗಳ ಪ್ರದರ್ಶನವಿತ್ತಾಗಲಿ ಈಗಿನಂತೆ ಆಣೆ-ಪ್ರಮಾಣ, ಮಾಟ-ಮಂತ್ರ -ತಂತ್ರಗಳ ಅಸಹ್ಯ ನಡವಳಿಕೆಗಳಿರಲಿಲ್ಲ. ಇಂಥ ಅಸಂಬದ್ಧಗಳನ್ನು ನಂಬುವ ಮುಠ್ಠಾಳರೆಲ್ಲಾ ಗುಟ್ಟಾಗಿ ಮಾಡಿಕೊಂಡು ಇರುತ್ತಿದ್ದರು. ಆದರೆ ಯಡಿಯೂರಪ್ಪ ಅಧಿಕಾರಕ್ಕೆ ಬಂದನಂತರ ರಾಜ್ಯ ರಾಜಕೀಯ ಇನ್ನೂ ಕೆಳಮಟ್ಟಕ್ಕಿಳಿಯಿತು. ವಿಧಾನಸೌಧದೆದುರೇ ಯಾರೋ ಮಾಟ ಮಾಡಿದರು. ಈ ಯಡ್ಡಿ ತಮಿಳುನಾಡಿನ ತಿರುಚೆಂಡೂರಿಗೆಲ್ಲಾ ಹೋಗಿ ಶತ್ರು ಸಂಹಾರ ಯಾಗ ಮಾಡಿಸಿ ಬಂದರು. ಅಂದಹಾಗೆ ಯಡ್ಡಿಗೆ ಇದರ ಅಡ್ರೆಸ್ ತೋರಿಸಿಕೊಟ್ಟವರು. ಬೇರೆ ಯಾರೂ ಅಲ್ಲ, ಮಹಾಮಹಿಮರಾದ ದೇವೇಗೌಡರು!

ಯಡ್ಡಿಯ ವಾಮಾಚಾರಗಳ ಮೇಲಿನ ನಂಬಿಕೆ ಕುರಿತಂತೆ ಏನೆಲ್ಲಾ ರೂಮರ್ ಹಬ್ಬಿದೆ ಯೆಂದರೆ ಶಿವಮೊಗ್ಗೆಯ ಯಡ್ಡಿ ಒಡೆತನದ ಕಾಲೇಜ್ ಕಾಂಪೌಂಡಿನೊಳಗೆ ಗರ್ಭಿಣಿ ಹೆಂಗಸೊಬ್ಬಳನ್ನು ಬಲಿಕೊಡುವ ಪ್ರಯತ್ನ ನಡೆದಿತ್ತು ಎನ್ನುವವರಿದ್ದಾರೆ. ಕೊಲೆಯಾದ ಹೆಂಡತಿ ಮೈತ್ರಾದೇವಿಯ ಆತ್ಮ ಕಾಡಬಹುದೆಂದು ಯಡ್ಡಿ ಹೆದರಿಕೊಂಡು ಅನೇಕ ತರದ ತಾಯತ ಮಾಡಿಸಿಟ್ಟು ಕೊಂಡಿರುವ ಬಗ್ಗೆಯೂ ಕತೆಗಳಿವೆ. ಈ ಯಡ್ಡಿ ತಿಂಗಳಿಗೊಂದಾವರ್ತಿ 'ಯಾರೋ ನನ್ನ ವಿರುದ್ಧ ಮಾಟ ಮಾಡಿಸಿದ್ದಾರೆ' ಎಂದು ಚೀರಿಕೊಳ್ಳುವುದಂತೂ ಜನರಿಗೆ ಪರ್ಮನೆಂಟ್ ಮನರಂಜನೆಯಾಗಿ ಹೋಗಿದೆ.


ಇಷ್ಟೆಲ್ಲಾ ಅವಿವೇಕತನವನ್ನು ಬೆಳೆಸಿಕೊಂಡಿರುವ ಯಡ್ಡಿ ಏಕಕಾಲದಲ್ಲಿ ದೇವರು-ದೆವ್ವ ಎರಡನ್ನೂ ನಂಬುತ್ತಿದ್ದಾರೆ. ಈ ತರದ ಅಪ್ರಬುದ್ಧರೇ ದೇವರ ಮೇಲೆ ಆಣೆ ಹಾಕುವಂತೆ ಇನ್ನೊಬ್ಬರಿಗೆ ಬಹಿರಂಗ ಸವಾಲು ಹಾಕುತ್ತಾರೆ. ಯಡ್ಡಿ ಮಾಡಿದ್ದು ಅದನ್ನೇ. ಯಡ್ಡಿ ಭ್ರಷ್ಟಾಚಾರದಲ್ಲಿ ಮಾತ್ರವಲ್ಲ, ಕಂದಾಚಾರದಲ್ಲೂ ಇಂಡಿಯಾ ದೇಶದ ನಂ. 1 ಮುಖ್ಯಮಂತ್ರಿ.

ಈ ಮುಠ್ಠಾಳನಿಗೆ ಉಗಿದು ಬುದ್ಧಿ ಹೇಳಬೇಕಾದ ಬಿಜೆಪಿ ನಾಯಕರು ಯಡ್ಡಿ ಕೊಡುವ ದುಡ್ಡಿನ ಪ್ರಸಾದ ತಿಂದುಕೊಂಡು ಹಾಯಾಗಿದ್ದಾರೆ.

ಸನ್ನಿಧಿಗೆ ಬಂದು ಆಣೆ ಮಾಡುತ್ತೇನೆಂದಿದ್ದ ಯಡ್ಡಿ ಆ ದೇವರಿಗೂ ಕೈಕೊಟ್ಟಿದ್ದಾನೆ. ಏನೇ ಆಗಲಿ ಕಳ್ಳನ ಮನಸು ಹುಳ್ಳಗೆ ತಾನೆ?

• ಪಾರ್ವತೀಶ

ದೇವೇಗೌಡರನ್ನು ಕೆಣಕಿದರೆ...!



ಪ್ರೊ. ಕೆ.ವೆಂಕಟಗಿರಿಗೌಡರ ಹೆಸರನ್ನು ನೀವು ಮರೆತಿರಲಿಕ್ಕಿಲ್ಲ. ಆರ್ಥಿಕ ತಜ್ಞ ಎಂಬಿತ್ಯಾದಿ ಬಿರುದುಗಳಿದ್ದ ಗೌಡರು ಅದೆಲ್ಲಕ್ಕಿಂತ ಮುಖ್ಯವಾಗಿ ದೇವೇಗೌಡರ ವಿರುದ್ಧ ನಡೆಸಿದ ಪ್ರಚಾರ ಯುದ್ಧಗಳಿಗೆ ಫೇಮಸ್ ಆಗಿದ್ದವರು.

ವೆಂಕಟಗಿರಿ ಗೌಡರು ಈಗಿಲ್ಲ ಬಿಡಿ. ಆದರೆ ಅವರು ಬರೆದಿದ್ದ ದೇವೇಗೌಡರ ವಿರುದ್ಧದ ಒಂದು ಪುಸ್ತಕದ ದೆಸೆಯಿಂದಾಗಿ ಬೆಂಗಳೂರಿನ ಲಾವಣ್ಯ ಪ್ರಿಂಟರ್ಸ್‌ನವರು ಪಡಬಾರದ ಫಜೀತಿ ಅನುಭವಿಸುತ್ತಿದ್ದಾರೆ. ಏನಾಯಿತೆಂದರೆ ವೆಂಕಟಗಿರಿ ಗೌಡರು ದೇವೇಗೌಡರ ವಿರುದ್ಧ ಒಂದು ಭಯಂಕರ ಪುಸ್ತಕ ಬರೆದು ಲಾವಣ್ಯ ಮುದ್ರಣಾಲಯದಲ್ಲಿ ಪ್ರಿಂಟಿಸಿ, ಬಿಡುಗಡೆ ಮಾಡಿದ್ದರು. ಇದರಿಂದ ಸಿಟ್ಟಾದ ದೇವೇಗೌಡರು ದೆಹಲಿಯಲ್ಲಿ ಒಂದು ಮಾನನಷ್ಟ ಕೇಸ್ ದಾಖಲಿಸಿ ವೆಂಕಟಗಿರಿಗೌಡ ಹಾಗೂ ಲಾವಣ್ಯ ಪ್ರಿಂಟರ್ಸ್ ಇಬ್ಬರನ್ನೂ ಕೋರ್ಟಿಗೆ ಎಳೆದರು. ಈಗ ವೆಂಕಟಗಿರಿಗೌಡರಿಲ್ಲ. ಆದರೆ ಲಾವಣ್ಯ ಪ್ರಿಂಟರ್ಸ್‌ನವರು ಪ್ರತಿಸಾರಿ ಕೋರ್ಟ್ ಹಿಯರಿಂಗ್ ಬಂದಾಗಲೂ ದೆಹಲಿಗೆ ಹೋಗಿ ಬರುತ್ತಾ ಸುಸ್ತಾಗಿ ಹೋಗಿದ್ದಾರೆ. ಅವರು ಇತ್ತೀಚೆಗೆ ದೇವೇಗೌಡರ ಹತ್ತಿರ ಹೋಗಿ "ಸಾರ್ ನಮ್ಮದು ತಪ್ಪಾಯ್ತು, ಏನೋ ಹೊಟ್ಟೆಪಾಡಿಗೆ ಪ್ರಿಂಟಿಂಗ್ ಕೆಲಸ ಮಾಡ್ಕೊಂಡಿದ್ದೀವಿ. ನಮ್ಮ ಮೇಲಿನ ಕೇಸ್ ವಾಪಸ್ ತಗೊಳ್ಳಿ" ಅಂದರು.

ಆದಕ್ಕೆ ಗೌಡರು "ಆಯ್ತು, ನಾನು ಹೇಳಿದೆ ಅಂತ ಜಡ್ಜ್‌ಗೆ ಹೇಳಿ ಕೇಸ್ ನಿಲ್ಲುತ್ತೆ" ಅಂದರಂತೆ. ಒಂದು ಕೇಸ್ ಅನ್ನು ಈ ತರ ವಾಪಸ್ ತಗೊಳ್ಳೋಕೆ ಸಾಧ್ಯನಾ ಅನ್ನೋದೆ ನಮ್ಮ ಡೌಟು!

ಇದೇ ಗೌಡರಿಗೆ ಕೋಪ ಬಂದ ಕಾರಣದಿಂದಲೇ 'ಮುಖ್ಯಮಂತ್ರಿ ಐ ಲವ್ ಯೂ' ಎನ್ನುವ ಸಿನಿಮಾಗೂ ಕೋರ್ಟ್ ಸ್ಟೇ ಕೊಟ್ಟಿರುವ ವಿಚಾರ ನಿಮಗೆ ನೆನಪಿರಬಹುದು.

ಈ ದೇವೇಗೌಡರಿಗೆ ಕೋಪ ಬಂದರೆ ನಿಜವಾಗಲೂ ಕಷ್ಟ ಅಲ್ಲವಾ?

ಅನಂತ್ ವಿರುದ್ಧ ಲೆಹರ್ ಸಿಂಗ್ ಸೀಕ್ರೆಟ್ ಕ್ಯಾಂಪೇನ್!

ಯಡ್ಡಿಗೆ ವಿರೋಧ ಪಕ್ಷಗಳ ಕಾಟ ಜಾಸ್ತಿಯಾಗಿದೆ. ಅದಕ್ಕೆ ದಕ್ಷ ಆಡಳಿತ ಕೊಡಲಾಗುತ್ತಿಲ್ಲ ಎನ್ನುವ ಸಬೂಬನ್ನು ಬಿಜೆಪಿಗಳು ಯಾವಾಗಲೂ ಹೇಳುತ್ತಿರುತ್ತಾರೆ. ಆದರೆ ಬಿಜೆಪಿಯೊಳಗಿನ ಸಿವಿಲ್ ವಾರ್ ಬಗ್ಗೆ ಯಾರಿಗೆ ತಾನೇ ಗೊತ್ತಿಲ್ಲ.



ಯಡ್ಡಿ V/s ಈಶ್ವರಪ್ಪ, ಯಡ್ಡಿ V/s ಶೆಟ್ಟರ್, ಅನಂತು V/s ಯಡ್ಡಿ, ರೆಡ್ಡಿ V/s ಯಡ್ಡಿ... ಹೀಗೆ ಒಂದು ಡಜನ್ ಗುಂಪುಗಳು ಬಿಜೆಪಿಯಲ್ಲಿ ನಿತ್ಯ ಕದನ ನಡೆಸುತ್ತಿರುತ್ತಾರೆ. ಅವಕಾಶ ಸಿಕ್ಕಾಗೆಲ್ಲಾ ಪರಸ್ಪರರ ಕಾಲೆಳೆಯುತ್ತಿರುತ್ತಾರೆ. ಲೆಹರ್ ಸಿಂಗ್ ಅಂತವರಲ್ಲೊಬ್ಬ. ಯಡ್ಡಿಯ ದೋ ನಂಬರ್ ಡೀಲ್‌ಗಳನ್ನೆಲ್ಲ ನೋಡಿಕೊಳ್ಳುವವನೇ ಈ ಲೆಹರ್ ಸಿಂಗ್.

ಮೊನ್ನೆ ಏನಾಯಿತೆಂದರೆ ಇಂಗ್ಲಿಷ್ ವಾರಪತ್ರಿಕೆಯ ವರದಿಗಾರರೊಬ್ಬರು ಯಡ್ಡಿ ಬಳಿ ಏನನ್ನೋ ಮಾತನಾಡಿ ಎದ್ದು ಹೊರಟಾಗ ಈ ಲೆಹರ್ ಸಿಂಗ್ ಒಳಗಿನಿಂದ ಒಂದು ಕವರ್ ತಂದು ಕೊಟ್ಟಿದ್ದಾನೆ.

ಅದೇನೆಂದು ಈತ ತೆಗೆದು ನೋಡಿದರೆ 'Close Encounter with Neera Radia' ಪುಸ್ತಕ!


ಆರ್.ಕೆ.ಆನಂದ್ ಎಂಬುವವರು ಬರೆದಿರುವ ಈ ಇಂಗ್ಲಿಷ್ ಪುಸ್ತಕವು ಪ್ರಸಾರ ಅಥವಾ ಮಾರಾಟವಾಗದಂತೆ ಈಗ ಕೋರ್ಟ್ ತಡೆಯಾಜ್ಞೆ ನೀಡಿದೆ. ಈ ಪುಸ್ತಕದಲ್ಲಿ ಟಾಟಾ ಹಾಗೂ ನೀರಾ, ಅನಂತ್‌ಕುಮಾರ್ ಅಂಡ್ ನೀರಾ ಗೆಳೆತನಗಳ ಬಗ್ಗೆಯೆಲ್ಲಾ ಅನೇಕ ಸಂಗತಿಗಳನ್ನು ದಾಖಲಿಸಲಾಗಿದೆ.

ಇಂಥ ಅಮೋಘ ಸಂಗತಿಗಳಿರುವ ಪುಸ್ತಕ ಬ್ಯಾನ್ ಆದರೆ ಜನರಿಗೆ ಸತ್ಯ ಗೊತ್ತಾಗುವುದಿಲ್ಲವಲ್ಲ?

ಹಾಗಾಗಿ ಯಡ್ಡಿ 'ನೀರಾ ರಾಡಿಯಾ' ಪುಸ್ತಕದ ಐನೂರು ಪ್ರತಿ ತರಿಸಿ ಗುಟ್ಟಾಗಿ ಹಂಚುತ್ತಿದ್ದಾರೆ. ಅದೇರೀತಿ ಇಂಗ್ಲಿಷ್ ಪತ್ರಕರ್ತನಿಗೂ ನೀರಾ ಪುಸ್ತಕ ಸಿಕ್ಕಿದೆ.

ಈ ಲೆಹರ್ ಸಿಂಗ್ ಎಂತವನೆಂದರೆ ಆ ಪುಸ್ತಕ ತೆಗೆದು ಅನಂತು ಬಗ್ಗೆ ಯಾವ್ಯಾವ ಪುಟಗಳಲ್ಲಿ ಬರೆಯಲಾಗಿದೆ ಎಂಬುದನ್ನೆಲ್ಲಾ ವಿವರಿಸಿದ್ದಾನೆ.

ಅಂದಹಾಗೆ ಈಗ ಎಲ್ಲೂ ಸಿಗದ ನೀರಾ ಪುಸ್ತಕ ನಿಮಗೆ ಬೇಕಾಗಿದ್ದರೆ ಸೀದಾ ಯಡ್ಡಿ ಆಫೀಸ್‌ಗೆ ಹೋಗಿ, ಗ್ಯಾರಂಟಿಯಾಗಿ ಸಿಗುತ್ತದೆ.



ಕಿಲಾಡಿ ಪತ್ರಕರ್ತರು ಮನೆಹಾಳು ಐಡಿಯಾ ಹೇಳಿಕೊಟ್ಟರು

ಕೇರಳದ ಕೋಟಕಲ್ ಆಯುರ್ವೇದ ಶಾಲಾದಲ್ಲಿ ಮಸಾಜ್ ಮಾಡಿಸಿಕೊಂಡು ಮಜವಾಗಿದ್ದ ಯಡ್ಡಿ ಅಲ್ಲಿಂದಲೇ ದಿನಪತ್ರಿಕೆಗಳಿಗೆ ಒಂದು ದೊಡ್ಡ ಜಾಹೀರಾತು ಕೊಟ್ಟರಲ್ಲ... ಆ ಐಡಿಯಾ ಕೊಟ್ಟಿದ್ದು ಪತ್ರಕರ್ತರು.

ಏನಾಯಿತೆಂದರೆ ಯಾವಾಗ ಕುಮಾರಸ್ವಾಮಿ ಯಡ್ಡಿ ಸಂಧಾನಕ್ಕೆ ದೂತನನ್ನು ಕಳಿಸಿದ್ದರು ಎಂಬಿತ್ಯಾದಿ ಆರೋಪ ಮಾಡಿದರೋ ಆದರಿಂದ ಯಡ್ಡಿಗೆ ಮುಖಭಂಗವಾಗಿತ್ತು. ತಾನಿದ್ದ ಮಸಾಜ್ ಸೆಂಟರಿನಿಂದಲೇ ಬೆಂಗಳೂರಿನ ತನ್ನ ಬೆಂಬಲಿಗ ಪತ್ರಕರ್ತರಿಗೆ ಫೋನ್ ಮಾಡಿದ ಯಡ್ಡಿ 'ನನ್ನ ಖಂಡನಾ ಹೇಳಿಕೆಯನ್ನು ಹಾಗೂ ಆಣೆ ಪ್ರಮಾಣದ ಸವಾಲನ್ನು ಮುಖಪುಟದಲ್ಲೇ ಪ್ರಕಟಿಸಿ' ಎಂದು ಕೇಳಿದರಂತೆ.

ಆದರೆ 'ಹಾಗೆ ಮಾಡಲು ಸಾಧ್ಯವಿಲ್ಲ ಸಾರ್' ಎಂದು ಜಾರಿಕೊಂಡ ಪತ್ರಕರ್ತರು ನ್ಯೂಸ್‌ಗೆ ಬದಲಾಗಿ ಕಾಲುಪುಟದ ಜಾಹೀರಾತು ಕೊಟ್ಟರೆ ಹಾಕುವುದಾಗಿ ಹೇಳಿ ಯಡ್ಡಿ ಸಮಸ್ಯೆಗೆ ಪರಿಹಾರ ಸೂಚಿಸಿದರು. ಅವಿವೇಕಿ ಯಡ್ಡಿ ಹಿಂದೆಮುಂದೆ ಯೋಚಿಸದೆ, ಶಾಲಾ ಬಾಲಕರ ಲೆವೆಲ್‌ನ ಒಂದು ಸವಾಲಿನ ಹೇಳಿಕೆ ಕಂ ಜಾಹೀರಾತು ರೆಡಿ ಮಾಡಿಸಿದರು. ಸರ್ಕಾರಿ ಖರ್ಚಿನಲ್ಲಿ ಜಾಹೀರಾತನ್ನು ಕೊಟ್ಟರು.

ಇದಕ್ಕೆ ಖರ್ಚಾದ ಹಣ 80 ಲಕ್ಷ ರೂಪಾಯಿಗಳು.

ಈಗ ಜಾಹೀರಾತು ಕೊಟ್ಟ ಯಡ್ಡಿ ಕೋಡಂಗಿಯಾಗಿದ್ದರೆ ಮನೆಹಾಳು ಐಡಿಯಾ ಕೊಟ್ಟು 80 ಲಕ್ಷ ದುಡಿದುಕೊಂಡ ಪತ್ರಿಕಾ ಮಾಲೀಕರು ವೀರಭದ್ರನಂತಾಗಿದ್ದಾರೆ.


ಗುಲಬರ್ಗಾ ಜಿ.ಪಂ: ಮಹಿಳಾ ಸದಸ್ಯೆಯರ ವರಸೆ
ಗಂಡ ಬರದಿದ್ರೆ ಸಭೆಗೆ ಚಕ್ಕರ್



ಪುರುಷರಿಗೆ ಸರಿಸಮಾನವಾದ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮಹಿಳೆಯರನ್ನು ದೇಶದಾದ್ಯಂತ ಕಾಣುತ್ತೇವೆ. ಆದರೆ ತಮಗೆ ದೊರಕಿದ ಹಕ್ಕನ್ನು ಚಲಾಯಿಸದೆ ಅದನ್ನು ತಮ್ಮ ಗಂಡಂದಿರಿಗೆ ಕೊಡಬೇಕು ಎಂದು ಸಭೆಯನ್ನು ಬಹಿಷ್ಕರಿಸಿದ ಘಟನೆ ಎಲ್ಲಿಯಾದರೂ ಜರುಗಿದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಗುಲಬರ್ಗಾ ಜಿಲ್ಲಾ ಪಂಚಾಯತಿಗೆ ಗೆದ್ದು ಬಂದಿರುವ ಮಹಿಳಾ ಮಣಿಗಳು ಮಾತ್ರ ತಮ್ಮ ಹಕ್ಕನ್ನು ಗಂಡಂದಿರ ಬುಟ್ಟಿಗೆ ಹಾಕಿ ನಿರುಮ್ಮಳವಾಗಬೇಕೆಂದಿದ್ದಾರೆ.

ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದು ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಲು ಕಳೆದ ಜೂನ್ 27ರಂದು ಜಿಲ್ಲಾ ಪಂಚಾಯತ್ ಸಭೆಯನ್ನು ಕರೆಯಲಾಗಿತ್ತು, ಬೆಳಗ್ಗೆ 11 ಕ್ಕೆ ಸಭೆ ಆರಂಭವಾಗಬೇಕಿದ್ದರೂ ಮಧ್ಯಾಹ್ನ 1.30 ಆದರೂ ಜಿ.ಪಂ. ಅಧ್ಯಕ್ಷ ಶಿವಪ್ರಭು ಆಗಮಿಸಲಿಲ್ಲ, ಆದರೆ ಹೊರಗಡೆ ಭಾರಿ ಕಸರತ್ತಿನಲ್ಲಿ ತೊಡಗಿರುವಂತೆ ಕಂಡುಬರುತ್ತಿತ್ತು.

ವಿಚಿತ್ರವೆಂದರೆ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ವಸಂತರಾವ್ ಕುಲ್ಕರ್ಣಿ, ಮುಖ್ಯ ಯೋಜನಾಧಿಕಾರಿ ಬಸವರಾಜ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಕೆ. ಕೆಂಚಣ್ಣನವರ್ ಮುಂತಾದವರಲ್ಲದೆ ಹಲವಾರು ಇಲಾಖೆಯ ಅಧಿಕಾರಿಗಳು ಹಾಜರಿದ್ದರು. ಮಾಧ್ಯಮ ಪ್ರತಿನಿಧಿಗಳು ಹಾಗೂ ಸರಕಾರಿ ಅಧಿಕಾರಿಗಳು ಕೂಡುವ ಕುರ್ಚಿಗಳು ತುಂಬಿಹೋಗಿದ್ದರೆ, ಜನರಿಂದ ಆಯ್ಕೆಯಾಗಿ ಬಂದ ಜಿಲ್ಲಾ ಪಂಚಾಯತಿಯ ಸದಸ್ಯರುಗಳ ಕುರ್ಚಿಗಳು ಮಾತ್ರ ಖಾಲಿ ಖಾಲಿ ಹೊಡೆಯುತ್ತಿದ್ದವು.




ಜಿ.ಪಂ.ಅಧ್ಯಕ್ಷ ಶಿವಪ್ರಭು

ಜಿಲ್ಲಾ ಪಂಚಾಯತಿಯ ಹೊರಗಡೆ ಕೋರಂಗಿಂತಲೂ ಅಧಿಕ ಸದಸ್ಯರು ಇದ್ದರಾದರೂ ಅವರ್‍ಯಾರೂ ಒಳಹೋಗಿ ತಮ್ಮ ಆಸನದಲ್ಲಿ ಕುಳಿತುಕೊಳ್ಳುವ ಇರಾದೆ ತೋರಲೇ ಇಲ್ಲ, ಕೇವಲ ಎರಡು ವಾರಗಳ ಹಿಂದಷ್ಟೇ ಜರುಗಿದ ಸ್ಥಾಯಿ ಸಮಿತಿಯ ಸಭೆಯೊಂದರಲ್ಲಿ ಜಿಲ್ಲಾ ಪಂಚಾಯತಿಯ ಸದಸ್ಯೆಯೋರ್ವಳ ಗಂಡ ಶಿಕ್ಷಣ ಇಲಾಖೆಯ ಮುಖ್ಯಸ್ಥನನ್ನು ಹಿಗ್ಗಾ ಮುಗ್ಗಾ ಜರಿದಿದ್ದರಿಂದ ಪರಿಸ್ಥಿತಿ ತುಂಬಾ ಬಿಗಡಾಯಿತು, ಇದನ್ನು ದಾಳವಾಗಿ ಉಪಯೋಗಿಸಿಕೊಂಡ ಸರಕಾರಿ ಅಧಿಕಾರಿಗಳು ಜಿಲ್ಲಾ ಪಂಚಾಯತಿ ಕಟ್ಟಡದ ಪ್ರವೇಶ ದ್ವಾರದಲ್ಲಿ 'ಸಭೆಯಲ್ಲಿ ಸದಸ್ಯರಿಗೆ ಮಾತ್ರ ಪ್ರವೇಶ' ಎಂಬ ಬೋರ್ಡ್ ತಗುಲಿಸಿದ್ದರು. ಆದ್ದರಿಂದ ಜಿಲ್ಲಾ ಪಂಚಾಯತಿಗೆ ಗೆದ್ದು ಬಂದಿರುವ ಮಹಿಳಾ ಮಣಿಗಳು ತಮ್ಮ ಗಂಡಂದಿರನ್ನು ಹೊರಗೆ ಬಿಟ್ಟು ಅವರು ಮಾತ್ರ ಒಳಹೋಗಲು ನಿರಾಕರಿಸಿದರು.

ಇದಿಷ್ಟೆ ಅಲ್ಲದೆ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಶಿವಪ್ರಭು ಹಾಗೂ ಉಪಾಧ್ಯಕ್ಷ ಹರ್ಷಾನಂದ ಗುತ್ತೇದಾರ ಅವರು 13 ಹಣಕಾಸಿನಲ್ಲಿ 1.18 ಕೋಟಿ ಹಣ ಬಂದಿದ್ದರೂ ಸದಸ್ಯರಿಗೆ 72 ಲಕ್ಷ ಮಾತ್ರ ಹಣ ಬಂದಿದೆ ಎಂದು ತಪ್ಪು ಮಾಹಿತಿ ನೀಡಿದ್ದು ಯಾಕೆ? ಸದಸ್ಯರಿಗೆಲ್ಲಾ ತಲಾ 2 ಲಕ್ಷ ಮೊತ್ತದ ಕಾಮಗಾರಿಗೆ ಅವಕಾಶ ನೀಡಿ, ಅಧ್ಯಕ್ಷರಿಗೆ 25 ಲಕ್ಷ ಹಾಗೂ ಉಪಾಧ್ಯಕ್ಷರಿಗೆ 20 ಲಕ್ಷದಷ್ಟು ಕಾಮಗಾರಿಗಳನ್ನು ಈ ಹಣಕಾಸಿನ ಅವಧಿಯಲ್ಲಿ ಕೈಗೊಂಡಿರುವ ಗುಟ್ಟನ್ನು ರಟ್ಟು ಮಾಡುವಂತೆ ಆಡಳಿತಾರೂಢ ಪಕ್ಷದವರೇ ಅಧ್ಯಕ್ಷರ-ಉಪಾಧ್ಯಕ್ಷರನ್ನು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆದರೆ ಸಿ.ಇ.ಓ ಮಾತ್ರ ಈ ತಾರತಮ್ಯಕ್ಕೆ ತೇಪೆ ಹಚ್ಚಲು ಏನೇನೋ ಸಬೂಬು ಹೇಳಿದರು. ಆದರೆ ಕಳ್ಳನ ಮನಸ್ಸು ಹುಳ್ಳುಳ್ಳಗೆ ಎಂದಂತೆ ಶಿವಪ್ರಭು ಹಾಗೂ ಹರ್ಷಾನಂದನ ಮುಖ ಕಪ್ಪಿಟ್ಟು ಕಳಾಹೀನವಾಗಿತ್ತು.

ನಲವತ್ತೆರಡು ಸದಸ್ಯರಿರುವ ಜಿಲ್ಲಾ ಪಂಚಾಯತಿಯಲ್ಲಿ 22 ಸ್ಥಾನಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುವ ಮೂಲಕ ಅಧಿಕಾರದ ಗದ್ದುಗೆ ಹಿಡಿದ ಬಿಜೆಪಿ ಉಳಿದ ಸದಸ್ಯರೆಲ್ಲರ ಕಣ್ಣಿಗೆ ಮಣ್ಣು ತೂರಿ ತಾನೇ ಸಿಂಹಪಾಲನ್ನು ಗೆಬರಿಕೊಳ್ಳುವ ಹೊಂಚು ಹಾಕಿ ಯಶಸ್ವಿಯೂ ಆಗಿತ್ತು, ಈ ಕಳ್ಳ ನಡವಳಿಗಳ ಕುರಿತು ಪ್ರಶ್ನಿಸಬೇಕಾದ ವಿರೋಧ ಪಕ್ಷಗಳು ಸುಮ್ಮನೆ ವಿರಮಿಸಿ ಕುಳಿತಿರುವಾಗ ಆಡಳಿತ ಪಕ್ಷದ ಸದಸ್ಯರೆ ಅಧ್ಯಕ್ಷ/ ಉಪಾಧ್ಯಕ್ಷರ ಬುಡಕ್ಕೆ ನೀರುತಂದುಬಿಟ್ಟದ್ದಾರೆ.

ಸಹಜವಾಗಿ ಇದರಿಂದ ಕುಪಿತಗೊಂಡಿರುವ ಶಿವಪ್ರಭು ಹಾಗೂ ಹರ್ಷಾನಂದ ಗುತ್ತೇದಾರ ಎಂಬ ಖತರ್‍ನಾಕ್ ಆಸಾಮಿಗಳು ಜಿಲ್ಲಾ ಪಂಚಾಯತಿಗೆ ಆಯ್ಕೆಯಾದ ಮಹಿಳಾ ಸದಸ್ಯರ ಹೊರತುಪಡಿಸಿ ಅವರ ಸಂಬಂಧಿಕರ್‍ಯಾರು ಒಳಗಡೆ ಬರಬಾರದು ಎಂದು ಅಧಿಕಾರಿಗಳ ಜೊತೆಗೂಡಿ ಯೋಜ ರೂಪಿಸಿದರು. ಆದ್ದರಿಂದಲೆ ಸಭಾಂಗಣ ಪ್ರವೇಶದ್ವಾರದಲ್ಲಿ ಸದಸ್ಯರಿಗೆ ಮಾ ಪ್ರವೇಶವಿದೆ ಎಂಬ ಬೋರ್ಡ್ ತಗುಲು ಹಾಕಿ, ಏನೊಂದು ಗೊತ್ತಿ ಮಹಿಳಾ ಸದಸ್ಯರನ್ನು ಯಾಮಾರಿಸಿ ಕ್ರಿಯಾ ಯೋಜನೆ ರೂಪಿಸಬೇಕೆ



ಅಧ್ಯಕ್ಷ / ಉಪಾಧ್ಯಕ್ಷರ ಆಟಾಟೋಪ ಆಡಳಿತಪಕ್ಷದವರಿಂದಲೇ ಸದ್ಯ ಬ ಬಿದ್ದಿದೆ. ಜಿಪಂ ಸದಸ್ಯೆಯರಿಗೆ ಸರಿಯ ಕಾನೂನು ತಿಳಿವಳಿಕೆ ಇಲ್ಲದಿರುವು ಕೆಲ ಖದೀಮರಿಗೆ ಬೇಕಾಬಿಟ್ಟಿ ನುಂಗ ನೆರವಾಗಿದೆ. ಇದನ್ನೇ ಉಪಯೋಗಿ ಕೊಳ್ಳುವ ಪತಿ ದೇವರುಗಳು ತಂತ ಹೆಂಡಿರ ಹೆಸರಲ್ಲಿ ಮೆರೆದಾಡುತ್ತಿದ್ದಾ ಅಷ್ಟಕ್ಕೂ ಕಾನೂನು ತಿಳಿವಳಿಕೆ ಬ್ರ ವಿದ್ಯೆಯೇನಲ್ಲ, ಆದರೆ ಬಹುತೇ ಮಹಿಳಾಮಣಿಗಳಿಗೆ ಗಂಡಂದಿರ ಆಸರೆಯೇ ಆಪ್ಯಾಯಮಾನವಾಗಿ ಮಹಿಳೆಯರಿಗೆ ಇಂತಹುದೊಂದು ಸ್ಥಾನ ಮಾನ ಸಿಗಲು ನಡೆದ, ನಡೆಯುತ್ತಿರು ಹೋರಾಟಗಳಿಗೆ ಅವಮಾನದಂಥ ಸ್ಥಿತಿ.


ಕೇವಲ ಆರು ತಿಂಗಳುಗಳ ಹಿಂದಷ್ಟೆ ಅಸ್ತಿತ್ವಕ್ಕೆ ಬಂದಿದ್ದ ಜಿಲ್ಲಾ ಪಂಚಾಯ ಅಂಗಳ ಇನ್ನು ಮುಂದೆ ಅದು ಹಲವಾರು ತರಹೇವಾರಿ ನಾಟಕಗಳ ಅಖಾಡವಾಗಲಿದೆ ಎಂಬ ಮುನ್ಸೂಚನೆಯನ್ನು ಈಗಲೇ ನೀಡಿದೆ. ಹೊಸದಾ ಆಯ್ಕೆಯಾಗಿ ಬಂದಿರುವ ಮಹಿಳಾ ಸದಸ್ಯೆಯರಿಗೆ ಸರಿಯಾದ ರೀತಿಯ ಕಾನೂನಿನ ತಿಳಿವಳಿಕೆ/ ಜಿ.ಪಂಚಾಯತಿಯ ಒಳನೋಟಗಳನ್ನು ತಿಳಿಸದೆ ಹೋದ ಅವರು ಹೆಸರಿಗೆ ಮಾತ್ರ ಸದಸ್ಯರಾಗುತ್ತಾರೆ. ಹಿಂಬಾಗಿಲಿನ ರಾಜಕೀಯವ ಚೋರಾಗಿ ಅಭಿವೃದ್ಧಿ ಎಂಬುದೆಲ್ಲ ಬರೀ ನಾಟಕವಾಗುತ್ತದೆ.

ಗುಲ್ಬರ್ಗಾ ಜಿಲ್ಲಾ ಪಂಚಾಯತಿಗೆ ಸರಕಾರ ನೀಡಿದ ಅನುದಾನ ಬಂತ ಹೋಯ್ತು ಎಂಬಂತಾಗುತ್ತದೆ ಮಾತ್ರ. ಆದರೆ ಆದು ಎಲ್ಲಿ ಖರ್ಚಾಯ ಯಾವುದಕ್ಕೆ ಖರ್ಚಾಯ್ತು? ಯಾವ ಸದಸ್ಯರ ಜಿ.ಪಂ. ಕ್ಷೇತ್ರಗಳಿಗೆ ಎ ಹಂಚಿಕೆಯಾಯ್ತು? ಎಂಬುದು ಬರೀ ಕಡತದಲ್ಲಿ ನೋಡಿ ತೃ ಪಟ್ಟುಕೊಳ್ಳಬೇಕಷ್ಟೆ!

• ವಿಶ್ವಾರಾಧ್ಯ ಸತ್ಯಂಪೇಟೆ

ಯಲಬುರ್ಗಾ: ರಾಜಕೀಯ ಅಖಾಡಕ್ಕೆ ಗಣಿಕಳ್ಳರ ಎಂಟ್ರಿ

ವಿರೋಧ ಪಕ್ಷಗಳ ಹೊಡೆತ, ಬಯಲಾಗುತ್ತಿರುವ ಸಿ.ಎಂ. ಕುಟುಂಬದ ಹಗರಣಗಳು, ಮಂತ್ರಿಗಳ ತೆವಲುಗಳು, ಸದ್ಯದಲ್ಲಿಯೇ ಹೊರಬರಲಿರುವ ಲೋಕಾಯುಕ್ತ ವರದಿ, ಕೋರ್ಟುಗಳಿಂದಲೇ ಸರ್ಕಾರಕ್ಕೆ ಛೀಮಾರಿ ಇವೆಲ್ಲವುಗಳಿಂದಾಗಿ ಯಡಿಯೂರಪ್ಪ ಸರ್ಕಾರದ ಭವಿಷ್ಯ ಡೋಲಾಯಮಾನ. ಒಂದು ವೇಳೆ ಸರ್ಕಾರವೇನಾದರೂ ಪತನವಾದರೆ ಮುಂದೆ ಚುನಾವಣೆಯೊಂದೇ ದಾರಿ.




ರಾಯರೆಡ್ಡಿ

ಈ ಎಲ್ಲ ಲೆಕ್ಕಾಚಾರಗಳಿಂದಾಗಿಯೇ ಎಲ್ಲೆಡೆ ಈಗ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿವೆ. ಇದರ ಭಾಗವಾಗಿಯೇ ಯಲಬುರ್ಗಾದ ರಾಜಕೀಯ ಅಖಾಡಕ್ಕೆ ಗಣಿಕಳ್ಳರ ಎಂಟ್ರಿಯಾಗಿದೆ. ಇಲ್ಲಿನ ರಾಜಕೀಯ ಇತಿಹಾಸ ಗಮನಿಸಿದರೆ ಇಲ್ಲಿಯವರೆಗೆ ಈ ಪ್ರದೇಶ ಶಾಂತಿಯುತ ರಾಜಕಾರಣಕ್ಕೆ ಹೆಸರಾಗಿತ್ತು. ಆದರೆ ಈಗ ಸೂರ್ಯನಾರಾಯಣ ರೆಡ್ಡಿ, ಜೆ.ಟಿ. ಪಂಪಾಪತಿ ಹಾಗು ವೆಂಕಟರಾವ್ ಘೋರ್ಪಡೆ ಯಂತಹ ಗಣಿಕಳ್ಳರ ಪ್ರವೇಶದಿಂದಾಗಿ ಹೊಡಿ-ಬಡಿ ರಾಜಕಾರಣ ಮೊಳಕೆಯೊಡೆಯುತ್ತಿದೆ. ಈಗಾಗಲೇ ಬಳ್ಳಾರಿಯಲ್ಲಿ ಕದ್ದ ಕೋಟಿ ಕೋಟಿ ದುಡ್ಡನ್ನು ತಂದು ಇಲ್ಲಿ ಸುರಿಯತೊಡಗಿದ್ದಾರೆ. ಇದರಿಂದಾಗಿ ಇಲ್ಲಿನ ಬಹುಪಾಲು ರಾಜಕೀಯ ಪುಢಾರಿಗಳೆಲ್ಲ ಈಗ ಗಣಿಕಳ್ಳರ ಹಿಂದೆ ಸುತ್ತ ತೊಡಗಿದ್ದಾರೆ.

ಪ್ರಸ್ತುತ ಈಗ ಇಲ್ಲಿ ಶಾಸಕರಾಗಿರುವ ಬಿಜೆಪಿಯ ಈಶಣ್ಣ ಗೂಳಪ್ಪನವರ ಅನಾರೋಗ್ಯದಿಂದ ಹಾಸಿಗೆ ಹಿಡಿದು ಬಹಳ ದಿನಗಳಾಯಿತು. ಈಗ ಇಲ್ಲಿ ಏನೇ ಇದ್ದರೂ ಈತನ ಮಗ ನವೀನಕುಮಾರನದೇ ಕಾರುಬಾರು. ವಿಧಾನ ಪರಿಷತ್ ಸದಸ್ಯ ಹಾಲಪ್ಪ ಆಚಾರ್ ಒಂದಷ್ಟು ಜನರ ಕೆಲಸ ಮಾಡುತ್ತಿದ್ದಾನಾದರೂ ನವೀನಕುಮಾರನ ಆಟಾಟೋಪ, ಭಾನಗಡಿಗಳು ವಸೂಲಿ ವ್ಯವಹಾರ ಮಿತಿಮೀರಿದ್ದರಿಂದಾಗಿ ಬಿಜೆಪಿ ಇಲ್ಲಿ ಜನರ ನಂಬಿಕೆಯನ್ನು ಕಳೆದುಕೊಳ್ಳುತ್ತಿದೆ. ಮಿತಿಮೀರಿದ ಭ್ರಷ್ಟಾಚಾರದಿಂದಾಗಿ ಜನ ಬೇಸತ್ತು ಹೋಗಿದ್ದಾರೆ. ಬಿಜೆಪಿಗೆ ಒಂದು ಗತಿ ಕಾಣಿಸಲು ಚುನಾವಣೆಗಾಗಿ ಕಾದು ಕುಳಿತಿದ್ದಾರೆ.


ಇದೇ ಸಂದರ್ಭವನ್ನು ಬಳಸಿಕೊಂಡು ಕಾಂಗ್ರೆಸ್ ಅಥವಾ ಜೆಡಿಎಸ್ ಮುಂದಿನ ಸಾರಿ ಗೆಲ್ಲಬಹುದೆಂಬ ನಿರೀಕ್ಷೆಯಲ್ಲಿರುವ ಗಣಿಕುಳಗಳು ಯಲಬುರ್ಗಾ ಕ್ಷೇತ್ರದ ಜೆಡಿಎಸ್ ಹಾಗೂ ಕಾಂಗ್ರೆಸ್ ಪಾಳೆಯಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಇವರ ಆಗಮನದಿಂದ ಈ ಪಕ್ಷಗಳನ್ನು ಕಟ್ಟಿ ಬೆಳೆಸಿದ, ಶಾಸಕರಾಗಲು ಕಾದು ಕುಳಿತಿರುವ ಮೂಲ ನಾಯಕರು ತತ್ತರಿಸಿಹೋಗಿದ್ದಾರೆ.

ಕಳೆದ ಸಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿರುವ ಮಾಜಿ ಸಚಿವ ಬಸವರಾಜ ರಾಯರೆಡ್ಡಿ ಹಲವಾರು ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಹಿಟ್ಲರ್‌ನಂತೆ ಮೆರೆದವನು. ಏನಾದರೂ ಮಾಡಿ ಮುಂದಿನ ಸಾರಿ ಮತ್ತೆ ಗೆಲ್ಲಲೇಬೇಕೆಂದು ಭರದಿಂದ ತಯಾರಿ ನಡೆಸಿದ್ದಾನೆ. ಆದರೆ ಈತನಿಗೆ ಟಾಂಗ್ ನೀಡಲು ಬಂದವನು ಬಳ್ಳಾರಿಯ ಪ್ಯೂಡಲ್ ಸಂತತಿಯ ತುಂಡು ವೆಂಕಟರಾವ್ ಘೋರ್ಪಡೆ. ಈತ ಎಂ.ವೈ. ಘೋರ್ಪಡೆಯ ತಮ್ಮ. ರಾಜಮನೆತನಕ್ಕೆ ಸೇರಿರುವ ಈತನಿಗೆ ಹಣೆದಾಳದಲ್ಲಿ ಅರಮನೆ ಹಾಗೂ 500 ಎಕರೆಗೂ ಹೆಚ್ಚು ಜಮೀನಿದೆ. ಮೇಲಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಪೃಥ್ವಿರಾಜ್ ಚೌವಾಣ ಈತನ ತಂಗಿಯ ಗಂಡ. ಇದಕ್ಕಿಂತ ಮುಖ್ಯವಾಗಿ ಬಳ್ಳಾರಿಯ ಗಣಿ ದರೋಡೆಯಲ್ಲಿ ಗಾಲಿ ರೆಡ್ಡಿಗಳಷ್ಟೇ ಈತನದೂ ಪಾಲಿದೆ. ಈ ಗಣಿಗಳಿಂದ ಕದ್ದ ಕೋಟಿಕೋಟಿ ಅಕ್ರಮ ದುಡ್ಡನ್ನು ತಂದು ಇಲ್ಲಿ ಸುರಿಯುತ್ತಿದ್ದಾನೆ. ಮಹಿಳೆಯರಿಗೆ ಸೀರೆ ಹಂಚುವುದು, ಸಾಮೂಹಿಕ ಮದುವೆ ಮಾಡಿಸುವುದು, ಗುಡಿಗುಡಾರ ಕಟ್ಟಿಸಿಕೊಡುವುದು, ಇಂತಹ ಅಗ್ಗದ ಗಿಮಿಕ್‌ಗಳನ್ನು ಶುರು ಹಚ್ಚಿಕೊಂಡಿದ್ದಾನೆ. ಮಹಾರಾಷ್ಟ್ರ ಸಿ.ಎಂ. ಚೌಹಾಣ್‌ನ ನೆಂಟನೆಂಬ ಕಾರಣಕ್ಕೆ ಕಾಂಗ್ರೆಸ್ ಟಿಕೆಟ್ ಸಿಗುವುದು ಗ್ಯಾರಂಟಿ ಎಂದು ಹೇಳಿಕೊಂಡು ತಿರುಗುತ್ತಿರುವ ಈತ ರಾಯರೆಡ್ಡಿಯನ್ನು ವಿರೋಧಿಸುವ ಭಿನ್ನಮತೀಯ ಗುಂಪಿಗೆ ನೀರುಗೊಬ್ಬರ ಹಾಕಿ ಮೆರೆಯುತ್ತಿದ್ದಾನೆ. ಇದರಿಂದಾಗಿ ಇಲ್ಲಿನ ಕಾಂಗ್ರೆಸ್‌ನಲ್ಲಿ ಪ್ರಶ್ನಾತೀತವಾಗಿ ಮೆರೆಯುತ್ತ ಬಂದಿರುವ ಬಸವರಾಜ್ ರಾಯರೆಡ್ಡಿಗೆ ನಡುಕ ಶುರುವಾಗಿದೆ.



ಪಂಪಾಪತಿ

ಇದು ಕಾಂಗ್ರೆಸ್‌ನ ಕತೆಯಾದರೇ ಜೆಡಿಎಸ್ ಅಂತೂ ತನ್ನ ನೆಲೆ ಭದ್ರಪಡಿಸಿಕೊಳ್ಳಲು ಗಣಿಕಳ್ಳರನ್ನು ತಂದು ಮೆರೆಸುತ್ತಿದೆ. ಇದರಿಂದ ತತ್ತರಿಸಿ ಹೋದವನು ಜೆಡಿಎಸ್‌ನ ನಿಷ್ಠಾವಂತ ಮುಖಂಡ ಸಿ.ಎಚ್. ಪಾಟೀಲ. ಈತ ತಳಮಟ್ಟದಿಂದ ಪಕ್ಷವನ್ನು ಕಟ್ಟಿ ಬೆಳೆಸಿ 2004 ರ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದ. ಇಲ್ಲಿನ ಬಹುಸಂಖ್ಯಾತ ಪಂಚಮಸಾಲಿ ಸಮಾಜಕ್ಕೆ ಸೇರಿದ್ದ ಈತ ಮುಂಬರುವ ಚುನಾವಣೆಯಲ್ಲಿ ತಾನು ಗೆಲ್ಲಲೇಬೇಕೆಂದು ಹಗಲಿರುಳು ಓಡಾಡುತ್ತಿದ್ದಾನೆ. ಈತನ ನಿದ್ದೆ ಕೆಡಿಸಿದ್ದು ಈಗತಾನೆ ಜೆಡಿಎಸ್ ಅಂಗಳ ಪ್ರವೇಶಿಸುತ್ತಿರುವ ಜೆ.ಟಿ. ಪಂಪಾಪತಿ ಹಾಗೂ ಸೂರ್ಯನಾರಾಯಣ ರೆಡ್ಡಿ ಎಂಬ ಗಣಿಕಳ್ಳರು.



ಸಿ.ಎಚ್.ಪಾಟೀಲ


ಜೆ.ಟಿ. ಪಂಪಾಪತಿ ಎಂಬ ಸಂಡೂರಿನ ಗಣಿ ಖದೀಮ ತನ್ನ ಹಡಬೆ ದುಡ್ಡನ್ನು ತಂದು ಇಲ್ಲಿ ಸುರಿಯುತ್ತಿದ್ದಾನೆ. ಮೈನ್ಸ್ ಹಾಗೂ ಟ್ರಾನ್ಸ್‌ಪೋರ್ಟ್ ವ್ಯವಹಾರ ನಡೆಸುವ ಈತ ಯಲಬುರ್ಗಾಕ್ಕೆ ಕಾಲಿಟ್ಟವನೇ ಇಲ್ಲಿನ ಜೆಡಿಎಸ್‌ನ ಮರಿನಾಯಕರನ್ನು ಖರೀದಿಸಲಾರಂಭಿಸಿದ್ದಾನೆ. ಮಠ ಮಂದಿರ, ಮಸೀದಿಗಳಿಗೆಲ್ಲ ಲೆಕ್ಕವಿಲ್ಲದಷ್ಟು ಪಾಪದ ದುಡ್ಡನ್ನು ಹಂಚುತ್ತಿದ್ದಾನೆ. ಮೊನ್ನೆ ಕುಕನೂರಿನಲ್ಲಿ ಸುಮಾರು 2 ಕೋಟಿ ಖರ್ಚು ಮಾಡಿ 350 ಜೋಡಿ ಮದುವೆ ಮಾಡಿಸಿದ್ದಾನೆ. ಈ ಕಾರ್ಯಕ್ರಮಕ್ಕೆ ಕುಮಾರಸ್ವಾಮಿ ಹಾಗೂ ಇನ್ನಿತರ ಜೆಡಿಎಸ್ ನಾಯಕರನ್ನು ಕರೆತರುವ ಉಮೇದಿನಲ್ಲಿದ್ದಾಗಲೇ ಅದಕ್ಕೆ ತೊಡರುಗಾಲು ಹಾಕಿದವನು ಮತ್ತೊ ಗಣಿಕಳ್ಳ ಸೂರ್ಯನಾರಾಯಣರೆಡ್ಡಿ.

ಕುಮಾರಸ್ವಾಮಿಯ ಖಾಸ ಭಂಟನಂತಿರುವ ಈತ ಒಬ್ಬ ಅಪ್ಪಟ ರೌಡಿ ಆಂಧ್ರ, ಇಲಕಲ್, ಯಲಬುಗಾ ಸೇರಿದಂತೆ ಹಲವಾರು ಕಡೆ ಈತ ಗ್ರಾನೈಟ್, ವ್ಯವಹಾರವಿದೆ. ಬಳ್ಳಾರಿಯ ಗಣಿ ಉದ್ಯಮವಿದೆ. ಜೊತೆಗೆ ಮೈತುಂಬ ಹುಂಬತನವಿದೆ. ಇಷ್ಟನ್ನು ಇಟ್ಟುಕೊಂಡ ಕುಮಾರಸ್ವಾಮಿ ಈತನನ್ನು ಬಳ್ಳಾರಿಯ ರೆಡ್ಡಿ ಸಹೋದರರಿಗೆ ಪರ್ಯಾಯವಾ ಬೆಳೆಸುವ ಹುಮ್ಮಸ್ಸಿನಲ್ಲಿದ್ದಾರೆ. ಈಗಾಗಲೆ ಈತ ಕುಮಾರಸ್ವಾಮಿ ಸಿಎಂ ಆಗಿದ್ದಾ ಅವರ ರಾಜಕೀಯ ಕಾರ್ಯದರ್ಶಿಯಾಗಿದ್ದ ಈಗ ಈತ ಜೆಡಿಎಸ್‌ನ ಹೈದರಾಬಾದ್ ಕರ್ನಾಟಕ ಭಾಗದ ಕೋರ್ ಕಮಿಟಿ ಅಧ್ಯಕ್ಷನಾಗಿದ್ದಾನೆ ಶಾಸಕನಾಗುವ ಹಂಬಲದಿಂದ ಇವನು ಮೊನ್ನೆ ಪಂಚಮಸಾ ಪೀಠದ ಹರಿಹರದ ಸಿದ್ಧಲಿಂಗ ಸ್ವಾಮಿಗೆ 80 ಲಕ್ಷ ಖರ್ಚು ಮಾಡಿ ಬೆಳ್ಳಿಯ ತುಲಾಭಾರ ಮಾಡಿಸಿದ್ದಾನೆ. ಇಲ್ಲಿ ಬಹುಸಂಖ್ಯಾತರಾಗಿರುವ ಪಂಚಮಸಾಲಿ ಜನರನ್ನು ಒಲೈಸು ಗಿಮಿಕ್ ಇದು. ಅದರಂತೆ ಕೊಪ್ಪಳದಲ್ಲಿ ಗಾಣಿಗ ಸಮಾವೇ ಮಾಡಿ ಲೋಕಸಭಾ ಸೇರುವ ಯತ್ನ ಮಾಡಿದ್ದನಾದರೂ ಸಾಧ್ಯವಾಗಲಿಲ್ಲ, ಒಟ್ಟಾರೆಯಾಗಿ ಯಲಬುರ್ಗಾ ರಾಜಕಾರ ದಲ್ಲಿ ಬಳ್ಳಾರಿಯ ಗಣಿ ಧೂಳು ಆವರಿಸಿಕೊಳ್ಳುತ್ತಿದೆ ಬಿಜೆಪಿಯ ರೆಡ್ಡಿ ಬ್ರದರ್ಸ್‌ಗಳಂತೆ ಈಗ ಜೆಡಿಎಸ್ ಕಾಂಗ್ರೆಸ್ ಕೂಡ ಗಣಿಕಳ್ಳರ ಮೊರೆಹೋಗಿವೆ. ಮುಂದಿನ ಚುನಾವಣ ಯಲ್ಲಿ ಎರಡೂ ಪಕ್ಷಗಳ ನಿಷ್ಠಾವಂತ ಮುಖಂಡರೆಲ್ಲ ಮೂಲೆ ಸೇರಿ ಬರೀ ಈ ಅದಿರು ಕಳ್ಳರೇ ಮೆರೆಯುವ ದಂತೂ ಸ್ಪಷ್ಟ.

• ಮಹಾಲಿಂಗಪ್ಪ ಆಲಬಾಳ

ಯಲಬುರ್ಗಾ ಕ್ಷೇತ್ರದಲ್ಲಿ ಪಂಚಮಸಾಲಿ ಸಮುದಾಯವೇ ಪ್ರಬಲ ಹಾಗು ಬಹುಸಂಖ್ಯಾತ ಸಮುದಾಯ. ಅದು ಬಿಟ್ಟರೆ ಗಾಣಿಗರು, ಹಿಂದುಳಿದ ವರ್ಗದವರು, ಮುಸ್ಲಿಮರು ಹಾಗೂ ದಲಿತರು ಬಹುಸಂಖ್ಯೆಯಲ್ಲಿದ್ದಾರೆ. ಯಾವ ರೀತಿ ನೋಡಿದರೂ ರೆಡ್ಡಿ ಸಮುದಾಯ ಇಲ್ಲಿ ಸಾವಿರಗಳ ಸಂಖ್ಯೆಯನ್ನು ದಾಟುವುದಿಲ್ಲ, ಆದರೆ ಬರೀ ತಮ್ಮ ಹಣಬಲ ಹಾಗು ತೋಳ್ಬಲದ ಮೂಲಕವೇ ತಮ್ಮ ಹಿಡಿತ ಸ್ಥಾಪನೆಗೆ ಹೊರಟಿರುವ ರೆಡ್ಡಿಗಳು ಮುಂಬರುವ ಚುನಾವಣೆಗಳಲ್ಲಿ ಹಿಡಿತ ಸಾಧಿಸಲು ಹೊರಟಿದ್ದಾರೆ. ಜೆ.ಟಿ. ಪಂಪಾಪತಿ, ಸೂರ್ಯನಾರಾಯಣ ರೆಡ್ಡಿ ಹಾಗೂ ಬಸವರಾಜ್ ರಾಯರೆಡ್ಡಿ ಈ ಮೂವರೂ ಪ್ರಮುಖ ಪಾತ್ರ ವಹಿಸಲಿದ್ದಾರೆ. ಹೀಗಾಗಿ ಮುಂದಿನ ರಾಜಕಾರಣ ಯಲಬುರ್ಗಾ ಮಟ್ಟಿಗೆ ಬರೀ ರೆಡ್ಡಿಗಳ ಕಾರುಬಾರಿನಿಂದ ತುಂಬಿರುತ್ತದೆ ಎಂಬುದು ದಿಟ.

ಮಂಡ್ಯ ಇಸ್ಕಾನ್ ಖದೀಮರಿಂದ ಭೂ ಕೊಳ್ಳೆ!



ಷ್ಣ ಭಕ್ತ ನಾಮಧಾರಿ ಇಸ್ಕಾನಿಗಳು ಭೂ ಕೊಳ್ಳೆಗೆ ನಿಂತಿದ್ದಾರೆ. ಸರ್ಕಾರಿ ುಗಳನ್ನೇ ಧಿಕ್ಕರಿಸಿದ್ದಾರೆ. ಬೆಂಗಳೂರಿನಿಂದ ಬಂದ ಈ ನಾಮಧಾರಿಗಳು ಕೃಷ್ಣ ಎನ್ನುತ್ತಲೇ ನೂರಾರು ರೈತರಿಗೆ ಉಂಡೆನಾಮ ತಿಕ್ಕಿ ಅವರ ಯನ್ನು ಕಿತ್ತುಕೊಂಡಿದ್ದಾರೆ. ತಮ್ಮ ಭೂದಾಹಕ್ಕೆ ಭ್ರಷ್ಟ ಅಧಿಕಾರಿಗಳನ್ನು ಂಡು ಸರ್ಕಾರಿ ಕಾನೂನುಗಳನ್ನೇ ಧಿಕ್ಕರಿಸಿ ಭೂ ಕೊಳ್ಳೆ ಹೊಡೆದಿದ್ದಾರೆ. ಭೂ ದಾಹ ಯಾವ ರಿಯಲ್ ಎಸ್ಟೇಟ್ ದಂಧೆಕೋರರಿಗೂ ಕಡಿಮೆ ತಮ್ಮ ಭೂದಾಹಕ್ಕೆ ಬಗ್ಗದ ರೈತರಿಗೆ ಕೊಡಬಾರದ ತೊಂದರೆ ತ್ತಿದ್ದಾರೆ. ಇದಕ್ಕಾಗಿ ಅಧಿಕಾರಿಗಳನ್ನು, ಪೊಲೀಸರನ್ನು ಮತ್ತು ಖಾಸಗಿ ಪಡೆಯನ್ನು ಬಳಸಿಕೊಳ್ಳುತ್ತಲೇ 250 ಎಕರೆಗಳಿಗೆ ಬೇಲಿ ಸುತ್ತಿ ಮತ್ತು ಸರ್ಕಾರದ ಕೋಟ್ಯಂತರ ರೂಗಳ ಜಮೀನನ್ನು ಕಬಳಿಸಿದ್ದಾರೆ. ಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಮಹದೇವಪುರ ಬಳಿ ನದಿ ಪಾತ್ರದ ವ್ಯಾಪ್ತಿಯಲ್ಲಿರುವ ಸರ್ವೆ ನಂ 411, ತರಿಪುರ ಮ ಸರ್ವೆ ನಂ 342ರಲ್ಲಿ ಸುಮಾರು 700 ಎಕರೆ ಸರ್ಕಾರಿ ಾಳವಿದ್ದು ಇದರ ಮೇಲೆ ಇಸ್ಕಾನ್ ಮುಕ್ಕುಏೀರರ ಕಣ್ಣು ಬಿದ್ದಿದೆ. ಈ ಭೂಮಿಯಲ್ಲಿ ಸುಮಾರು 150 ಎಕರೆ ಜಮೀನನ್ನು ಮಹದೇವಪುರ, ಮತ್ತು ಚಿಕ್ಕ ಅಂಕನಹಳ್ಳಿಗಳ ರೈತರು ತಮ್ಮ ಶಕ್ತ್ಯಾನುಸಾರ ಭೂಮಿಯನ್ನ ತ್ತು ಮಾಡಿ ಸುಮಾರು 50 ವರ್ಷಗಳಿಂದಲೂ ಉಳುಮೆ ಮಾಡುತ್ತಿದ್ದರು. ವನ್ನ ಗಮನಿಸುತ್ತಿದ್ದ ಇಸ್ಕಾನ್ ಮುಕ್ಕುಏೀರರು ತಮ್ಮ ಬೆಂಗಳೂರು ದೇಶದ ವಿವಿಧೆಡೆ ಮಾಡಿರುವ ಅಪರಾತಪರಾ ಕೆಲಸಗಳನ್ನ ಇಲ್ಲಿಯೂ ಮುಂದುವರೆಸಿದ್ದಾರೆ. ಈ ಭೂಮಿ ಮೈಸೂರಿಗೆ ಕೇವಲ 13 ಕಿಲೋ ್ ಹತ್ತಿರದಲ್ಲಿರುವುದರಿಂದ ತಮ್ಮ ಖಾರಸ್ಥಾನವನ್ನಾಗಿ ಮಾಡಿ ಕೊಳ್ಳಲು ಸ್ಕಾನಿಗಳಿಗೆ ಬಹಳ ಸಮಯ ಹಿಡಿಯಲೇ ಇಲ್ಲ, ಮೊದಲು ಇಸ್ಕಾನ್ ಇಲ್ಲಿ ಸಣ್ಣದಾಗಿ ವ್ಯವಸಾಯ ಮಾಡುತ್ತಿದ್ದ ಕೆಲ ರೈತರಿಗೆ ಆಮಿಷಗಳನ್ನು ಡಗಿದ್ದಾರೆ. ಈ ರೈತರಿಗೆ ಎಕರೆಗೆ ಕೇವಲ 5000 - 8000 ನ್ನು ನೀಡಿ ಮೊದಲಿಗೆ ಹತ್ತು ಎಕರೆ ಜಮೀನನ್ನು ಖರೀದಿಸಿದ್ದಾರೆ. ಸಹ ಅಕ್ರಮ. ಅಸಲಿಗೆ ಈ ರೈತರ ಹೆಸರಿನಲ್ಲಿ ಜಮೀನೇ ಮವುದರಿಂದ ಕೊಟ್ಟಷ್ಟನ್ನು ಪಡೆದುಕೊಳ್ಳೋಣ ಎಂದು ರೈತರೂ ಟ ಮಾಡಿದ್ದಾರೆ. ಯಾರ ಹೆಸರಿನಲ್ಲಿಯೂ ಇರದ ಭೂಮಿಯನ್ನ ಮಾಡಿಸಿಕೊಂಡಿದ್ದಾರೆ. ನಂತರ ನಡೆಸಿದ್ದು ಅಕ್ಷರಶಃ ಗೋಲ್‌ಮಾಲ್ ಗೂಂಡಾಗಿರಿ.

ನಾಮಧಾರಿಗಳು ಇದೇ ಸರ್ವೆ ನಂಬರ್‌ಗಳಲ್ಲಿ ವ್ಯವಸಾಯ ಮಾಡುತ್ತಿದ್ದ ರೈತರನ್ನು ಇಲ್ಲಿಂದ ಜಾಗ ಖಾಲಿ ಮಾಡಿಸಲು ಹೂಡಿದ ಕುತಂತ್ರಗಳು ದಲ್ಲ. "ಇಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿ ಬರಲಿದೆ. ನಿಮ್ಮ ಲ್ಲಿ ಜಮೀನೇ ಇಲ್ಲ ಹಾಗಾಗಿ ನೀವು ಇಲ್ಲಿಂದ ಜಾಗ ಖಾಲಿಮಾಡಿ" ಸಣ್ಣದಾಗಿ ಧಮಕಿಹಾಕಿದ್ದಾರೆ. ಇದರಿಂದ ಸಹಜವಾಗಿ ಹೆದರಿದ ಅಷ್ಟೋ ಇಷ್ಟೋ ಪರಿಹಾರ ಕೊಡಿ ಎಂದು ಅಲವತ್ತುಕೊಂಡಿದ್ದಾರೆ. ಕ ರೈತರಿಗೆ ಎಕರೆಗೆ 5000 ರೂ.ಗಳೊಳಗೆ ಕೊಟ್ಟು ಕೆಲಸ ಸಿಕೊಂಡಿದ್ದಾರೆ. ಇವರ ಆಮಿಷ ಮತ್ತು ಸುಳ್ಳಿಗೆ ಬಗ್ಗದ ಇನ್ನೂ ಕೆಲ ವಿರುದ್ಧ ಸ್ಥಳೀಯ ಪುಢಾರಿಗಳನ್ನು, ಗೂಂಡಾಗಳನ್ನು ಬಿಟ್ಟು ಅವರನ್ನೆಲ್ಲ ಬೀದಿಪಾಲು ಮಾಡಿದ್ದಾರೆ. ಹೀಗೆ ಬೀದಿಗೆ ಬಿದ್ದವರಲ್ಲಿ ಗಂಗಮತಸ್ಥ ಾಯದ ಬಡ ರೈತರೇ ಹೆಚ್ಚು

ತರಿಂದ ಹೀಗೆ ಅಕ್ರಮವಾಗಿ ಭೂಮಿ ಕ್ರಯ ಮಾಡಿಕೊಂಡ ಇಸ್ಕಾನ್ ರು ಇಸ್ಕಾನ್ ಅಂತರರಾಷ್ಟ್ರೀಯ ಅಧ್ಯಕ್ಷ ಮಧುಪಂಡಿತದಾಸ್ ಎಂಬ ಡಕೋರನ ಹೆಸರು ಆರ್.ಟಿ.ಸಿ.ಯಲ್ಲಿ ಬರುವಂತೆ ನೋಡಿಕೊಂಡಿದ್ದಾರೆ. ರು ಹತ್ತು ಸರ್ಕಾರಿ ಗೋಮಾಳ ಹಾಗೂ ಜಮೀನನ್ನ ಅಕ್ರಮವಾಗಿ ಸಿ, ಅವುಗಳಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ತಮಗಿಷ್ಟ ಬಂದಂತೆ ಕಲ್ಲುಗಳಿಂದ ಕಾಂಪೌಂಡ್ ನಿರ್ಮಿಸಿದ್ದಾರೆ. ಇಸ್ಕಾನಿನ ಬೆದರಿಕೆಗೆ ಬಗ್ಗದ ಸ್ವಿ, ಕಾವೇರಯ್ಯ, ರಂಗಯ್ಯ, ಮಾಸ್ತಮ್ಮ ಸೇರಿದಂತೆ ಸುಮಾರು 40 ಭೂಮಿಯನ್ನು ರೈತಸಂಘದ ಬೆಂಬಲದೊಂದಿಗೆ ಪ್ರತಿರೋಧ ಒಡ್ಡುತ್ತಲೇ ಕೊಂಡಿದ್ದಾರೆ. ಇಸ್ಕಾನ್‌ನ ಖದೀಮರು ಇಲ್ಲಿಗೆ ಪ್ರವೇಶ ಮಾಡಿದ್ದು ರಲ್ಲಿ, ಆದರೂ ಅವತ್ತಿನಿಂದ 2008ರ ತನಕ ಇಸ್ಕಾನ್ ವಿರುದ್ಧ ಂಗಪಟ್ಟಣದ ತಾಲ್ಲೂಕು ಆಡಳಿತ ಮತ್ತು ಜಿಲ್ಲಾಡಳಿತಕ್ಕೆ ರೈತರು ನೂರಾರು ಅರ್ಜಿಗಳ ಮತ್ತು ದೂರುಗಳ ಬಗ್ಗೆ ತಾತ್ಸಾರ ಅನುಸರಿಸಿದೆ. ನ್ನು ರೈತ ಹೋರಾಟಗಾರ ಸಿಸ್ವಾಮಿ ಮತ್ತು ಕೆ.ಎಸ್. ನಂಜುಂಡೇಗೌಡರು ಡಗೂಡಿ ತೀವ್ರವಾಗಿ ವಿರೋಧಿಸಿದ್ದಾರೆ. ಅದರ ಫಲವಾಗಿ ಆಗಿನ ಕಾರಿ ಮಂಜುನಾಥ್ ಪ್ರಸಾದ್‌ರವರು ಮೊದಲಬಾರಿಗೆ ಇಸ್ಕಾನ್ ಭೂಗಳ್ಳ ಮ್ಮ ಹೆಸರಿಗೆ ಭೂ ಮಂಜೂರಾಗಿರುವ ಆದೇಶ, ಮತ್ತಿತರ ದಾಖಲೆಗಳನ್ನು ಪಡಿಸಲು ಸೂಚಿಸಿದ್ದರು.

ದರಿಂದ ತಬ್ಬಿಬ್ಬಾದ ಇಸ್ಕಾನ್ ನಾಮಧಾರಿಗಳು, ರಾಜಕಾರಣಿಗಳು ಉನ್ನತ ಅಧಿಕಾರಿಗಳಿಂದ ಒತ್ತಡ ತಂದು ತಪ್ಪಿಸಿಕೊಳ್ಳುವ ಪ್ರಯತ್ನ ದರು. ಆದರೂ ರೈತರ ಮತ್ತು ರೈತ ಮುಖಂಡರ ಹೋರಾಟದ ಗಿ ಭೂದಾಖಲೆ ಮಾಡದೆ ಸ್ಥಳಪರಿಶೋಧನೆ ಮಾಡಿಸಿದರು. ಎಸ್.ಆರ್. ದ ತಹಸೀಲ್ದಾರ್ ಇಸ್ಕಾನ್‌ನ ಭೂಲೂಟಿಯನ್ನ ತಮ್ಮ ವರದಿಯಲ್ಲಿ ವಿವರವಾಗಿ ತಿಳಿಸಿದರು. ಆದರೂ ಈ ನಾಮಧಾರಿಗಳ ಮೇಲೆ ಕಾನೂನಿನ ಕ್ರಮ ಜರುಗುವುದೇ ಇಲ್ಲ. ಕರ್ನಾಟಕ ಭೂಕಂದಾಯ ಅಧಿನಿಯಮದ ಪ್ರಕಾರ ಭೂ ಮಂಜೂರಾತಿಯಾಗದಿದ್ದರೂ ಈ ಇಸ್ಕಾನ್ ಭೂ ಲೂಟಿಕೋರರು ದೊಡ್ಡ ಬಂಗಲೆಗಳನ್ನು ಮತ್ತು ಕಟ್ಟಡಗಳನ್ನ ಕಾಡಿನ ಮಧ್ಯೆ ಎಬ್ಬಿಸುತ್ತಲೇ ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಪರಮಾಶ್ಚರ್ಯ ಎಂದರೆ ಇಷ್ಟರಲ್ಲಾಗಲೇ ಸಂಸ್ಥೆಯ ಅಧ್ಯಕ್ಷ ಮಧುಪಂಡಿತ ದಾಸ್, ಕೆ.ಜಿ.ನಾರಾಯಣ್ ಮತ್ತು ಎಸ್.ಚಂದ್ರಶೇಖರ್ ಹೆಸರಿಗೆ ಸರ್ವೆ ನಂ 411ರಲ್ಲಿ ಇರುವ ನೂರಾರು ಎಕರೆ ಸರ್ಕಾರಿ ಗೋಮಾಳವನ್ನ ಅನುಭವದಾರರು ಎಂದು ಸರ್ಕಾರಿ ದಾಖಲೆಗಳಲ್ಲಿ ಬರುವಂತೆ ನೋಡಿಕೊಂಡಿದ್ದಾರೆಂದರೆ ಇಲ್ಲಿ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಅಮೇಧ್ಯ ತಿನ್ನಿಸಿದ್ದಾರೆ ಎಂಬುವುದನ್ನ ಇಸ್ಕಾನ್ ಕಳ್ಳರೇ ಬಹಿರಂಗಪಡಿಸಬೇಕಿದೆ.

ಈ ಸುಖಲೋಲುಪಿ ಇಸ್ಕಾನ್ ಕಳ್ಳರಿಗಾಗಿ ತಮ್ಮ ಜೀವನಾಧಾರಕ್ಕಿದ್ದ ತುಂಡು ಭೂಮಿಗಳನ್ನ ಕಳೆದುಕೊಂಡಿರುವ ರೈತರ ಗೋಳು ಮುಗಿಲು ಮುಟ್ಟಿದೆ. ಚಿನ್ನಮ್ಮ ಎಂಬಾಕೆ ತನ್ನ ಗಂಡ ಸಿದ್ದಯ್ಯನನ್ನು ಕಳೆದುಕೊಂಡ ಸಂದರ್ಭದಲ್ಲಿ ಇಸ್ಕಾನ್ ಕಳ್ಳರು ಆಕೆಯ ಮನೆ ಬಳಿಯೇ ಬಂದು ಸ್ಥಳೀಯ ಯಜಮಾನರಿಂದ ಒತ್ತಡ ತಂದು ಗಂಡನ ತಿಥಿಗೆ ಮುನ್ನ ಆಕೆಯ ಜಮೀನನ್ನು ಕಸಿದುಕೊಂಡಿದ್ದಾರೆ. ಬೆಸ್ತ ಜನಾಂಗದ ವಿಧವೆ ದೇವಮ್ಮನ ಜಮೀನನ್ನೂ ಬಿಟ್ಟಿಲ್ಲ, ಈಕೆಯ ಮಗಳು ಮೂಕಿ. ಕಾವೇರಿ ನದಿಯ ಪಕ್ಕದಲ್ಲಿದ್ದ ವ್ಯವಸಾಯದ 3 ಎಕರೆ ಜಮೀನಿಗೆ 20,000 ರೂಪಾಯಿ ಕೊಟ್ಟು ಕಿತ್ತುಕೊಳ್ಳಲಾಗಿದೆ. ಕಲ್ಲು ಒಡೆದು ಜೀವನ ಸಾಗಿಸುತ್ತಲೇ 4 ಎಕರೆ ಜಮೀನು ಮಾಡಿದ್ದ ಕಣ್ಣನ್ ಕುಟುಂಬ ಸೇರಿದಂತೆ ಇಸ್ಕಾನ್ ಖದೀಮರ ಭೂದಾಹಕ್ಕೆ ಬಲಿಯಾಗಿರುವ ಬಹುಪಾಲು ರೈತರು ಇಸ್ಕಾನ್‌ನ ನಿಗೂಢ ಕೋಟೆಯೊಳಗೆ ಇವತ್ತು ಕೂಲಿಗಳಾಗಿ ದುಡಿಯುತ್ತಿದ್ದಾರೆ. ಸ್ಥಳೀಯ ರೈತರು ತಮ್ಮ ದನಕರುಗಳಿಗೆ ಹುಲ್ಲು ಕುಯ್ಯಲು ಹೋದರೆ ನಾಯಿಗಳನ್ನ ಛೂಬಿಟ್ಟು ಪೊಲೀಸರಿಂದ ಕೇಸು ಜಡಿಸಿ ತಮ್ಮ ಕ್ರೂರಬುದ್ಧಿಯನ್ನ ಸಾಬೀತುಪಡಿಸಿದ್ದಾರೆ. ಇಲ್ಲಿನ ಇಸ್ಕಾನ್ ಉಸ್ತುವಾರಿ ಹೊತ್ತಿರುವ ಚಂದ್ರಹರಿ ಎಂಬಾತ ಇಲ್ಲಿ ಲೂಟಿಹೊಡೆದಿರುವ ದುಡ್ಡಿನಿಂದ ಮೈಸೂರಿನಲ್ಲಿ 2 ಬಂಗಲೆ ಎಬ್ಬಿಸಿದ್ದಾನೆ. ಕನಕಪುರ ಬಳಿ ಎಸ್ಟೇಟ್ ಮಾಡಿದ್ದಾನೆನ್ನುವ ಸುದ್ದಿಯೂ ಇದೆ.

ಇಸ್ಕಾನ್ ಭೂಗಳ್ಳರು ತಮ್ಮ ಭೂದಾಹಕ್ಕೆ ನೂರಾರು ಎಕರೆಯಲ್ಲಿದ್ದ ಸಾವಿರಾರು ಮರಗಳನ್ನ ಕಡಿದಿದ್ದಾರೆ, ಅದರಲ್ಲೂ ಶ್ರೀಗಂಧದ ಮರಗಳನ್ನು ಕಡಿದು ಸಾಗಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೇ ನೀರಾವರಿ ಇಲಾಖೆಯ ಕಾಲುವೆಯನ್ನೂ ಬಿಡದೆ ಒತ್ತುವರಿ ಮಾಡಿದ್ದಾರೆ. ಕೆರೆ, ಕಾಲುವೆಗಳು, ಅರಣ್ಯ ಇಲಾಖೆಯ ಭೂಮಿ ಮತ್ತು ಸರ್ಕಾರಿ ದರಖಾಸ್ತು ಜಮೀನು




ಸೇರಿದಂತೆ 250 ಎಕರೆ ಜಮೀನನ್ನು ನಯವಂಚಕ ಇಸ್ಕಾನ್ ನಾಮಧಾರಿಗಳು ಅಕ್ರಮವಾಗಿ ಕಬ್ಜ ಮಾಡಿದ್ದಾರೆ. ಇದರ ಬಗ್ಗೆ ಈ ಇಲಾಖೆಗಳ ಅಧಿಕಾರಿಗಳಿಗೆ ದೂರು ನೀಡಿದ್ದರೂ ಅವರು ಯಾವ ಕ್ರಮವನ್ನು ಕೈಗೊಳ್ಳದಿರುವುದು ಯಾವ ಕಾರಣಕ್ಕಾಗಿ ಎಂಬುದು ರೈತರ ಪ್ರಶ್ನೆಯಾಗಿದೆ.

ಶ್ರೀರಂಗಪಟ್ಟಣದ ತಾಲ್ಲೂಕು ಆಡಳಿತ ಮಂತೂ ರೈತರ ಪಾಲಿಗೆ ಇದ್ದೂ ಸತ್ತಂತಾಗಿದೆ. ಸಣ್ಣಪುಟ್ಟ ರೈತರ ಅಂಗೈ ಅಗಲದ ಒತ್ತುವರಿ ಯನ್ನ ಬಹಳ ವೀರಾವೇಶದಿಂದ ತೆರವುಗೊಳಿಸುವ ತಹಶೀಲ್ದಾರ್ ಅರುಳ್ ಕುಮಾರ್, 250 ಎಕರೆ ಭೂಕೊಳ್ಳೆ ಹೊಡೆದಿರುವ ಇಸ್ಕಾನ್ ಸಂಸ್ಥೆಯ ಮೇಲೆ ಕ್ರಮವನ್ನೇ ಕೈಗೊಂಡಿಲ್ಲ, ತಹಶೀಲ್ದಾರ ಸಾಹೇಬರು ಸ್ಥಳೀಯ ಶಾಸಕನ ಏಜೆಂಟನಂತೆ ವರ್ತಿಸುತ್ತಿದ್ದಾನೆ. ಶಾಸಕ ರಮೇಶ್ ಬಾಬು ತನ್ನ ಕಲ್ಲುಗಳ್ಳತನದಲ್ಲೇ ಬ್ಯುಸಿಯಿದ್ದು ಇಸ್ಕಾನ್ ಭೂಗಳ್ಳರ ಜೊತೆ ಶಾಮೀಲಾಗಿದ್ದಾರೆನ್ನುವ ಆರೋಪಗಳು ಬಲವಾಗಿವೆ. ತಾಲ್ಲೂಕಿನಲ್ಲಿ ದರಖಾಸ್ತು ಭೂ ಸಾಗುವಳಿದಾರರ ಸುಮಾರು 10,000 ಅರ್ಜಿಗಳು ಬಂದು ಗೆದ್ದಲು ಹತ್ತುತ್ತಿದ್ದರೂ ದರಖಾಸ್ತು ಕಮಿಟಿಯ ಒಂದೇ ಒಂದು ಸಭೆಯೂ ನಡೆದಿಲ್ಲ, ಇದು ಇಸ್ಕಾನ್ ಮತ್ತು ಇತರೆ ಪ್ರಭಲ ಭೂಗಳ್ಳರಿಗೆ ಅನುಕೂಲವಾಗುವಂತೆ ಮಾಡಿದೆ. ಇಸ್ಕಾನ್ ಭೂಗಳ್ಳರು ರೈತರಿಗೆ ಸೇರಬೇಕಿದ್ದ ನೂರಾರು ಎಕರೆ ಸರ್ಕಾರಿ ಜಮೀನನ್ನು ಅಕ್ರಮ ಒತ್ತುವರಿ ಮಾಡಿರುವುದನ್ನು ಯಾರೂ ಅಲ್ಲಗಳೆಯುತ್ತಿಲ್ಲ, ನಿಗೂಢ ಕೋಟೆಯೊಳಗೆ ತಮ್ಮ ಭೂಮಿಯನ್ನ ಉಳಿಸಿಕೊಂಡಿರುವ ರೈತರಿಗೆ ಕೊಡಬಾರದ ತೊಂದರೆ ಕೊಡುತ್ತಿದ್ದಾರೆ. ಇತ್ತೀಚೆಗೆ ಈ ಕೃಷ್ಣ ಭಕ್ತರು ಸಾವಯವ ಕೃಷಿ, ಗೋಶಾಲೆಯ ಹೆಸರಿನಲ್ಲಿ ಭೂಮಿಯನ್ನ ಉಳಿಸಿಕೊಳ್ಳುವ ನಾಟಕವಾಡುತ್ತಿದ್ದಾರೆ. ಇದೆಲ್ಲವನ್ನೂ ನೋಡುತ್ತಲೇ ಜಿಲ್ಲಾಡಳಿತ ಮೌನಕ್ಕೆ ಶರಣಾಗಿದೆ. ಇದನ್ನ ವಿರೋಧಿಸಿ ರೈತಸಂಘದ ಮುಖಂಡ ನಂಜುಂಡೇಗೌಡ ಮತ್ತು ನಾಗೋಜಿರಾವ್‌ರ ನೇತೃತ್ವದಲ್ಲಿ ರೈತರು ತಮ್ಮ ಭೂಮಿಯನ್ನ ವಾಪಸ್ ಪಡೆಯಲು ದೊಡ್ಡ ಹೋರಾಟ ಮಾಡಲು ತಯಾರಿ ನಡೆಸಿದ್ದಾರೆ. ಇಷ್ಟಕ್ಕೆ ಎಚ್ಚೆತ್ತುಕೊಂಡು ಇಸ್ಕಾನ್ ಭೂ ಬಕಾಸುರರು ಜಾಗ ಖಾಲಿ ಮಾಡದಿದ್ದರೇ ರೈತರೇ ಅವರಿಗೆ ಪಾಠ ಕಲಿಸುವ ದಿನಗಳು ದೂರವಿಲ್ಲ,

• ಲಕ್ಷ್ಮಣ್ ಚೀರನಹಳ್ಳಿ

ಜಮಖಂಡಿ: ಬಡ ವಿದ್ಯಾರ್ಥಿಗಳ ರೊಕ್ಕದಲ್ಲಿ 'ಮನೋಹರ' ದರೋಡೆ!

ಬಡ ದಲಿತರ ಕಲ್ಯಾಣಕ್ಕೆಂದೇ ಜೀವ ಪಡೆದ ಸಮಾಜ ಕಲ್ಯಾಣ ಇಲಾಖೆ ಜಮಖಂಡಿಯ ಮಟ್ಟಿಗೆ ಯಾರ್‍ಯಾರನ್ನೋ ಬರಖತ್ತಾಗಿಸುತ್ತಿದೆ. ಸಿದ್ದು ಸವದಿ ಹಾಗೂ ಜಮಖಂಡಿ ಶಾಸಕ ಶ್ರೀಕಾಂತ ಕುಲಕರ್ಣಿ ಎಂಬ ಲಾಠಿವೀರರ ಕೈಗೆ ಸಿಕ್ಕ ಸದರಿ ಇಲಾಖೆ ತನ್ನತನವನ್ನು ಕಳಚಿಕೊಂಡು ತುಂಬಾ ಕಾಲವಾಗಿದೆ. ಸದ್ಯ ಈ ಇಲಾಖೆಗೆ ತಾಲ್ಲೂಕು ಅಧಿಕಾರಿಯಾಗಿರುವ ಮನೋಹರ ಅರಳಿಗಿಡದ ಬಡ ದಲಿತರ ಮಕ್ಕಳಿಗೆ ಸಿಗಬೇಕಿರುವ ಕನಿಷ್ಠ ಸೌಲಭ್ಯಗಳನ್ನೂ ನುಂಗಿ ನೊಣೆಯ ಹತ್ತಿದ್ದಾನೆ.



ಯಾವುದೇ ಮುಲಾಜು, ಮಾನಮರ್ಯಾದೆಗಳಿಲ್ಲದೆ ಮೇಯುತ್ತಿರುವ ಮನೋಹರ ಈ ಹಿಂದೆ ಕಾರವಾರದಲ್ಲಿದ್ದವನು. ಅಲ್ಲಿನ ಹಾಸ್ಟೆಲೊಂದರ ವಾರ್ಡನ್ ಮಹಿಳೆಯನ್ನು ತಡವಲು ಹೋಗಿ ಹೀನಾಯವಾಗಿ ಏಟು ತಿಂದಿದ್ದ ಈತ ಸರಿಯಾದ್ದೊಂದು ಕೇಸನ್ನೂ ಜಡಿಸಿಕೊಂಡಿದ್ದ. ಅಲ್ಲೇ ಇದ್ದರೆ ಉಳಿಗಾಲವಿಲ್ಲ ಎಂದರಿತ ಮನೋಹರ ತನ್ನ ಕುಲಬಾಂಧವ ಸಿದ್ದು ಸವದಿಯ ಅಂಗಳದಲ್ಲಿ ಅಂಗಾತ ಮಲಗಿ ಬಾಸುಂಡೆ ನೀವಿಕೊಳ್ಳಲಾರಂಭಿಸಿದ. ಸವದಿ ಜಮಖಂಡಿ ಶಾಸಕ ಕುಲಕರ್ಣಿಗೆ ಹೇಳಿ ಮನೋಹರನಿಗೊಂದು ಕಸುಬು ಕೊಡಿಸಿದ. ಹಾಗೆ ಜಮಖಂಡಿಯ ಸಮಾಜ ಕಲ್ಯಾಣ ಇಲಾಖೆಗೆ ಅಮರಿಕೊಂಡ ಈತ ಈ ಕ್ಷಣದವರೆಗೂ ದರೋಡೆ ನಡೆಸುತ್ತಿದ್ದಾನೆ.

2008 ರಲ್ಲಿ ಕಾರವಾರದ ವಾರ್ಡನ್ ಫಿಲೋಮಿನಾ ಎಂಬಾಕೆಗೆ ಕಿರುಕುಳ ಕೊಟ್ಟು ಕೇಸು ಜಡಿಸಿಕೊಂಡಿದ್ದನಲ್ಲಾ? ಅದಕ್ಕಾಗಿ ಇಂದಿಗೂ ಸರ್ಕಾರಿ ಖರ್ಚಿನಲ್ಲೇ ವಿಚಾರಣೆಗಾಗಿ ತಿರುಗಾಟ ನಡೆಸುತ್ತಿದ್ದಾನೆ. ಇದರ ವಿರುದ್ಧ ಯಾರೂ ಕೂಡಾ ಸೊಲ್ಲೆತ್ತುತ್ತಿಲ್ಲ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಮತಕರನೊಬ್ಬ ಕಮಂಗಿಯೂ ಈ ವಿಚಾರದಲ್ಲಿ ಬಾಯಿ ಸತ್ತಂತೆ ವರ್ತಿಸುತ್ತಿದ್ದಾನೆ. ಹತ್ತಾರು ವರ್ಷದಿಂದ ಇದೇ ಜಾಗೆಯಲ್ಲಿ ಕುಕ್ಕರಿಸಿರುವ ಕಮತಕರ ಮನೋಹರನ ಅಡ್ನಾಡಿ ಕೆಲಸಗಳಿಗೆಲ್ಲ ಭಾರೀ ಸಹಕಾರ ನೀಡುತ್ತಿದ್ದಾನೆ. ಜಮಖಂಡಿ ತಾಲ್ಲೂಕೊಂದರಲ್ಲೇ ಒಂಭತ್ತು ಹಾಸ್ಟೆಲ್‌ಗಳಿವೆ. ಸುಮಾರು ಎಂಟುನೂರು ವಿದ್ಯಾರ್ಥಿಗಳಿದ್ದಾರೆ. ಪ್ರತೀ ತಿಂಗಳು ಈ ವಿದ್ಯಾರ್ಥಿಗಳಿಗೆ ತಲಾ ಆರುನೂರಾ ಐವತ್ತು ರೂಪಾಯಿ ಸರ್ಕಾರಿ ಅನುದಾನ ಸಿಗುತ್ತದೆ. ಪ್ರತಿ ವಿದ್ಯಾರ್ಥಿಗಳಿಗೆ ಮೂವತ್ತು ರೂಪಾಯಿ ವಿಶೇಷ ಅನುದಾನದ ವ್ಯವಸ್ಥೆಯೇ ಇದೆ. ಈ ಒಟ್ಟಾರೆ ಹಣದಲ್ಲಿ ಮುಕ್ಕಾಲು ಭಾಗ ಪ್ರತೀ ತಿಂಗಳು ತಪ್ಪದೇ ಮನೋಹರನ ತಿಜೋರಿ ಸೇರುತ್ತಿದೆ.

ಇನ್ನುಳಿದಂತೆ ಪ್ರತೀ ತಿಂಗಳು ಒಟ್ಟು 20,750 ರೂಪಾಯಿ ಅನುದಾನ ಹರಿದುಬರುತ್ತದೆ. ಇದನ್ನು ಪಟ್ಟಂಪ್ರೂರಾ ಲಪಟಾಯಿಸುವ 'ಅರಳಿಗಿಡ' ಆರ್ಥಿಕವಾಗಿ ಹಸಿರಾಗತೊಡಗಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೂ ತಲಾ 725 ರೂಪಾಯಿ ಪ್ರತ್ಯೇಕ ಅನುದಾನ ಸೌಲಭ್ಯವಿದೆ. ಆದರೆ ಇದುವರೆಗೆ ಯಾವೊಬ್ಬ ವಿದ್ಯಾರ್ಥಿಗೂ ಈ ಹಣ ಸಿಕ್ಕಿಲ್ಲ, ಕೆಲ ವಿದ್ಯಾರ್ಥಿಗಳು ಇದನ್ನು ಪ್ರಶ್ನಿಸುವ ಧೈರ್ಯ ತೋರಿಸದೆ ದುಷ್ಟ ಮನೋಹರ ಪೊಲೀಸರ ಮೂಲಕ ಧಮಕಿ ಹಾಕಿಸಿ ತೆಪ್ಪಗಾಗಿಸುತ್ತಾನೆ. ಇದರಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳ ಪೋಷಕರು ಈ ಬಗ್ಗೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯದರ್ಶಿ ಡಾ. ಸಿ.ಜಿ. ಪ್ರಕಾಶ್‌ಗೆ ದೂರು ನೀಡಿದ್ದಾರೆ. ಆದರೆ ಪ್ರಕಾಶ್ ಪಕ್ಕಾ ಕೂಳುಬಾಕ. ಈತ ಕಳ್ಳಕಾಕರಿಂದೆಲ್ಲ ಪರ್ಸೆಂಟೇಜ್ ಪಡೆದು ಬಂದ ದೂರನ್ನೆಲ್ಲ ಕಸದಬುಟ್ಟಿಗೆಸೆಯುತ್ತಾ ಹಾಯಾಗಿದ್ದಾನೆ.

ಈ ಕ್ಷಣದಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ತಡಕಾಡಿದರೂ ಸರ್ಕಾರದ ಯೋಜನೆಗಳು ಬಡ ವಿದ್ಯಾರ್ಥಿಗಳಿಗೆ ತಲುಪಿದ ಒಂದೇ ಒಂದು ಉದಾಹರಣೆಯೂ ಸಿಗುವುದಿಲ್ಲ, ಪ್ರತಿ ಹಾಸ್ಟೆಲ್ ವಿದ್ಯಾರ್ಥಿಗಳು ಕನಿಷ್ಠ ಮೂಲಭೂತ ಸೌಕರ್ಯಗಳೂ ಇಲ್ಲದೆ ನರಕ ಅನುಭವಿಸುತ್ತಿದ್ದಾರೆ. ಶಾಲೆ ಪ್ರಾರಂಭವಾಗಿ ಐದಾರು ತಿಂಗಳು ಕಳೆದರೂ ಈ ವಿದ್ಯಾರ್ಥಿಗಳಿಗೆ ಸಮವಸ್ತ್ರದ ಭಾಗ್ಯ ಸಿಗುತ್ತಿಲ್ಲ, ಹಾಗಂತ ಪ್ರಶ್ನಿಸಲು ಹೋದರೆ ಪೊಲೀಸರ ಧಮಕಿ ಗ್ಯಾರಂಟಿ. ಕೊಟ್ಟ ದೂರಿಗೆ ಯಾವ ಪ್ರತಿಕ್ರಿಯೆಗಳೂ ಬರುವುದಿಲ್ಲ,

ಪ್ರತಿ 50 ವಿದ್ಯಾರ್ಥಿಗಳಿಗೆ ಮೂರು ಮಂದಿ ಅರೆಕಾಲಿಕ ಬೋಧಕರಿಂದ ಪಾಠ ಹೇಳಿಸಬೇಕೆಂಬ ನಿಯಮವಿದೆ. ಆದರೆ ಮನೋಹರ ನಿವೃತ್ತಿ ಹೊಂದಿದವರಿಂದ ಪಾಠ ಹೇಳಿಸಿ ಅವರಿಗೆ ಚೂರುಪಾರು ಚಿಲ್ಲರೆ ಕೊಟ್ಟು ಅನುದಾನದ ಹಣವನ್ನು ತಾನೇ ನುಂಗುತ್ತಿದ್ದಾನೆ. ಐನೂರು ರೂಪಾಯಿಗಿಂತ ಅಧಿಕವಿರುವ ಬಿಲ್‌ಗಳನ್ನ ತಾಲ್ಲೂಕು ಅಥವಾ ಜಿಲ್ಲಾ ಪಂಚಾಯ್ತಿಗೆ ಕಳಿಸಬೇಕೆಂಬುದು ನಿಯಮ. ಇದನ್ನು ಪಾಲಿಸಿದರೆ ಕೆಎಸ್‌ಸಿ ಹಾಗೂ ಇಎಸ್‌ಡಿ ನಂಬರಿದ್ದರೆ ಮಾತ್ರ ಬಿಲ್ ಪಾಸ್ ಆಗುತ್ತೆ. ಆದರೆ ಮನೋಹರ ಯಾರ ಗಮನಕ್ಕೂ ತರದೆ ನಾಜೂಕಾಗಿ ಬಿಲ್ ಪಾಸ್ ಮಾಡಿಕೊಳ್ಳುತ್ತಾನೆ. ತಾಲ್ಲೂಕು ಪಂಚಾಯ್ತಿ ಅಧಿಕಾರಿ ರಾಜಕುಮಾರ ತೊರವಿಗೆ ಇದೆಲ್ಲ ಗೊತ್ತಿದ್ದೂ ಏನೂ ಮಾಡದ ಸ್ಥಿತಿ ತಲುಪಿದ್ದಾರೆ. ಇದಕ್ಕೆ ಸವದಿ ಹಾಗೂ ಕುಲಕರ್ಣಿಗಳು ಮನೋಹರನ ಸಪ್ಪೋರ್ಟ್‌ಗಿರುವುದೇ ಪ್ರಮುಖ ಕಾರಣ. ಈ ರೀತಿ ಬಡ ವಿದ್ಯಾರ್ಥಿಗಳನ್ನು ಸಕಲ ಸೌಲಭ್ಯಗಳಿಂದಲೂ ವಂಚಿಸುತ್ತಿರುವ ಮನೋಹರ ಮತ್ತೊಂದು ಭಯಾನಕ ದುಷ್ಕೃತ್ಯಕ್ಕಿಳಿದಿದ್ದಾನೆ. ಈತ ಪ್ರತೀ ತಿಂಗಳು ಬಡ ವಿದ್ಯಾರ್ಥಿಗಳಿಂದ ತಲಾ 25 ರೂಪಾಯಿ ವಸೂಲಿ ಮಾಡುತ್ತಾನೆ. ಇದೊಂದರಿಂದಲೇ ಪ್ರತೀ ತಿಂಗಳು 20 ಸಾವಿರ ರೂಪಾಯಿ ಮನೋಹರನ ತಿಜೋರಿ ತುಂಬುತ್ತಿದೆ.

ಸಮಾಜದ ಪರ ಕಳಕಳಿ ಪ್ರದರ್ಶಿಸುತ್ತಲೇ ಬಡದಲಿತರ ಹೆಣದಲ್ಲಿ ಕಾಲು ತಿನ್ನುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳನಂತೂ ಈ ಬಗ್ಗೆ ಸೊಲ್ಲೆತ್ತುತ್ತಿಲ್ಲ, ಈ ಭಾಗದ ಜನಪರ ಸಂಘಟನೆಯವರೇ ಮನೋಹರನ ನುಂಗಾಟಕ್ಕೊಂದು ಬ್ರೇಕ್ ಹಾಕಬೇಕಿದೆ.

• ಮೇಘರಾಜ್

ಅಂತರ್ಜಾತಿ ವಿವಾಹ ಮತ್ತು ಜಾತಿ ವಿನಾಶ

ಒಂದು ಅನಿಸಿಕೆ

• ಡಾ. ಎಚ್.ಎಸ್.ಅನುಪಮಾ

ಆಧುನೀಕರಣಕ್ಕೆ ಸಮಾಜದ ಹಲವು ಸಂಸ್ಥೆಗಳು ಬದಲಾಗುತ್ತಿವೆ. ವಿವಾಹವೆಂಬ ವ್ಯವಸ್ಥೆಯೂ ಕೂಡಾ. ಕಾನೂನು, ಸಂಬಂಧಗಳ ಹೊಸ ಸ್ವರೂಪ, ಮಹಿಳಾ ಶಿಕ್ಷಣ ಇವು ಕುಟುಂಬ-ದಾಂಪತ್ಯದ ವ್ಯಾಖ್ಯೆ ಮದುವೆಯ ಆಚರಣೆಗಳನ್ನು ಬದಲಿಸಿವೆ. ಆದರೆ ಹತ್ತಿರದಿಂದ ಗಮನಿಸಿ ನೋಡಿದರೆ ಕಟ್ಟುತ್ತಿರುವ ಹೊಸ ಕಟ್ಟಡಕ್ಕೆ ಅದೇ ಹಳೆಯ ನೆಲೆಗಟ್ಟು, ವಿನ್ಯಾಸವನ್ನು ಬಳಸಲಾಗುತ್ತಿದೆ. ಇವೆಲ್ಲ ಮನಸ್ಸಿನಲ್ಲಿರುವಾಗಲೇ ಮೊನ್ನೆ ಜೂನ್ 19ರಂದು ಶಿವಮೊಗ್ಗದಲ್ಲಿ ಜಾತಿ ವಿನಾಶ ಮತ್ತು ಅಂತರ್ಜಾತಿ ವಿವಾಹಿತರ ಸಮಾವೇಶ ನಡೆಯಿತು. ಅದರ ಕುರಿತು ಗೆಳೆಯರ ಬಳಗದಿಂದ ಮೆಚ್ಚುಗೆ ಮತ್ತು ವಿಮರ್ಶೆ ಎರಡೂ ಕೇಳಿಬಂತು.

ಸಮಾನ ಮನಸ್ಕರು ಜೊತೆ ಸೇರಿದಾಗಲೆಲ್ಲ ಅಂತರ್ಜಾತಿ ವಿವಾಹ, ಜಾತೀಯತೆ ಕುರಿತ ಇತ್ತೀಚಿನ ಬೆಳವಣಿಗೆಗಳ ಬಗೆಗೆ ಮಾತನಾಡಿಕೊಳ್ಳುತ್ತಿದ್ದೆವು. ಆದರಲ್ಲೂ ಅಂತರ್ಜಾತಿ ವಿವಾಹಗಳ ಮಾತು ಬಂದರೆ ಎದ್ದು ಕಾಣುವಂತಿರುವ ಎರಡು ಟ್ರೆಂಡ್‌ಗಳ ಕುರಿತು ಚರ್ಚಿಸುತ್ತೇವೆ. ಅಂತರ್ಜಾತಿ ವಿವಾಹದ ಪರ ವಿರೋಧಿ ವಾದಕ್ಕಿಂತ ಅವುಗಳ ಬಗೆಗೆ ಗಮನ ಸೆಳೆಯುವುದು ಈ ಬರಹದ ಉದ್ದೇಶ.

ಎರಡು ಟ್ರೆಂಡ್‌ಗಳು ಇವು:

1. ಇತ್ತೀಚೆಗೆ ಕಡಿಮೆಯಾಗಿರುವ ಅಂತರ್ಜಾತಿ ವಿವಾಹಗಳ ಸಂಖ್ಯೆ ಮತ್ತು ಅದರಿಂದ ಜಾತಿವಿನಾಶ ಆಗುವುದೇ ಎಂಬ ಸಂದೇಹ.
2. ಕೆಳಜಾತಿಗಳ ಹುಡುಗರು ಮೇಲ್ಜಾತಿ ಹುಡುಗಿಯರನ್ನು ಮದುವೆಯಾಗುತ್ತಿರುವಷ್ಟು ಮೇಲ್ಜಾತಿ ಹುಡುಗರು ಕೆಳಜಾತಿ ಹುಡುಗಿಯರನ್ನು ಮದುವೆಯಾಗದೇ ಇರುವುದು.

*****

ಪರಸ್ಪರ ಹೊಂದಾಣಿಕೆ, ಗೌರವ, ಸ್ವಾತಂತ್ರ್ಯ ಬದ್ಧತೆ ಇಟ್ಟುಕೊಂಡ ಒಂದು ದ್ವಿವ್ಯಕ್ತಿ ಸಮೂಹವೇ ದಾಂಪತ್ಯ, ಅದು ಯಾವಾಗಲೂ ನಾಶದ ಭಯದಲ್ಲಿರುತ್ತದೆ. ಇಬ್ಬರಲ್ಲಿ ಒಬ್ಬರು ವಿಮುಖರಾದರೂ, ನಿಷ್ಠೆ ಕಡಿಮೆಯಾದರೂ ಅದು ಛಿದ್ರ. ಇಂತಹ ಸೂಕ್ಷ್ಮ ಸಂಬಂಧವನ್ನು ಗಟ್ಟಿಗೊಳಿಸಲು ಹಲವು ಅಂಶಗಳು ಸಹಾಯ ಮಾಡುತ್ತವೆ. ಲೈಂಗಿಕ ಆಕರ್ಷಣೆ, ಭಾವನಾತ್ಮಕ ಅವಲಂಬನೆ, ಪ್ರೀತಿ ಇವು ಆರಂಭಿಕ ಹಂತದಲ್ಲಿ ಕೆಲಸ ಮಾಡುತ್ತವಾದರೆ; ಮಕ್ಕಳು, ಸಾಮಾಜಿಕ ನಿರೀಕ್ಷೆ, ಕುಟುಂಬ, ಕಟ್ಟುಪಾಡುಗಳು ದಾಂಪತ್ಯದ ಮುಂದುವರಿಕೆಗೆ ಕಾರಣವಾಗುತ್ತದೆ. ಜಾತಿ ಈ ಬಂಧವನ್ನು ಬಿಗಿಗೊಳಿಸುವ ಒಂದು ನಿಯೋಗಿ ಎಂದೇ ನಂಬಲಾಗಿದೆ. ಒಳವಿವಾಹ ಜಾತಿಯ ಮುಖ್ಯ ಲಕ್ಷಣವೂ ಅನಿವಾರ್ಯವೂ ಆಗಿ ಬಿಂಬಿಸಲ್ಪಟ್ಟಿದೆ. ಜಾತಿಯ ಬೆಂಬಲ ಬಿಟ್ಟು ಮದುವೆಯಾಗಲು ಪ್ರೀತಿ, ಲೈಂಗಿಕ ಆಕರ್ಷಣೆ, ಆದರ್ಶ ಎಲ್ಲವೂ ಒತ್ತಡ ಸೃಷ್ಟಿಸುತ್ತವೆ. ಆದರೆ ಯಾವ ಲೆಕ್ಕಾಚಾರವಿಲ್ಲದೇ ಸಂಭವಿಸುವ ಅಮಾಯಕ ನಿರ್ವ್ಯಾಜ ಪ್ರೇಮ ತುಂಬ ಕಡಿಮೆ. ಪ್ರೀತಿಸುವ ವ್ಯಕ್ತಿಯ ಕುರಿತು ಏನೋ ಒಂದಷ್ಟು ಗುಪ್ತ ಮಾಹಿತಿ ಇದ್ದೇ ಇರುತ್ತದೆ. ಗುಪ್ತವಾಗಿ ಕೆಲ ಅಂಶಗಳು ಕೆಲಸ ಮಾಡಿರುತ್ತವೆ. ಅದರಲ್ಲಿ ಜಾತಿಯೂ ಒಂದಾಗಿರಬಹುದು.

ಜಾತೀಯತೆ ಮತ್ತು ಜಾತ್ಯತೀತತೆ ಎರಡೂ ಸಾಪೇಕ್ಷ ಸ್ಥಿತಿಗಳು. ನಮ್ಮ ದೇಶದ ಮಟ್ಟಿಗೆ ಸದ್ಯಕ್ಕೆ ಜಾತಿಯನ್ನು ಮರೆಯಲು ಎಷ್ಟು ಪ್ರಯತ್ನಪಟ್ಟರೂ ಕಷ್ಟ. ಬಹುಶಃ ಹುಟ್ಟಿನೊಂದಿಗೇ ಬರುವ, ಸತ್ತರೂ ಹೋಗಲಾರದ ಗುರುತು ಎಂದರೆ ಜಾತಿಯೇ ಇರಬೇಕು.


ಚಂದ್ರೇಗೌಡರ ಜೊತೆ ರಾಜಪ್ಪ


ಜಾತಿಪದ್ಧತಿ ಮುರಿಯಲು ಇರುವ ಏಕೈಕ ವಿಧಾನ ಅಂತರ್ಜಾತಿ ವಿವಾಹ ಎಂದು ಅಂಬೇಡ್ಕರ್ ಸಹಿತ ಹಲವರು ಭಾವಿಸಿದ್ದರು. ಜಾತಿವಿನಾಶದ ಬಗ್ಗೆ ಲೋಹಿಯಾ ಆಳವಾಗಿ ಚಿಂತಿಸಿದ್ದರು. 70-80ರ ದಶಕಗಳಲ್ಲಿ ಅಂತರ್ಜಾತಿ ವಿವಾಹವು ಜನಪ್ರಿಯವಾಗ ತೊಡಗಿತ್ತು, ಸರಳ ಮದುವೆಗಳನ್ನು ಯಾವ ಧಾರ್ಮಿಕ ವಿಧಿ, ವಿಧಾನಗಳ ಹಂಗಿಲ್ಲದೇ ನಡೆಸುವ ಹಲವು ಸಂಘಟನೆಗಳಿದ್ದವು. ಕುವೆಂಪು ಸರಳ ವಿವಾಹ ವಿಧಾನವಾಗಿ ಮಂತ್ರಮಾಂಗಲ್ಯವನ್ನು ರಚಿಸಿದ್ದರು. ಆದರೆ ಅಂತರ್ಜಾತಿ ವಿವಾಹ ಒಂದು ಬದಲಾವಣೆಯಾಗಿ ಮುಂದುವರಿಯದೇ ಇರಲು ಕಾರಣವೇನು? ಸರಳ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವವರು ಅಂತರ್ಜಾತಿ ವಿವಾಹ ಏರ್ಪಡಿಸಲು ಆಸಕ್ತರಾಗಿಲ್ಲ ಏಕೆ? ಜಾತಿ-ಧರ್ಮಗಳು ಮಾನವೀಯ ಬದುಕಿಗೆ ತೊಡಕು ಎಂದಾಗಿದ್ದರೆ ಯಾಕಾದರೂ ಜನ ಇಷ್ಟು ಪ್ರೀತಿಯಿಂದ ಅದನ್ನು ಅಪ್ಪಿಕೊಳ್ಳುತ್ತಿದ್ದಾರೆ? ತಾವು ಸೃಷ್ಟಿಸಿಕೊಂಡ ಜಾತಿ ಬಿಲಗಳ ಒಳಗೆ ಎಲ್ಲರೂ ಬೆಚ್ಚನೆಯ ಸುಖವನ್ನು ಅನುಭವಿಸುತ್ತ ಉಸಿರುಗಟ್ಟುವಿಕೆಯನ್ನು ಮರೆತು ಇರುವುದಾದರೂ ಏತಕ್ಕೆ? ವಿಧಿಸಲಾಗುವ ಕಟ್ಟುಪಾಡುಗಳಿಗೆ ಖುಷಿಯಿಂದಲೇ ತೆತ್ತುಕೊಳ್ಳುತ್ತ ಸುರಕ್ಷಿತ ಮನೋಭಾವ ಅನುಭವಿಸುತ್ತಿದ್ದಾರೆಯೇ? ಇವೆಲ್ಲದರ ಕುರಿತು ವಸ್ತುನಿಷ್ಠ ಚಿಂತನೆಯ ಅವಶ್ಯಕತೆಯಿದೆ.

ಜಾತಿಯ ಉಗಮ, ಬೆಳವಣಿಗೆ, ವ್ಯವಸ್ಥೆಯ ಆಳಗಲಗಳ ಬಗೆಗೆ ಹಲವರು ಆದ್ಯಂತವಾಗಿ ವಿಶ್ಲೇಷಿಸಿದ್ದಾರೆ. ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲೂ ಅದು ಹೇಗೆ ಮುಂದುವರೆಯುತ್ತಿದೆ? ಏಕೆ ಅವಶ್ಯವಾಗುತ್ತದೆ ಎಂದು ನೋಡಬೇಕಾಗಿದೆ. ಮೊದಲೆಲ್ಲ ನಗರೀಕರಣ, ಆಧುನೀಕರಣ ಜಾತಿಸಮಸ್ಯೆಗೆ ಮದ್ದು ಎಂದು ಭಾವಿಸಲಾಗಿತ್ತು. ಆದರೆ ಹಾಗೇನೂ ಆದಂತೆ ತೋರುತ್ತಿಲ್ಲ, ನಗರಗಳ ಆಧುನಿಕ ಜನರು ಹೆಚ್ಚೆಚ್ಚು ಮತಶ್ರದ್ಧೆ ತೋರತೊಡಗಿದ್ದಾರೆ. ಆಧುನಿಕ ಪೂರ್ವ ರೀತಿ ರಿವಾಜುಗಳಿಗೆ ಮತ್ತೆ ಬೆಲೆ ಬರುತ್ತಿದೆ. ವಿವಾಹವಷ್ಟೇ ಅಲ್ಲ, ಹಲವು ಸಾಮಾಜಿಕ ಸಂಗತಿಗಳಲ್ಲಿ ಇದೇ ಮನೋಭಾವ ಕಾಣಬಹುದು. ಸ್ವಾಮಿಗಳು-ಸಾಧು ಸಂತರು ರಾಜಕಾರಣದಲ್ಲಿ ಮೂಗು ತೂರಿಸುವುದು; ದೇವರುಗಳು ರಾಜಿ ಪಂಚಾಯ್ತಿ ನಡೆಸಿ ನ್ಯಾಯ ಹೇಳುವುದು, ಸಾಂವಿಧಾನಿಕ ನ್ಯಾಯಕ್ಕಿಂತ ಧಾರ್ಮಿಕ ಉಲ್ಲೇಖಗಳಿಗೆ ಹೆಚ್ಚು ಮಹತ್ವ ಬಂದಿರುವುದು - ಇವೆಲ್ಲ ಮಧ್ಯಯುಗೀನ ಸಮಾಜದ ಆಧುನಿಕ ಅವತಾರಗಳು. ಇದೇ ಮನೋಭಾವ ವಿವಾಹ ಎಂಬ 'ಇರ್ರಿವರ್ಸಿಬಲ್' ಹಾಗೂ 'ನಾನ್ ಎಕ್ಸ್‌ಪರಿಮೆಂಟಲ್' ಸಂಸ್ಥೆಯಲ್ಲಿ ಜಾತಿ ತನ್ನ ಬಿಗಿಪಟ್ಟು ಸಡಿಲಿಸದೇ ಕುಳಿತಿರುವಂತೆ ಮಾಡಿದೆ. ಜಾತಿಯ ಮುಖ್ಯ ಲಕ್ಷಣವೇ ಒಳವಿವಾಹ. ಜಾತಿ ನಿಷ್ಠೆ ಎಂದರೆ ಜಾತಿಯೊಳಗೇ ಮದುವೆಯಾಗುವುದು. ಶಿಕ್ಷಿತರಲ್ಲಿ ಅಂತರ್ಜಾತಿ ವಿವಾಹ ಕಡಿಮೆ ಇರುವುದಕ್ಕೂ, ಅಂತರ್ಜಾತಿ ವಿವಾಹವಾದವರು ನಂತರ ಜಾತಿ ಬಿಡದೇ ಇರುವುದಕ್ಕೂ ಇವೆಲ್ಲ ಕಾರಣವಾಗಿವೆ. ಅಲ್ಲದೇ ಜಾತಿ ನೋಡದೇ ಪ್ರೇಮ ಸಂಭವಿಸಿದ್ದರೂ ಜಾತಿವಿನಾಶಕ್ಕೆಂದು ಪ್ರೇಮಿಗಳು ಅಂತರ್ಜಾತಿ ವಿವಾಹವಾಗಿರುವುದಿಲ್ಲ, ಈ ಕಾರಣಕ್ಕೇ ಮದುವೆಯಾದ ನಂತರ ಯಾರಾದರೊಬ್ಬರ, ಅದರಲ್ಲೂ ಹೆಚ್ಚಾಗಿ ಗಂಡನ ಜಾತಿಯನ್ನೇ ಅಪ್ಪಿಕೊಳ್ಳುತ್ತಾರೆ. ಹಾಗಿರುವಾಗ ಜಾತಿನಾಶ ಹೇಗಾದೀತು?

ಉಮಾ ಚಕ್ರವರ್ತಿ ಅವರ 'ಜೆಂಡರಿಂಗ್ ಕ್ಯಾಸ್ಟ್' ಎಂಬ ಪುಸ್ತಕವು ಮಂಡಲ್ ವಿರೋಧೀ ಪ್ರತಿಭಟನೆಯ ಕಾಲದಲ್ಲಿ ಗಮನಿಸಲಾದ ಒಂದು ವಿಷಯದ ಬಗ್ಗೆ ಗಮನ ಸೆಳೆಯುತ್ತದೆ. ಮಂಡಲ್ ವಿರೋಧಿ ಮೆರವಣಿಗೆಯೊಂದರಲ್ಲಿ ದೆಹಲಿ ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿನಿಯರ ಗುಂಪೊಂದು 'ನಮಗೆ ನಿರುದ್ಯೋಗಿ ಗಂಡಂದಿರು ಬೇಡ' ಎಂಬ ಪ್ಲಕಾರ್ಡ್ ಹಿಡಿದು ಘೋಷಣೆ ಕೂಗುತ್ತಿರುತ್ತದೆ. ಇದನ್ನು ಎರಡು ದೃಷ್ಟಿಕೋನಗಳಲ್ಲಿ ವಿಶ್ಲೇಷಿಸಬಹುದು. ಮಂಡಲ್ ವರದಿ ಜಾರಿಯಾಗಿ ಇತರೆ ಹಿಂದುಳಿದ ವರ್ಗಗಳ ಗಂಡುಗಳು ಉದ್ಯೋಗ ಗಳಿಸಿದರೆ ಮೇಲ್ಜಾತಿಯ ತಮ್ಮ ತಮ್ಮ ಭಾವೀ ಗಂಡಂದಿರು ನಿರುದ್ಯೋಗಿಗಳಾಗುತ್ತಾರೆಂದು ಆ ಹೆಣ್ಣುಮಕ್ಕಳು ಭಾವಿಸುತ್ತಾರೆ. ತಮ್ಮ ವಿದ್ಯೆ, ನೌಕರಿಯ ಬಗೆಗಿಂತ ತಮ್ಮ ಭಾವೀ ಗಂಡಂದಿರ ಬಗೆಗೇ ಹೆಚ್ಚು ಚಿಂತಿತರಾಗಿದ್ದಾರೆ ಎಂದಾಯಿತು.

ಇಲ್ಲಿ ಇನ್ನೂ ಒಂದು ಸೂಕ್ಷ್ಮವಿದೆ. ಆ ಹುಡುಗಿಯರಿಗೆ ನೌಕರಿ ಪಡೆದ ಹಿಂದುಳಿದ ವರ್ಗಗಳ ಹುಡುಗರನ್ನು ಮದುವೆಯಾಗಬಾರದೆಂದು ಕಟ್ಟಳೆ ವಿಧಿಸಿರುವುದು ಯಾರು? ಮಂಡಲ್ ಆಯೋಗವೇನೂ ಹಾಗೆ ಹೇಳಲಿಲ್ಲವಲ್ಲ? ಇಂದಿಗೂ ಜಾತಿ, ವಿವಾಹ ಕುರಿತ ಕಲಿತವರ ಧೋರಣೆಗಳು ಏನೂ ಬದಲಾಗದೇ ಮಂಡಲ್ ದಿನಗಳಂತೇ ಮುಂದುವರೆದಿವೆ. ಮ್ಯಾಟ್ರಿಮೋನಿಯಲ್ ಕಾಲಮ್ಮುಗಳು ಇದಕ್ಕೆ ಸಾಕಷ್ಟು ಪುರಾವೆ ಒದಗಿಸುತ್ತವೆ.

National Family Health survey


ರಾಜೇಶ್ವರಿ ತೇಜಸ್ವಿ

(NFHS) ವರದಿಯನ್ನು ಪ್ರಕಟಿಸಿದೆ. ಅದು ಭಾರತದಾದ್ಯಂತ 29 ರಾಜ್ಯಗಳ 13012 ವಿವಾಹಿತ ಮಹಿಳೆಯರ ಜಾತಿ ಹಿನ್ನೆಲೆ, ಮದುವೆಯ ರೀತಿ ಇತ್ಯಾದಿಗಳನ್ನು ಪರಿಗಣಿಸಿದರೆ ಅದರಲ್ಲಿ ಅಂತರ್ಜಾತಿ ವಿವಾಹವಾದವರ ಸಂಖ್ಯೆ ಶೇ. 11 ಮಾತ್ರ. ಕರ್ನಾಟಕದಲ್ಲಿ ಶೇ. 16, ಮಹಾರಾಷ್ಟ್ರದಲ್ಲಿ ಶೇ. 17, ಹರಿಯಾಣದಲ್ಲಿ ಶೇ. 18, ಅಂತರ್ಜಾತಿ ವಿವಾಹಗಳು ಆಗಿದ್ದರೆ, ಅತ್ಯಂತ ಕಡಿಮೆ ಅಂತರ್ಜಾತಿ ಮದುವೆಯ ಪ್ರಕರಣಗಳು ಸಂಭವಿಸಿರುವುದು ಬ್ರಾಹ್ಮಣ್ಯದ ವಿರುದ್ಧ ತೀವ್ರ ಹೋರಾಟ ಕಟ್ಟಿದ ತಮಿಳುನಾಡಿನಲ್ಲಿ 2.9%!

ಈ ಸಮೀಕ್ಷೆಯ ಫಲಿತಾಂಶ ವರದಿ ಒತ್ತಟ್ಟಿಗಿರಲಿ, ಒಂದು ಅಂಶವಂತೂ ಗಮನ ಸೆಳೆಯುತ್ತದೆ. ಅದು ಯುವಪೀಳಿಗೆಯಲ್ಲಿ ಶಿಕ್ಷಣ, ಉದ್ಯೋಗ, ಆರ್ಥಿಕ ಭದ್ರತೆಯ ಮಟ್ಟ ಏರುತ್ತ ಹೋದಂತೆ ಅಂತರ್ಜಾತಿ ವಿವಾಹ ಕಡಿಮೆಯಾಗಿರುವುದು. ಶಿಕ್ಷಣವು ಸಮಾನತೆಯ ಮನೋಭಾವ ಬೆಳೆಸುವಲ್ಲಿ ವಿಫಲವಾಗುತ್ತಿದೆ. ಅದಕ್ಕೆ



ಸಾಕ್ಷಿಯಾಗಿ ಬಹುಪಾಲು ಕೋಮುವಾದಿ ಸಂಘಟನೆಗಳ ಮಾಸ್ಟರ್ ಮೈಂಡ್ ಆಗಿ ಉನ್ನತ ಆಧುನಿಕ ಶಿಕ್ಷಣ ಪಡೆದವರಿದ್ದಾರೆ. ಅಕ್ಷರ ಜ್ಞಾನದ ಹಂಗಿಲ್ಲದ ಸಾಮಾನ್ಯ ಜನರು ಸಹಿಷ್ಣುತೆ, ಸಮಾನತೆಯ ಕುರಿತು ಸಹಜ ನೈಸರ್ಗಿಕ ಧೋರಣೆಗಳನ್ನು ಹೊಂದಿದ್ದರೆ, ಅಕ್ಷರಜ್ಞಾನ ಪಡೆದವರು ಸಂಪ್ರದಾಯ ಮತ್ತು ಪರಂಪರೆಯ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ನಿಷ್ಠೆ ಬೆಳೆಸಿಕೊಳ್ಳುತ್ತಿರುವಂತೆ ತೋರುತ್ತಿದೆ. ತಮ್ಮ ನಿಲುವನ್ನೇ ಮಹಾಸತ್ಯವೆಂಬಂತೆ ಬಿಂಬಿಸುತ್ತ ಅದನ್ನೇ ಮಿಥ್‌ಗಳ ರೂಪದಲ್ಲಿ, ತಿರುಚಲಾದ ಇತಿಹಾಸದ ರೂಪದಲ್ಲಿ ಹರಡುತ್ತಿರುವುದನ್ನೂ ನೋಡುತ್ತಿದ್ದೇವೆ. ಕೋಮುವಾದವೆಂದರೆ ಇದೇ ತಾನೇ? ಪರಮತ ಅಸಹಿಷ್ಣುತೆ, ಸಂಪ್ರದಾಯ ಶರಣತೆ, ಬದಲಾಗದ ನಿಷ್ಠೆ. ಇದು ಎಲ್ಲ ಜಾತಿ, ಧರ್ಮಗಳಲ್ಲೂ ಕಂಡುಬರುತ್ತಿದ್ದು ಈ ಸೀಮಿತ ನಿಷ್ಠೆಯೇ ಇಂದಿನ ಹಲವು ಅಧ್ವಾನಗಳಿಗೆ ಕಾರಣವಾಗುತ್ತಿದೆ.

* * * * *

ಮೇಲ್ಜಾತಿ ಹುಡುಗರು ಕೆಳಜಾತಿ ಹುಡುಗಿಯರನ್ನು, ಆದರಲ್ಲೂ ದಲಿತ ಮಹಿಳೆಯರನ್ನು ಮದುವೆಯಾಗುವ... ಕಡಿಮೆ. ಏಕೆ? 'ಕೆಳಜಾತಿ ಹುಡುಗಿಯರು ನೋಡಲು ಚಂದ ಇರುವುದಿಲ್ಲ, ಬಣ್ಣ ಇರುವುದಿಲ್ಲ, ಶಿಕ್ಷಿತರಾ... ವುದಿಲ್ಲ' ಎಂಬುವೆಲ್ಲ ಕುಹಕ ನೆಪಗಳಾಗಿ ಕಾಣು... ಯಾಕೆಂದರೆ ಮೇಲ್ಜಾತಿಯಲ್ಲೂ ನೋಡಲು ಚಂದ ಇ... ಕಲಿತಿರದ, ಬಿಳಿ ಬಣ್ಣವಿರದ ಗಂಡಸರೂ, ಮಹಿಳೆಯ... ಇದ್ದಾರೆ. ದೈಹಿಕ ರೂಪ, ಗುಣಗಳು ಯಾವ ಜಾತಿ... ಸ್ವತ್ತಲ್ಲ, ರೂಪವೊಂದೇ ಪ್ರೀತಿ ಹುಟ್ಟಲು ಕಾರಣವ...

ಮೇಲಿನ ಪ್ರಶ್ನೆಗೆ ಉತ್ತರ ಅಷ್ಟು ಸುಲಭ... ಸಿಗುವುದಲ್ಲ, ಹೆಣ್ಣುಗಂಡಿನ ನಡುವಿರುವ ಸ್ವಭಾ... ಭಿನ್ನತೆಗಳು ಇದಕ್ಕೆ ಮುಖ್ಯ ಕಾರಣ ಇರಬಹು... ಮೇಲ್ಜಾತಿ ಹಾಗೂ ಕೆಳಜಾತಿ ಗಂಡುಹೆಣ್ಣು... ಸ್ವಭಾವ, ಸಾಮಾಜಿಕ ಪರಿಸ್ಥಿತಿ, ಅವಕಾಶ, ... ವಾರ್ಯತೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗು...

ಮೇಲ್ಜಾತಿ ಗಂಡಿಗೆ ಪ್ರತಿಭಟಿಸುವ, ಧಿಕ್ಕರಿಸ... ಯಾವ ಒತ್ತಡವೂ ಇಲ್ಲ, ಆತ ಅತ್ಯಂತ ಪ್ರಿವಿಲೇ... ಮೇಲ್ಜಾತಿ ಹಾಗೂ ಗಂಡು ಎಂಬ ಎರಡೆರ... ತೆರನ ಪ್ರಿವಿಲೇಜ್ ಅವನ ಪಾಲಿಗಿದೆ. ವ್ಯವಸ್ಥೆ... ಅಂಶಗಳೆಲ್ಲ ಆತನ ಪರವಾಗೇ ಇರುವ... ಯಥಾಸ್ಥಿತಿಯನ್ನೇ ಕಾಯ್ದುಕೊಂಡು ಹೋಗ... ಬಯಸುತ್ತಾನೆ. ಅನುಕೂಲವಿರುವುದರಿಂದ ಪರಂ... ರಕ್ಷಿಸುವುದು ತನ್ನ ಕರ್ತವ್ಯ ಎಂದು ಭಾವಿಸುತ್ತಾನೆ. ... ಸಂಪ್ರದಾಯಶೀಲತೆ ಹಲವು ಮುಖವಾಡ ತೊ... ಬರುತ್ತದೆ. ಜಾತಿಯೊಳಗೇ ಮದುವೆ; ತನಗಿಂತ ಗ... ಕಡಿಮೆ ಕಲಿತ, ಕಡಿಮೆ ವಯಸ್ಸಿನವಳ... ಮದುವೆಯಾಗುವುದು; ತನಗಿಂತ ಕಡಿಮೆ ಅಧಿ... ಹೊಂದಿದವಳನ್ನೇ ಆರಿಸಿಕೊಳ್ಳುವುದು - ಇವೆಲ್ಲವೂ ಅ... ಭಿನ್ನ ರೂಪಗಳೇ. ಬೌದ್ಧಿಕವಾಗಿ ತನಗಿಂತ ಭಿನ್ನವ... ಯೋಚಿಸುವ ತನ್ನದೇ ಜಾತಿಯ ಮಹಿಳೆಯ ಬಗ್ಗೆಯ... ಹೆಚ್ಚಿನವರು ಅಸಮಾಧಾನ ಹೊಂದಿರುತ್ತಾರೆ. ಆಧು... ಶಿಕ್ಷಣ ಕೆಲವೇ ಜನರಲ್ಲಿ ಈ ಮನಸ್ಥಿತಿಯನ್ನು ಬದಲಿಸು...

ಜಾತಿಧರ್ಮಗಳ ಅಂತರವಿಲ್ಲದೆ ಹೇಳಬೇಕೆಂದರೆ ಗಂ... ಆಳದಲ್ಲಿ ಸಂಪ್ರದಾಯಶೀಲ, ಹುಟ್ಟುಭದ್ರ, ಯಥಾಸ್ಥಿತಿವಾ... ಎಲ್ಲ ವರ್ಗ-ಜಾತಿ-ಸಿದ್ಧಾಂತ ನಂಬಿರುವವರಲ್ಲಿಯೂ ಇದ... ನೋಡಬಹುದು. ಉಳಿದವರ ಬಗ್ಗೆಯೆಲ್ಲ ಉದಾ... ಆಧುನಿಕ ಮನೋಭಾವ ತಾಳುವವರು ತಮ್ಮ ಹೆಂಡ... ಮಗಳ ವಿಷಯದಲ್ಲಿ ಮಾತ್ರ ಸಂಪ್ರದಾಯಶೀಲರಾಗಿರುತ್ತಾ... ಮೇಲ್ಜಾತಿ ಹುಡುಗರು ಕೆಳಜಾತಿ ಹೆಣ್ಣನ್ನು ಬಯಸು... ಇರಲು ಇನ್ನೂ ಒಂದು ಕಾರಣವಿದೆ. ಕೆಳಜಾತಿ ಹೆಣ್ಣುಗಳ... ದೇವರ, ಕಟ್ಟಳೆಗಳ, ದರ್ಪದ, ನ್ಯಾಯದ ಹೆಸರಿನ... ಕಟ್ಟಿಹಾಕಿದವರಿಗೆ ಅವಳ ನಿಜ ಶಕ್ತಿಸಾಮರ್ಥ್ಯದ ಬಗ್... ಅನುಮಾನಗಳಿರುತ್ತವೆ. ಹೆಂಡತಿಯಾಗಿ ಪಡೆಯಲು ಇಷ್... ಅಡ್ಡಬರಬಹುದು.

ಗಂಡಿನ ಮತ್ತೊಂದು ಮೂಲ ಸ್ವಭಾವ ಗೆಲು... ನಿರಂತರ ಬಯಕೆ. ಈ ಸ್ವಭಾವದಿಂದಲೇ ಕೆಳಜಾತಿ ಪುರು... ಮೇಲ್ಜಾತಿ ಹೆಣ್ಣನ್ನು ಮದುವೆಯಾಗಿ ಗೆದ್ದ, ಮೇಲ್ಪ... ಹೊಂದಿದ ಅನುಭವ ಹೊಂದಬಹುದು.

ಆದರೆ ಎಲ್ಲ ಜಾತಿಗಳಲ್ಲೂ ಸ್ತ್ರೀ ದಮನಿತಳೇ. ಅವಳನ್ನು ಕಟ್ಟುಪಾಡಿನ ಚೌಕಟ್ಟಿನಲ್ಲಿಡಲು ಸಮಾಜ ನೈತಿಕ ರೂಢಿ ನಿಯಮಗಳನ್ನು ಸೃಷ್ಟಿಸಿದೆ. ಎಲ್ಲ ದಮನಿತರ... ಗುಪ್ತವಾಗಿ ರೂಢಿಯನ್ನು ಉಲ್ಲಂಘಿಸಲು ಕಾಯುತ್ತಿರುತ್ತಾರೆ. ಹಾಗೆಯೇ ಮಹಿಳೆಯಲ್ಲ... ಪ್ರತಿರೋಧಿಸುವ ಗುಣ ಹೆಚ್ಚು. ಸ್ತ್ರೀತ್ವ ವಿಧಿಸುವ ಕಟ್ಟುಪಾಡುಗಳನ್ನು ಧಿಕ್ಕರಿಸಬಯಸುವ ಮಹಿಳೆ ಸಹಜವಾಗಿ ಸಮುದಾಯದ ಎಲ್ಲ ಕಟ್ಟುಪಾಡುಗಳನ್ನೂ ಮೀರಿ ಹೊರಬರಬೇಕಾಗುತ್ತದೆ. ಇದು ಆಲ್... ಆರ್ ನನ್ ಫಿನಾಮೆನನ್.

ಮೇಲ್ಜಾತಿ ಮಹಿಳೆಯರಿಗೆ ಶಿಕ್ಷಣದ ಅವಕಾಶ ಹೆಚ್... ಶಿಕ್ಷಿತ, ಹೊರಜಗತ್ತಿಗೆ ತೆರೆದುಕೊಂಡ ಮಹಿಳೆ ಸ್ವತಂ... ಕ್ರಾಂತಿಕಾರಿ ನಿಲುವು ತಳೆಯುತ್ತಾಳೆ. ಅಂತ... ಮನಸ್ಥಿತಿಯವರಿಗೆ ಅಂತರ್ಜಾತಿ ಮದುವೆ ಎನ್ನುವುದ... ಸುಲಭ ಹೊರದಾರಿಯಾಗಿ ಕಾಣಿಸುತ್ತದೆ. ಆದ್ದರಿಂ... ಮೇಲ್ಜಾತಿ ಮಹಿಳೆ ಕೆಳಜಾತಿಯ ಪುರುಷನನ್ನು ಮದುವೆಯಾಗುವ ಮೂಲಕ ಹೆಣ್ತನದ ನಿಷೇಧಗಳನ್ನು ದಾಟಿ, ಜಾತಿ ಕಟ್ಟಳೆಗಳನ್ನೂ ಮುರಿದು ಇಬ್ಬಗೆಯ ಬಿಡುಗ... ಹೊಂದುತ್ತಾಳೆ. ಗೆರೆದಾಟುವ ಬಯಕೆಗೆ ಪ್ರತಿಭಟನೆ ಹಾಗೂ ಬಿಡುಗಡೆ ಈ ಎರಡು ಪ್ರಬಲ ಪ್ರೇರಣೆಗಳಾಗುತ್ತಾ... ಕೆಳಜಾತಿ ಹುಡುಗರನ್ನು ಮೇಲ್ಜಾತಿ ಹುಡುಗಿಯರ... ಇಷ್ಟಪಡಲು ಇರುವ 'ಜನಪ್ರಿಯ' ಕಾರಣ ಇದು.

ಇಂತಹ ಅವಕಾಶ ಕೆಳಜಾತಿಯ ಹೆಣ್ಣಿಗಿದೆಯೆ? ಅವ... ದಮನಿತರಲ್ಲಿ ದಮನಿತಳು. ಮೇಲ್ಜಾತಿ ಪುರುಷ, ಮೇಲ್ಜಾ... ಮಹಿಳೆ, ತನ್ನದೇ ಜಾತಿಯ ಪುರುಷ ಸಮೂಹ ಹೀ... ಮೂರು ದಿಕ್ಕಿನಿಂದ ಶೋಷಿಸಲ್ಪಟ್ಟವಳು ಅವಳು. ... ತನ್ನ ಮಿತಿಗಳನ್ನು ಮೀರಲು ಸಿಗುವ ಅವಕಾಶ ತುಂ...

. ಒಂದೊಮ್ಮೆ ಸಿಕ್ಕರೆ ತನ್ನ ಕುಲವನ್ನು ತಾಯಿಯಾಗಿ ಪಾಳೇ ವಿನಹ ಮೇಲ್ಚಲನೆಯ ಹಂಬಲ ಅವಳಲ್ಲಿ ಲಾರದು. ನಮ್ಮ ಎಷ್ಟೋ ಗ್ರಾಮೀಣ ದೈವಗಳೂ, ಮೇಲೆ ಕಟ್ಟಲಾಗಿರುವ ಕಥೆಗಳೂ ಇದಕ್ಕೆ ಸಾಕ್ಷಿ. ತ್ತಿ ಹೆಣ್ಣನ್ನು ಮದುವೆಯಾಗುವುದು ಕೆಳಜಾತಿಯ ಧನಾತ್ಮಕ ಕ್ರಿಯೆ ಅನಿಸಬಹುದು, ಆದರೆ ಅದೇ ವ ಮಹಿಳೆಗಲ್ಲ, ಕಲಿತ ಕೆಳಜಾತಿಯ ಹೆಣ್ಣು ತ್ತಿಯ ಬಗೆಗೆ, ಮೇಲ್ಜಾತಿ ಗಂಡಿನ ಬಗೆಗೆ ಸಿಟ್ಟು ಳು. ಅಷ್ಟೇ ಸಿಟ್ಟು ಹೊಂದಿರುವ ಅಗ್ರೆಸ್ಸಿವ್ ತನ್ನ ಜಾತಿಯ ಗಂಡನ್ನು ಬಯಸಿಯಾಳೇ ಹೊರತು ತ್ತಿ ಯುವಕನ ಹಂಬಲ ಹುಟ್ಟಲಾರದು.

ಹೆಣ್ಣನ್ನು ಕುರಿತು ಮತ್ತೊಂದು ಮಾತು ಹೇಳಬೇಕು. ವೆಯಾಗುವ ಹೆಣ್ಣಿನ ಪ್ರೀತಿಯ ಹಿಂದೆ ದೈಹಿಕ ಗಳ ಜೊತೆಗೇ ಅರಳುವುದು ತಾಯ್ತನ. ಗಂಡನನ್ನು ಯಂತೆ ಕಾಪಾಡಲು ಹೆಣ್ಣು ಬಲುಬೇಗ ಉತ್ಸಾಹ ತ್ತಾಳೆ. ಹಾಗೆ ನೋಡಿದರೆ ಎಲ್ಲ ಹೆಂಡತಿಯರ ತಲ ಮಗು ಅವರ ಗಂಡನೇ. ಸಾಮಾಜಿಕ ವ್ಯವಸ್ಥೆಯು ಂಟಾದ ಮೇಲ್ಜಾತಿ ಹುಡುಗಿಗೆ ಕೆಳಜಾತಿಗಳ ಮೇಲೆ ಕ ತುಂಬಿದ ಪ್ರೀತಿ ಹುಟ್ಟುತ್ತದೆ. ಕೆಳಜಾತಿ ಗಂಡಿನ ಇದು ಪ್ರೀತಿಯ ರೂಪ ತಾಳುವ ಸಾಧ್ಯತೆಯಿದೆ.

* * * * *

ಅನುಲೋಮ ವಿವಾಹದ ಬಗ್ಗೆ ಮಾತನಾಡುವಾಗ ಉದ್ಭವಿಸಿರುವ ಒಂದು ವಿಚಿತ್ರ ಪರಿಸ್ಥಿತಿಯ ಬಗ್ಗೆ ಖಿಸಲೇಬೇಕು. ಕರಾವಳಿ, ಮಲೆನಾಡು, ಲುಸೀಮೆ ಜಿಲ್ಲೆಗಳಲ್ಲಿ ಮೇಲ್ಜಾತಿ - ಅದರಲ್ಲೂ ಣರಲ್ಲಿ - ಸಾಂಪ್ರದಾಯಿಕ ವೃತ್ತಿ ಅಥವಾ ಕೃಷಿ ಮಾಡಿಕೊಂಡಿರುವವರಿಗೆ ಹೆಣ್ಣೇ ಇಲ್ಲ. ಮನೆಯ ಮಕ್ಕಳೆಲ್ಲ ಓದಿ ನೌಕರಿ ಹಿಡಿದು ನಗರ ಸೇರಿದ್ದರೆ ಲ್ಲಿ ತೋಟ, ಗದ್ದೆ ಅಪ್ಪ ಅಮ್ಮನನ್ನು ನೋಡಿಕೊಂಡು ಹಿತ್ಯವೋ ಮತ್ತೊಂದನ್ನೋ ಮಾಡಿಕೊಂಡಿರು ನ್ನು ಮದುವೆಯಾಗಲು ಹೆಣ್ಣುಗಳು ಸಿದ್ಧರಿಲ್ಲ. 40 ದರೂ ಮದುವೆ ಭಾಗ್ಯ ಕಾಣದ ಎಷ್ಟೋ ಗಂಡು ದ್ದಾರೆ. ತುಂಬ ಗದ್ದೆ ತೋಟ ಹೊಂದಿ ಆಸ್ತಿವಂತರಾಗಿ ತಮ್ಮ ದೊಡ್ಡಸ್ತಿಕೆಯನ್ನು ಆಚೆಯಿಟ್ಟು ಅವರಿವರ 'ಹೆಣ್ಣು ಇದ್ದರೆ ಹೇಳಿ' ಎಂದು ಕೇಳಿಕೊಂಡು ಡುವುದನ್ನು ನೋಡಬಹುದು. ಸಾಧಾರಣವಾಗಿ ರದ ಉತ್ತರ ಕರ್ನಾಟಕದ ಬಯಲುಸೀಮೆ ಜಿಲ್ಲೆ ದಲೋ, ನೆರೆಯ ಕೇರಳ ಅಥವಾ ಮಹಾರಾಷ್ಟ್ರ ದಲೋ ದಲ್ಲಾಳಿಗೆ ದುಡ್ಡು ಕೊಟ್ಟು ಹೆಣ್ಣುಮಕ್ಕಳನ್ನು ಡಿ, ಅವರು ಕೇಳಿದಷ್ಟು ದುಡ್ಡನ್ನು ಕನ್ಯೆಯ ಪಾಲಕರಿಗೆ ಟ್ಟು ಸ್ವಂತ ಖರ್ಚಿನಲ್ಲಿ ಮದುವೆಯಾಗುತ್ತಿದ್ದಾರೆ. ಜಾತಿ ಡುವಂತಿಲ್ಲ. ಭಾಷೆಯೂ ಪರವಾಗಿಲ್ಲ. ಬಣ್ಣ ವಂತೂ ಏನೂ ಅಡ್ಡಿಯಿಲ್ಲ. ದೂರದೂರಿನ ಬೇರೆ ಭಾಷೆಯಾಡುವ ಹೆಣ್ಣು, ಜಾತಿ ಬೇರೆಯಾದರೆ ಗೂ ತಿಳಿಯುವುದೂ ಇಲ್ಲ. ಅರ್ಥಕ್ಕರ್ಥ ಜನ ಹದೇ ವಿವಾಹಬಂಧನಕ್ಕೊಳಗಾಗುತ್ತಿದ್ದಾರೆ. ಹತ್ತಿ ಳದ ಹೊಲಗಳಲ್ಲಿ ಕೂಲಿ, ಕಮತ ಮಾಡಿಕೊಂಡು ಕುತ್ತಿದ್ದ ಹೆಣ್ಣುಜೀವಗಳು ಉಂಡುಡಲು ಕೊರತೆ ಲ್ಲದೆ ಸುಖವಾಗೇನೋ ಇರಬಹುದು. ಆದರೆ ದುವೆಯ ನಂತರ ಅವರು ಹೆಚ್ಚು ಕಡಿಮೆ ತಮ್ಮ ಹಾಗೂ ವಿವಾಹಪೂರ್ವ ಐಡೆಂಟಿಟಿಯನ್ನು ಕೊಳ್ಳುತ್ತಾರೆ.

ಇದರಿಂದ ಜಾತಿವಿನಾಶ ಆಗುತ್ತಿದೆ ಎಂದು ಸುವಂತಿಲ್ಲ. ವರಗಳು ಮೇಲ್ಜಾತಿ ಅಥವಾ ಮಧ್ಯಮ ಯ ವಧುವನ್ನೇ ಬಯಸುತ್ತಾರೆ. ಹೆಣ್ಣು ಸಿಗದ ನಿವಾರ್ಯತೆಗೆ ಈ ರಾಜಿಗೆ ಒಪ್ಪಿರುವ ಮೇಲ್ಜಾತಿ ಗಳು ಲಭ್ಯವಿದ್ದರೆ ತನ್ನದೇ ಜಾತಿಯ ಹೆಣ್ಣಿಗೆ ಕಾಟ ನಡೆಸುತ್ತಾರೆ. ಅವರಿಗೆ ಹುಟ್ಟುವ ಮಕ್ಕಳು ಜಾತಿಯ ಹೆಸರನ್ನೇ ಪಡೆಯುತ್ತಾರೆ. ಅವರಿಗೆಲ್ಲ ಂದೆ ಕುಟುಂಬದಲ್ಲಿ ಎಂಥ ಸ್ಥಾನ ಸಿಕ್ಕೀತು ವುದನ್ನು ಕಾಲವೇ ಹೇಳಬೇಕು.

* * * * *


ಮೇಲೆ ಹೇಳಿದ್ದಕ್ಕೆಲ್ಲ ಅಪವಾದಗಳೂ ಇರಬಹುದು. ಒಂದು ಅವಲೋಕನ ಅಷ್ಟೆ.

ಆದರೆ...

ಎಲ್ಲಿಯವರೆಗೆ ದಮನಕ್ಕೆ ಜಾತಿ ಒಂದು ಕಾರಣ ವುದೋ ಅಲ್ಲಿಯವರೆಗೆ ಸರ್ಕಾರ ಜಾತಿಯನ್ನು ತಿಸುತ್ತದೆ. ಎಲ್ಲಿಯವರೆಗೆ ಜಾತಿ ಕಾಲಂ ತುಂಬ ಗುತ್ತದೋ, ಜಾತಿಯಲ್ಲಿ ಗುರ್ತಿಸಿಕೊಳ್ಳುವುದು ಕೂಲಕರವೋ ಅಲ್ಲಿಯವರೆಗೆ ಜಾತಿ ಮುಂದು ಯುತ್ತದೆ.

(ಇಲ್ಲಿ ಜಾತಿ ಕುರಿತು ಬಳಸಿರುವ 'ಕೆಳ' 'ಮೇಲು' ಪದಗಳು ಸಮಾಜದ ರೂಢಿಯಂತೆ ಬಳಸಲ್ಪಟ್ಟಿವೇ ಹೊರತು ಅವುಗಳ ಪದಶಃ ಅರ್ಥದಲ್ಲಿ ಅಲ್ಲ)

ಹೋರಾಟದ ನೂರು ಹಾಡುಗಳು
ಕೆಲವು ಟಿಪ್ಪಣಿಗಳು



1970-80ರ ದಶಕಗಳಲ್ಲಿ ಚುರುಕಾಗಿದ್ದು ಒಂದು ತಲೆಮಾರಿನ ಸಮಾಜವನ್ನು ಜಾಗೃತಗೊಳಿಸಿದ ರೈತ-ಬಂಡಾಯ-ಸಮುದಾಯ ಚಳವಳಿಗಳ ಕಾಲದಿಂದ ಹಿಡಿದು, ಇಲ್ಲಿವರೆಗಿನ ಎಡಪಂಥೀಯ ಚಳವಳಿಗಳಲ್ಲಿ ಸ್ಫೂರ್ತಿ ತುಂಬಲು ಕಟ್ಟಿದ 101 ಹೋರಾಟದ ಹಾಡುಗಳನ್ನು ಕಾ.ವೆಂ.ಶ್ರೀನಿವಾಸ ಮೂರ್ತಿ, ಕುಮಾರ್ ಸಮತಳ ಮತ್ತು ನಾರಾಯಣ ಕೆ.ಕ್ಯಾಸಂಬಳಿ ಇವರು ಸಂಪಾದಿಸಿರುವ ಪುಸ್ತಕ 'ಹೋರಾಟದ ನೂರು ಹಾಡುಗಳು'. 101 ಪದ್ಯಗಳಿರುವ ಈ ಸಂಕಲನಕ್ಕೆ 'ನೂರು' ಎಂದು ನಾಮಕರಣ ಮಾಡಿರುವುದು ಒಂದು ಸಣ್ಣ ಸಂಪಾದಕೀಯ ದೌರ್ಬಲ್ಯ; ಅದನ್ನು ಸಹೃದಯರು ಹೊಟ್ಟೆಗೆ ಹಾಕಿಕೊಳ್ಳಬಹುದು. ಆದರೆ, ಅದರಿಂದ ಲೋಕಾನುಭವದ ಜೊತೆ ಸಂಬಂಧ ಬೆಳೆಸಿಕೊಳ್ಳುವ ಒಂದು ಅವಕಾಶ ತಪ್ಪಿದೆ. 'ನೂರೊಂದು' ಅನೇಕ ಕಾರಣಗಳಿಗೆ ಜನರ ಬುದ್ಧಿಯಲ್ಲಿ ಸ್ಥಾಪಿತವಾಗಿರುವ ಒಂದು ಸಂಖ್ಯೆ. ಉದಾಹರಣೆಗೆ, ಆಸ್ತಿಕರು ದೈವ ಸಂತೃಪ್ತಿಗೆ ಏನನ್ನೇ ಅರ್ಪಿಸಿದರೂ, ಅದು 'ನೂರೊಂದು' ಎಂಬ ಬೆಸ ಸಂಖ್ಯೆಯಾಗಿರುತ್ತದೆ; ಅದರ ಅರ್ಥ ಎಂತೋ ಏನೋ? ನಾನರಿಯೆ. 'ನೂರು ಪೂಜಾರಿಗೆ, ಒಂದು ದೇವರಿಗೆ ಟಿಪ್ಸ್' ಎಂಬುದು ನನ್ನ ವಕ್ರೋಕ್ತಿ. ಈ ಆಸ್ತಿಕ ಕಾರಣಗಳಿಗೆ ಹೊರತಾಗಿಯೂ ಕನ್ನಡದಲ್ಲಿ 'ನೂರೊಂದು ನೆಪ', 'ನೂರೊಂದು ನೆನಪು', 'ನೂರೊಂದು ತಾಪತ್ರಯ' ಎಂಬ ಸಹಜ ಭಾಷಾ ಬಳಕೆ ಇದೆ. ಬಳಕೆಯಲ್ಲಿರುವ ಭಾಷಾಪ್ರಯೋಗದಿಂದ ಜನರ ಮನದ ಜೊತೆ ತಕ್ಷಣ ಬೆಸೆದುಕೊಳ್ಳಬಹುದು. ಈ ಬಗೆಯ ಲೋಕಸಹಜತೆಯ ಜೊತೆ, ಎಡಪಂಥೀಯರು ತಮ್ಮ ಪಟ್ಟನ್ನು ಬಿಡದೆ, ಬೆಸೆದುಕೊಳ್ಳುವ ಸಣ್ಣಪುಟ್ಟ ಅವಕಾಶಗಳನ್ನು ಬಿಟ್ಟುಕೊಡಕೂಡದು ಎನ್ನುವುದು ನನ್ನ ನಂಬಿಕೆ. 'ಹೋರಾಟದ ಹಾಡುಗಳ' ವಸ್ತು, ಭಾಷೆ, ಲಯಗಳಿಗೂ ಈ ಮಾತು ಪ್ರಸ್ತುತವಾದದ್ದು ಎಂಬ ಕಾರಣಕ್ಕೆ ಆಡಿದ್ದೇನೆ.

ಚಳವಳಿಗೆ ಸ್ಫೂರ್ತಿಯಾಗುವ ಪದ್ಯಗಳು ಮತ್ತು 'ಅಜಿಟ್ ಪ್ರಾಪ್' ಪದ್ಯಗಳು:

ಮುನ್ನೂರು ವರ್ಷಗಳ ಕಾಲ ಜನ ವಸಾಹತುಶಾಹಿ ಆಳ್ವಿಕೆಯನ್ನು ಅನುಭವಿಸಿ, ವಿವಿಧ ಬಗೆಗಳಲ್ಲಿ ಪ್ರತಿರೋಧಿಸಿದ ದಕ್ಷಿಣ ಏಷ್ಯಾದಲ್ಲಿ ಪ್ರತಿರೋಧಿ ಕಾವ್ಯಕ್ಕೇನೂ ಕೊರತೆ ಇಲ್ಲ. 1860ರ ನಂತರ, ವಸಾಹತುಶಾಹಿ ವಿರೋಧ ಸಾಮಾಜಿಕ-ರಾಜಕೀಯ ಸ್ವರೂಪಗಳನ್ನು ಪಡೆದುಕೊಂಡ ನಂತರದ ಕಾಲದಲ್ಲಿ ಪದ್ಯಗಳನ್ನು ಬರೆದ ಎಲ್ಲ ಭಾಷೆಯ ಒಳ್ಳೆಯ ಕವಿಗಳ ಸೃಜನಾತ್ಮಕ ಹುಡುಕಾಟದಲ್ಲಿ ವಸಾಹತುಶಾಹಿಯ ವಿರುದ್ಧದ ಪ್ರಜ್ಞೆ ಸಹಜವಾಗಿ ಹೆಣೆದುಕೊಂಡಿತ್ತು. ಈ 'ಪ್ರತಿರೋಧಿ ಪ್ರಜ್ಞೆ' ಏಕರೂಪಿಯಾದುದಲ್ಲವಾದರೂ, ಕವಿಗಳು ಸಮಾಜ-ಸಮುದಾಯ-ಸಂಸ್ಕೃತಿಗಳನ್ನು ವಸಾಹತುಶಾಹಿ ಪೂರ್ವಕ್ಕಿಂತ ಭಿನ್ನವಾಗಿ ನಿರೂಪಿಸಿಕೊಳ್ಳುವ ಅನಿವಾರ್ಯತೆಯಲ್ಲಿ 'ಬಹುವಚನೀಯ ಪ್ರತಿರೋಧಿ ಪ್ರಜ್ಞೆ'ಯನ್ನು ತಮ್ಮ ಕಾವ್ಯಪ್ರಯೋಗದಲ್ಲಿ ಅಭಿವ್ಯಕ್ತಿಗೊಳಿಸಿದರು ಎಂಬ ಸಂಗತಿಯನ್ನು ಗಮನಿಸಬಹುದು. ಈ ಸನ್ನಿವೇಶದಲ್ಲಿ, ಪದ್ಯರಚನೆಯ ಸೃಜನಶೀಲತೆ ವಸಾಹತುಶಾಹಿ ವಿರೋಧಿ ಚಳವಳಿಯ ಆದರ್ಶ-ಸಂಕಲ್ಪಗಳ ಜೊತೆ ಸಜೀವವಾಗಿ ಬೆರೆತುಹೋಯಿತು. ಹಾಗಾಗಿ, ಕವಿಯ ವ್ಯಕ್ತಿಗತ ರಚನೆಗಳು ಸಾಮೂಹಿಕ ಚಳವಳಿಯ ಸ್ಫೂರ್ತಿಗೀತೆಗಳಾಗಿ ಮಾರ್ಪಡುವ ಕ್ರಿಯೆ ಸಹಜವೂ ಸುಲಭವೂ ಆಗಿತ್ತು. ಇದಕ್ಕೆ ಸುಬ್ರಹ್ಮಣ್ಯ ಭಾರತಿ, ಸುಕುಮಾರನ್ ಅಸನ್, ಇಕ್ಬಾಲ್, ಫೈಜ್ ಅಹ್ಮದ್ ಫೈಜ್‌ರ ಪದ್ಯಗಳೂ, ಕನ್ನಡದ ನವೋದಯ ಕಾವ್ಯ ಪ್ರಕಾರದ ಎಲ್ಲ ಕವಿಗಳ ಪದ್ಯಗಳೂ ಉತ್ತಮ ಉದಾಹರಣೆಗಳಾಗಿವೆ. ಕನ್ನಡದ ಕವಿ ಗೋಪಾಲಕೃಷ್ಣ ಅಡಿಗರು 'ನವ್ಯಕಾವ್ಯ'ದ ಆದ್ಯ ಪ್ರವರ್ತಕರು; ಸಮೂಹಪ್ರಜ್ಞೆಯ ಸಮೂಹ ಸನ್ನಿಗೆ ಪ್ರತಿಯಾಗಿ ನವಶೋಧದ ಸಂಕಲ್ಪವುಳ್ಳ ವ್ಯಕ್ತಿಪ್ರಜ್ಞೆಯನ್ನು ಜಾಗೃತವಾಗಿಟ್ಟುಕೊಳ್ಳುವುದು ಬಹಳ ಮುಖ್ಯ ಎಂಬುದು ಅವರ ಕಾವ್ಯಸಂಕಲ್ಪ. ಇಷ್ಟಿದ್ದೂ 'ಕಟ್ಟುವೆವು ನಾವು' ಸಂಕಲನದವರೆಗಿನ ಅವರ ಪದ್ಯರಚನೆಯಲ್ಲಿ 'ಸಮೂಹ ಪ್ರಜ್ಞೆ'ಯ ಜೊತೆ 'ವ್ಯಕ್ತಿ ಪ್ರಜ್ಞೆ'ಯನ್ನು ಬೆಸೆಯುವ ಸಂಕಲ್ಪ ಅವರ ಕವಿಶಕ್ತಿಯಾಗಿತ್ತು ಎಂಬುದನ್ನು ನಾವು ಗಮನಿಸಬಹುದು. ಅದನ್ನೇ 'ಯುಗಧರ್ಮ'ವೆನ್ನುವುದು. ಈ ತರಹದ, ಚಳವಳಿಗೆ ಧ್ಯೇಯ-ಸ್ಫೂರ್ತಿ-ಸಂಕಲ್ಪ ನೀಡಬಲ್ಲ ಹಾಡುಗಳನ್ನು ಸ್ವಾಯತ್ತ ರಚನೆಗಳಿಂದ ಪಡೆಯುವುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲೂ ನಾವು ನೋಡಬಹುದು. 1901ರಲ್ಲಿ ರೆ.ಚಾರ್ಲ್ಸ್ ಟಿಂಕ್ಲೆ ಬರೆದ ಪ್ರಾರ್ಥನಾ ಗೀತೆ 1955-68ರ ಅವಧಿಯಲ್ಲಿ ಅಮೆರಿಕದ ಕಪ್ಪು ಜನ ನಡೆಸಿದ 'ನಾಗರಿಕ ಹಕ್ಕು ಚಳವಳಿ'ಯ ಆತ್ಮಗೀತೆಯಾಗಿ ಪರಿವರ್ತನೆಗೊಂಡಿತು; ಅದೇ 'ವಿ ಷಲ್ ಒವರ್ ಕಮ್' ಅಥವಾ ಹಿಂದಿಯ 'ಹಮ್ ಹೋಂಗೆ ಕಾಮ್ ಯಾಬ್..'. ಹಾಗೆಯೇ, 1871ರ 'ಪ್ಯಾರಿಸ್ ಕಮ್ಯೂನ್' ಕ್ರಾಂತಿಯಲ್ಲಿ ಭಾಗಿಯಾಗಿದ್ದ ಫ್ರಾನ್ಸಿನ ಯುಜೆನ್ ಪೋರ್ಟಿಯರ್ ಬರೆದ 'ಇಂಟರ್‌ನ್ಯಾಷನಲೆ' ಎರಡನೇ ಮಹಾಯುದ್ಧ ಕಾಲದ ಎಲ್ಲ ನಮೂನೆಯ ಸಮಾಜವಾದಿ ಪ್ರತಿರೋಧಿ ಚಳವಳಿಗಳ ಧ್ಯೇಯ ಗೀತೆಯಾಯಿತು. 1950ರ ನಂತರದ ದಕ್ಷಿಣ ಏಷ್ಯಾದಲ್ಲಿ ಈ ಬಗೆಯ ಪದ್ಯರಚನಾ ಸೃಜನಾಶೀಲತೆ ಹಾಗು ಸಾಮಾಜಿಕ ಸನ್ನಿವೇಶಗಳ ಸಜೀವ ಸಂಬಂಧ ಕಡಿದುಹೋಯಿತು. ವಿಭಜನೆಯ ನಂತರ ಫೈಜ್ ಅಹ್ಮದ್ ಫೈಜ್ ಬರೆದ ಪದ್ಯಗಳಲ್ಲಿ ಈ ಬಿರುಕಿನ ವಿಷಾದವನ್ನು ನಾವು ಮುಖ್ಯವಾಗಿ ಕಾಣಬಹುದು. ಈ ಕಾರಣವಾಗಿಯೇ, 1970ರ ನಂತರದ ಚಳವಳಿಗಳು, ಬದಲಾದ ಸಾಮಾಜಿಕ ಸನ್ನಿವೇಶದ ಸಂದರ್ಭದಲ್ಲಿ ತಮ್ಮ ಚಳವಳಿಗೆ ಸ್ಫೂರ್ತಿ ನೀಡುವ ಹಾಡುಗಳನ್ನು 'ಅಜಿಟೇಶನ್ ಪ್ರಾಪಗ್ಯಾಂಡ' ರಚನಾ ಮಾದರಿಯ ಮೂಲಕ ಪಡೆದುಕೊಳ್ಳುವುದು ಅನಿವಾರ್ಯವಾಯಿತು.

'ಅಜಿಟೇಶನ್ ಪ್ರಾಪಗ್ಯಾಂಡ' ಅಥವಾ 'ಅಜಿಟ್ ಪ್ರಾಪ್'-ಅರ್ಥಾತ್ ಕ್ರಾಂತಿಯ ಉದ್ದೇಶ ಹಾಗು ವೈಚಾರಿಕತೆಗಳನ್ನು ಜನರಿಗೆ ಮುಟ್ಟಿಸುವ ಸಲುವಾಗಿ ಕೈಗೊಳ್ಳುವ ಯೋಜಿತ ಪ್ರಚಾರ-ಮಾದರಿ 1917ರ ಬೋಲ್ಶಾವಿಕ್ ಕ್ರಾಂತಿಯ ನಂತರ ಸೋವಿಯತ್ ಯೂನಿಯನ್ನಿನಲ್ಲಿ ಹುಟ್ಟಿಕೊಂಡಿತು. ಅದು ಅಧಿಕಾರವನ್ನು ಹಿಡಿದಿದ್ದ ಕ್ರಾಂತಿಕಾರಿ ಪ್ರಭುತ್ವದ ಒಂದು ಉದ್ದೇಶಿತ ಯೋಜನೆಯಾಗಿತ್ತು. ಪದ್ಯ, ನಾಟಕ, ಸಿನಿಮ, ಚಿತ್ರಕಲೆಗಳ ಮೂಲಕ ಕ್ರಾಂತಿಯ ಆಶಯ ಹಾಗು ಸಾರ್ಥಕತೆಯನ್ನು ಪ್ರಸಾರ ಮಾಡುವುದು ಈ ಯೋಜನೆಯ ಉದ್ದೇಶವಾಗಿತ್ತು. ಕ್ರಾಂತಿಯನ್ನು ಬೆಂಬಲಿಸಿದ ಅನೇಕ ಕವಿ-ಕಲಾವಿದರು ಪ್ರಾರಂಭದಲ್ಲಿ ಮನಸಾರೆ ಈ ಪ್ರಚಾರದಲ್ಲಿ ಪಾಲ್ಗೊಂಡರು. ತಮ್ಮ ಸೃಜನಶೀಲತೆಯ ತುಡಿತಕ್ಕೂ ಕ್ರಾಂತಿಯ ಆಶಯಗಳಿಗೂ ಜೀವಂತ ಸಂಬಂಧವಿದೆ ಎಂದೇ ಅವರು ನಂಬಿದ್ದರು. ಕೆಲವೇ ಕಾಲದಲ್ಲಿ ಈ ಸಂಬಂಧದಲ್ಲಿ ಬಿರುಕುಂಟಾಗತೊಡಗಿತು; ಪ್ರಭುತ್ವ 'ಅಜಿಟ್ ಪ್ರಾಪ್ ವಿಭಾಗ'ವನ್ನು 'ಸೈದ್ಧಾಂತಿಕ ಪ್ರಸಾರಣಾ ವಿಭಾಗ'ವಾಗಿ ಬದಲಾಯಿಸಿತು; ಕ್ರಾಂತಿಯ ಬದ್ಧ ಅನುಯಾಯಿಯಾಗಿದ್ದ ವ್ಲದಮೀರ್ ಮಯೊಸ್ಕೊಸ್ಕಿ ತನ್ನ ಸೃಜನಾಶೀಲತೆಯ ಆಶಯ ಹಾಗು ಪ್ರಭುತ್ವದ ಸಿದ್ಧಾಂತ ಪ್ರಚಾರದ ಸ್ವರೂಪಗಳ ನಡುವೆ ಉಂಟಾದ ಬಿರುಕುಗಳ ಆಘಾತದಲ್ಲಿ ಆತ್ಮಹತ್ಯೆ ಮಾಡಿಕೊಂಡ - ಇದನ್ನು 'ಅಜಿಟ್ ಪ್ರಾಪ್' ಕಲಾ ಮಾದರಿಯ ದುರಂತ ಪ್ರತಿಮೆಯಾಗಿ ಎಲ್ಲ ಕಾಲದ ಚಳವಳಿಗಾರರೂ ನೆನಪಿಟ್ಟುಕೊಳ್ಳುವುದು ಅವಶ್ಯಕವಾಗಿದೆ.

ಹೋರಾಟದ ಹಾಡುಗಳ 'ಲೋಕಸತ್ವ'ದ ಸಮಸ್ಯೆ

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದು 64 ವರ್ಷಗಳಾದರೂ, ವಸಾಹತುಶಾಹಿ ವಿರೋಧಿ ಚಳವಳಿಯ ಬಹುಪಾಲು ಸಮಾನತೆಯ ಆಶಯಗಳು ಸಾಕಾರವಾಗದೆ ಉಳಿದಿವೆ. ಹೀಗಾಗಿ ಇಂದು ವಿವಿಧ ಬಗೆಯ ಸಮಾನತೆಯನ್ನು ಸಾಧಿಸಲು ನಡೆಯುತ್ತಿರುವ ಜನಸಮೂಹಿಕ ಚಳವಳಿಗಳಲ್ಲಿ ಭಾಗಿಯಾಗುತ್ತಿರುವ ಜನರಲ್ಲಿ ಸ್ಫೂರ್ತಿ-ಧ್ಯೇಯ-ಸಂಕಲ್ಪಗಳನ್ನು ಹುರಿದುಂಬಿಸಲು ಸ್ವಲ್ಪಮಟ್ಟಿಗೆ ನವೋದಯ ಕಾಲದ ಸ್ವಾಯತ್ತ ಪದ್ಯಗಳನ್ನು ಹೋರಾಟದ ಹಾಡುಗಳಾಗಿ ಇಂದಿಗೂ ಬಳಸಿಕೊಳ್ಳಬಹುದಾಗಿದೆ. ಆದರೆ, ಬದಲಾದ ಚಾರಿತ್ರಿಕ ಸನ್ನಿವೇಶದಲ್ಲಿ, ಸಮಾನತೆಗಾಗಿ ನಡೆಯುವ ಚಳವಳಿಗಳು ಸೈದ್ಧಾಂತಿಕವಾಗಿ ಹೆಚ್ಚು ನಿಖರವೂ-ಸ್ಪಷ್ಟವೂ ಆಗಿ ತಮ್ಮ ವೈಚಾರಿಕತೆಯನ್ನು ಜನರ ಮುಂದೆ ಇಡಬೇಕಾಗಿದೆ. ಈ ಸನ್ನಿವೇಶದಲ್ಲಿ ಹೋರಾಟದ ಹಾಡುಗಳು 'ಅಜಿಟ್ ಪ್ರಾಪ್' ರಚನಾ ಮಾದರಿಯನ್ನು ಆಯ್ದುಕೊಳ್ಳುವುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ 'ಹೋರಾಟದ ಹಾಡುಗಳನ್ನು ಸೃಜನಶೀಲ ಕವಿಗಳಿಂದ ಬರೆಸಬೇಕೋ?' ಅಥವಾ 'ಹೋರಾಟದ ಹಾಡುಗಳನ್ನು ಬರೆಯುವವರನ್ನು ಕವಿಗಳೆಂದು ಸಮಾಜ ಮಾನ್ಯ ಮಾಡಬೇಕೋ?' ಎನ್ನುವುದೆಲ್ಲ ಚಳವಳಿಗಳಿಗೆ ಮುಖ್ಯವಲ್ಲ. ಹೋರಾಟದ ಹಾಡುಗಳ ಉದ್ದೇಶವೇನು? ಪ್ರಸ್ತುತ ಉದ್ದೇಶಕ್ಕನುಗುಣವಾಗಿ ಹೋರಾಟದ ಹಾಡುಗಳ ರಚನೆಯ ಸ್ವರೂಪ ಹೇಗಿರಬೇಕು? ಎಂಬ ಪ್ರಶ್ನೆಗಳು ಮುಖ್ಯವಾದವು-ಅವಕ್ಕೆ ಉತ್ತರಗಳನ್ನು ಕಂಡುಕೊಳ್ಳಬೇಕು. ಹೋರಾಟದ ಹಾಡುಗಳ ಮುಖ್ಯ ಉದ್ದೇಶಗಳು: (1) ಚಳವಳಿಯನ್ನು ಅನಿವಾರ್ಯವಾಗಿಸಿರುವ ಸಾಮಾಜಿಕ ಸ್ಥಿತಿ-ಗತಿಯನ್ನು ವಿವರಿಸುವುದು (2) ಇಂತಹ ಸಾಮಾಜಿಕ ಜೀವನದ ಸ್ಥಿತಿ-ಗತಿಗಳನ್ನು ಬದಲಾಯಿಸುವ ಶಕ್ತಿ ಸಾಮಾನ್ಯ ಜನರಿಗಿದೆ ಎಂದು ತೋರಿಸುವುದು (3) ಜನ ತಮ್ಮೊಳಗಿನ ಶಕ್ತಿಯನ್ನು ಕ್ರಾಂತಿಕಾರಿಯಾಗಿ ಸಾಕಾರಗೊಳಿಸಿಕೊಳ್ಳಲು ತಮ್ಮ ಸ್ಥಿತಿ-ಗತಿಯ ಬಗ್ಗೆ ಯಾವ ಅರಿವನ್ನು ಪಡೆದುಕೊಳ್ಳಬೇಕು ಎಂದು ತಿಳಿಸುವುದು (4) ಅಂತಹ ಜಾಗೃತಿಗೆ ತಮ್ಮ ಚಳವಳಿಯ ವೈಚಾರಿಕತೆ ಹೇಗೆ ಶಕ್ತವಾಗಿದೆ ಎಂದು ವಿವರಿಸುವುದು (5) ಮೇಲಿನೆಲ್ಲದರ ಮೊತ್ತವಾಗಿ, ಜನ ತಮ್ಮ ಚಳವಳಿಯಲ್ಲಿ ಭಾಗವಹಿಸಬೇಕು ಎಂದು ಪ್ರೋತ್ಸಾಹಿಸುವುದು. ಇನ್ನು ರಚನಾ ವಿಧಾನಕ್ಕೆ ಬಂದರೆ ಹೋರಾಟದ ಹಾಡುಗಳಲ್ಲಿ: (1) ಜನರನ್ನು ತಕ್ಷಣ ಸೆಳೆಯಬಲ್ಲ ಪದ, ಶಬ್ದ ಹಾಗು ಶ್ರುತಿ ಲಯವಿರಬೇಕು (2) ಜನರನ್ನು ತಲುಪಬಲ್ಲ, ಜನರಿಗೆ ಪರಿಚಿತವಾಗಿರುವ ಸಂಗೀತಲಯಕ್ಕೆ ಹೊಂದಿಕೊಳ್ಳುವ ಗುಣವಿರಬೇಕು (3) ಜನರಿಗೆ ಪರಿಚಿತವಾಗಿರುವ ಭಾಷೆ, ಲೋಕೋಕ್ತಿ, ಲೋಕಾನುಭಾವಗಳ ಮೂಲಕ ಹಾಡಿನ ಉದ್ದೇಶ ಸಾಧನೆಯಾಗುವಂತಿರಬೇಕು (4) ಜನರಲ್ಲಿ ಜಾಗೃತಿಯ ಸ್ಫೂರ್ತಿ ತುಂಬಬೇಕೆ ವಿನಹ ತಮ್ಮ ಬದುಕಿನ ಸ್ಥಿತಿ-ಗತಿಗಳನ್ನು ನಮ್ಮ ಬ್ರ್ಯಾಂಡಿನ ಚಳವಳಿ ಮಾತ್ರ ಬದಲಿಸುತ್ತದೆ ಎಂಬ ಜಾಹಿರಾತಿನ ಬೊಗಳೆ ಇರಕೂಡದು. ಇವೇನು ನಿಗದಿತ ಮಾಪಕಗಳಲ್ಲ, ಜನರ ಪ್ರಜ್ಞೆಯನ್ನು ಜಾಗೃತಗೊಳಿಸುವ 'ಲೋಕಸತ್ವ'ವನ್ನುಳ್ಳ ಪದ್ಯಗಳು ಲಾಗಾಯ್ತಿನಿಂದ ತೋರುತ್ತಿರುವ ಸೃಜನಶೀಲಗುಣಗಳು. ನಾವು ಈ ಬಗೆಯಲ್ಲಿ ಯೋಚಿಸಿದ ತಕ್ಷಣ, ವಿವಿಧ ಬಗೆಯ ಅಧಿಕಾರಗಳಿಗೆ ಪ್ರತಿರೋಧವನ್ನು ತೋರಿದ ಅನೇಕ ಪದ್ಯರಚನಾಕ್ರಮಗಳು ನಮ್ಮ ಪರಂಪರೆಯಲ್ಲಿ ಇವೆ; ಅವುಗಳಿಂದ ಅನುಭವ ಪಡೆದು ನಾವು ಮುಂದಕ್ಕೆ ಹೋಗಬೇಕು ಎಂಬುದು ತಕ್ಷಣಕ್ಕೆ ಹೊಳೆದುಬಿಡುತ್ತದೆ. ನಾನು ಹೇಳಲು ಇಚ್ಛಿಸುತ್ತಿರುವುದು ಇಷ್ಟೇ: ಹೋರಾಟದ ಹಾಡುಗಳ ಆಯ್ಕೆ ಹಾಗು ರಚನೆಯಲ್ಲಿ ಚಳವಳಿಗಾರರು ಹೆಚ್ಚು ಗಂಭೀರರೂ, ಲೋಕಸೂಕ್ಷ್ಮಜ್ಞರೂ ಆಗಿದ್ದಲ್ಲಿ, ಚಳವಳಿಗೂ ಲೋಕವನ್ನು ಸಂಪರ್ಕಿಸುವ, ಬೆಳಗುವ ವೈಚಾರಿಕತೆಯ ದರ್ಶನವಾಗತೊಡಗುತ್ತದೆ. ಹೋರಾಟದ ಹಾಡುಗಳು ಚಳವಳಿಗಳಿಗೆ ಲೋಕಸಂಪರ್ಕದ ಮಾಧ್ಯಮ ಮಾತ್ರವಾಗಿರದೆ, ಲೋಕವನ್ನು ಅರಿಸುವ ಜ್ಞಾನವೂ ಆಗಬಲ್ಲುದು.

ಈ ಅರ್ಥದಲ್ಲಿ ಪ್ರಸ್ತುತ ಸಂಕಲನ 1970ರ ನಂತರ, ಕರ್ನಾಟಕದಲ್ಲಿ ಕಟ್ಟಿಕೊಂಡ ಸಮಾಜವಾದಿ ಚಳವಳಿಗಳ ಟೊಳ್ಳು-ಗಟ್ಟಿಗಳನ್ನು ಸಹಜವಾಗಿ ತೋರುತ್ತದೆ. ಚರಬಂಡರಾಜು ಅವರ 'ಬೆಟ್ಟಗಳಾ ಒಡೆದೆವು', ಆರ್.ಮಾನಸಯ್ಯನವರ 'ಶಾರಿ ಗಂಜಿಗಾಗಿ' ಮತ್ತು 'ಮಳೆರಾಯ', ಫೈಜ್‌ರ 'ಬೆವರಿನ ಪಾಲು', 'ಮೂಡಿತೊಂದು ಕೆಂಪು ಚುಕ್ಕೆಯೊ', 'ಮನೆ ಮನೆಯ ಕತ್ತಾಲೆ', 'ಹಾಲುಗೆನ್ನೆಯ ಜೀತಗಾರ', ಸಿದ್ದಲಿಂಗಯ್ಯನವರ 'ಸಾವಿರಾರು ನದಿಗಳು', 'ಸಿರಿವಂತರ ಬಾಗಿಲಿಗೆ' ಮತ್ತು 'ಆಕಾಶವ ಎತ್ತಿನಿಲ್ಲಿಸಿ', ಗದ್ದರರ 'ಅಮವಾಸೆ ದಿನ ಹುಟ್ಟಿತೊಂದು ಹೆಣ್ಣುಮಗು', 'ಏನೂ ಕೊಳ್ಳೊಹಂಗಿಲ್ಲ', 'ಬಿನ್ನ ಬೇದವ ಮಾಡಬ್ಯಾಡಿರಿ', ಕೆ.ಬಿ.ಸಿದ್ದಯ್ಯನವರ 'ಈ ನಾಡ ಮಣ್ಣಿನಲ್ಲಿ', ಸುಬ್ಬು ಹೊಲೆಯಾರರ 'ಜೀವಜಲ ನಾನು', ರಾಘವೇಂದ್ರರ 'ಬಸವಣ್ಣನ ಗುಡಿಯ ಮುಂದೆ'- ಇವುಗಳನ್ನು ನಮ್ಮ ಅಸಮಾನ ಸಮಾಜದಲ್ಲಿ, ಸಹಜತೆಯ ಅರಿವಳಿಗೆ ತುತ್ತಾಗದೆ ಚಳವಳಿಯ ರೊಚ್ಚನ್ನು ಕಾಪಾಡಿಕೊಳ್ಳಲು ಮತ್ತೆ ಹಾಡಿಕೊಳ್ಳುವಂತೆ ಒತ್ತಾಯಿಸುವ ಶಕ್ತ ಹಾಡುಗಳಾಗಿವೆ. ಹಲವು ಹಾಡುಗಳು- ರೋಚಕವಾಗಿ ಶುರುವಾಗಿ ಮಧ್ಯಕ್ಕೆ ಠುಸ್ಸಾಗಿಬಿಡುತ್ತವೆ (ಉದಾಹರಣೆಗೆ- 'ಡಬ್ಲ್ಯು ಡಬ್ಲ್ಯು ಡಬ್ಲ್ಯು ಡಾಟ್ ಕಾಮ್'). ಮಿಕ್ಕಿದ ಮುಕ್ಕಾಲುಪಾಸಿ ಹಾಡುಗಳು ನಮ್ಮ ಚಳವಳಿಗಳ 'ಲೋಕಜ್ಞಾನ' ಕೊರತೆಯನ್ನೂ, ಹಾಗಾಗಿ ಪ್ರಾಮಾಣಿಕ ಬದ್ಧತೆ ಇದ್ದೂ ವಿಸ್ತಾರವಾಗಲರಿಯದ ಮಿತಿಯನ್ನೂ ತೋರುತ್ತವೆ. 'ವಿ ಷಲ್ ಓವರ್ ಕಮ್' 'ಗೆದ್ದೆ ಗೆಲುವೆವು' ಎಂಬ ತುಂಡು ರೂಪದಲ್ಲಿದೆ; 'ಇಂಟರ್‌ನ್ಯಾಷನಲೆ' ಕನ್ನಡಕ್ಕೆ ತರ್ಜುಮೆಯೇ ಆಗಿಲ್ಲ; ಮತ್ತೂ ನಮ್ಮ ನಾಡಿನ ಭಿನ್ನ ಸಂಗೀತದ ಮಾದರಿಗಳಲ್ಲಿ ಪರಿಣತಿ ಪಡೆದು ಪ್ರತಿರೋಧಿ ಸಂಗೀತವನ್ನು ಜನಜನಿತಗೊಳಿಸುವ ಒಂದೂ ವೃತ್ತಿಪರ ತಂಡವಿಲ್ಲ; ಇದು ನಮ್ಮ ಚಳವಳಿಗಳ ಸೀಮಿತ ಪ್ರಭಾವಕ್ಕೆ ಹಿಡಿದ ಕನ್ನಡಿ. ನಾವು ಭಾವಿಸಿದ್ದೇ ಬದುಕು, ನಾವು ಕಲ್ಪಿಸಿಕೊಂಡ ಹಾಗೆ ಜನ ಬದುಕುತ್ತಾರೆ ಎಂಬ ಹಟದಲ್ಲಿ ಜನಸಮೂಹಕ್ಕೆ ನಮ್ಮ ಪ್ರಣಾಳಿಕೆಗಳನ್ನು ಉಪದೇಶಾತ್ಮಕವಾಗಿ ದಾಟಿಸುವುದು ಮುಕ್ಕಾಪಾಸಿ ಹೋರಾಟದ ಧಾಟಿಯಾಗಿದೆ. ಇದು ಖಂಡಿತ ಪ್ರತಿಭೆಯ ಕೊರತೆಯಲ್ಲ, ಸೀಮಿತ ಸಂಪನ್ಮೂಲಗಳ ಒತ್ತಡದಲ್ಲಿ ನಡೆಸುವ ಚಳವಳಿಗಳಲ್ಲಿ ಸಹಜವಾಗಿ ಕಾಣುವ ದೌರ್ಬಲ್ಯ.

• ಕೆ.ಫಣಿರಾಜ್


ಶ್ರೀಗಂಧವೆಂಬ ಹೊಲಸು ಕ್ರಾಂತಿಯೆಂಬ ಪರಿಮಳ

ಪುಸ್ತಕ ಪರಿಚಯ




• ಚಂದ್ರಶೇಖರ್ ಐಜೂರ್

'ಇದು ಸಂಘರ್ಷವೊಂದರ ಹುಟ್ಟಿನ ಕಥನ. 1973ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಕಾರ್ಯಕ್ರಮವೊಂದಕ್ಕೆ ಅತಿಥಿಗಳಾಗಿ ಬಂದಿದ್ದ ಅಂದಿನ ದೇವರಾಜು ಅರಸರ ಮುಂತ್ರಿಮಂಡಲದ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರು ತಮ್ಮ ಭಾಷಣದುದ್ದಕ್ಕೂ ಹೆಚ್ಚು ಇಂಗ್ಲಿಷ್ ಬಳಸಿದ್ದು ಅಲ್ಲಿದ್ದ ಕೆಲವು ಸು'ಸಂಸ್ಕೃತ' ಪಂಡಿತರಿಗೆ ಕಿರಿಕಿರಿಯಾಗಿ ಕನ್ನಡದಲ್ಲಿ ಮಾತನಾಡುವಂತೆ ಪಟ್ಟು ಹಿಡಿದರು. ಆ ಸಭೆಯನ್ನು ಸಂಘಟಿಸಿದ್ದ ಸಂಜೀವಯ್ಯ ಎಂಬುವವರು 'ಅಲ್ರೀ ಸ್ವಾಮಿ ಕನ್ನಡದಲ್ಲೇನಿದೆ ಬೂಸಾ' ಅಂದುಬಿಟ್ಟರು. ಸಚಿವರಾದ ಬಿ.ಬಸವಲಿಂಗಪ್ಪನವರು ಕೂಡಾ ಇದೇ ಮಾತುಗಳನ್ನು ಅನುಮೋದಿಸುವಂತೆ 'ಕನ್ನಡ ಸಾಹಿತ್ಯವೇ ಬೂಸಾ' ಎಂದು ವೇದಿಕೆಯಲ್ಲಿ ಮೂರ್‍ನಾಲ್ಕು ಬಾರಿ ಜೋರುದನಿ ತೆಗೆದು ಹೇಳಿಬಿಟ್ಟರು. ಮರುದಿನ ಪತ್ರಿಕೆಗಳಲ್ಲಿ ಇದೇ ಮುಖಪುಟದ ಸುದ್ದಿಯಾಗಿ, ದೊಡ್ಡದೊಂದು ವಿವಾದಕ್ಕೂ ಕಾರಣವಾಯಿತು. ತೀರ್ಪು ಮೊದಲೇ ಬರೆದಿಟ್ಟುಕೊಂಡು ಯಾರಾದರೂ ತಪ್ಪುಮಾಡಿ ಸಿಕ್ಕಿಬೀಳಲಿ ಎಂದು ಹವಣಿಸುವ ಫ್ಯಾಸಿಸ್ಟ್ ನ್ಯಾಯಾಧೀಶರ ಗತ್ತಿನಲ್ಲಿದ್ದ ಸನಾತನಿಗಳು ಬಸವಲಿಂಗಪ್ಪನವರ ವಿರುದ್ಧ ಕುದಿಯತೊಡಗಿದರು. ನಾಡಿನುದ್ದಕ್ಕೂ ವೈದಿಕರ ನೇತೃತ್ವದಲ್ಲಿ ಪ್ರತಿಭಟನೆಗಳು ಜರುಗಿದವು. ಪ್ರತಿಭಟನೆಯ ಕಾವು ಹೆಚ್ಚಾಗುತ್ತಿದ್ದಂತೆ ಬಸವಲಿಂಗಪ್ಪನವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಅರಸು ಸರ್ಕಾರದಿಂದಲೇ ಹೊರನಡೆದರು. ಮುಂದೆ ಈ ಬೂಸಾ ಪ್ರಕರಣ ಬೂಸಾ ಚಳವಳಿಯಾಗಿ ದಲಿತ ಸಂಘರ್ಷ ಸಮಿತಿಯ ಹೊಸ ಹುಟ್ಟಿಗೂ ಕಾರಣವಾಯಿತು. ಈ ಬೂಸಾ ಚಳವಳಿಗೆ ಇಪ್ಪತ್ತೈದು ವರ್ಷ ತುಂಬಿದ ನೆನಪಿಗೆ ಲಕ್ಷ್ಮೀನಾರಾಯಣ ನಾಗವಾರ ಅವರ ಸಂಪಾದಕತ್ವದಲ್ಲಿ 'ಬಿ.ಬಸವಲಿಂಗಪ್ಪ ಮತ್ತು ಬೂಸಾ ಚಳವಳಿಯ ಕಾಲು ಶತಮಾನ'ವೆಂಬ ಪುಸ್ತಕವೂ ಪ್ರಕಟಗೊಂಡಿತು. ಈ ಕೃತಿಯನ್ನು ಆಕರವಾಗಿಟ್ಟುಕೊಂಡು ಕವಿ ಎನ್.ಕೆ.ಹನುಮಂತಯ್ಯ ಬಸವಲಿಂಗಪ್ಪನವರ ಬದುಕು ಮತ್ತು ವ್ಯಕ್ತಿತ್ವವನ್ನು ಹಿಡಿದಿಡುವ ಪ್ರಯತ್ನವನ್ನು 'ಕ್ರಾಂತಿಯ ವಸಂತ'ದಲ್ಲಿ ಮಾಡಿದ್ದಾರೆ. 'ನಾನು ಆಗಿನಿಂದಲೂ ನೋಡುತ್ತಿದ್ದೇನೆ. ಮುಟ್ಟಿಸಿಕೊಳ್ಳದ ಕಪ್ಪು ಚರ್ಮದ ಜನರು ತಲೆಬಾಗಿ ನೀರಿನಲ್ಲಿ ತೇಲಿಬರುತ್ತಿದ್ದಾರೆ. ನೀರು ಬತ್ತಿದ ಕಣ್ಣುಗುಡ್ಡೆಗಳು, ಸೋತ ಶರೀರಗಳು ಎಷ್ಟು ವಿಕಾರವಾಗಿ ಊದಿಕೊಂಡಿವೆ ನೋಡಿ. ಚರಿತ್ರೆಗಳಾಗಿ, ಸುಟ್ಟವಾಸನೆ, ಕೊಲೆಯ ರಕ್ತದ ವಾಸನೆ ಹೀಗೆ ವಿವಿಧ ನಾತವ ಕುಡಿದ ನನ್ನ ಮೂಗಿಗೆ ಈಗ ಶ್ರೀಗಂಧವೂ ಹೊಲಸೆ. ನನ್ನ ಸಹಜತೆಯ ನಾಶಕ್ಕೆ ದುಃಖಪಡಲೇ. ನಾನು ನಿಂತ ಹೆಣನಾತದ ನೀರಿನಿಂದ ಹಾರಿದ್ದಾಯ್ತು, ಕ್ರಾಂತಿಯ ಬೆಳಕಿನ ರೆಕ್ಕೆ ನನ್ನ ತೋಳುಗಳಲ್ಲಿ ಮೂಡಿ ಸಾವಿನಿಂದ ತಪ್ಪಿಸಿಕೊಂಡದ್ದಾಯ್ತು, ಆ ಸಾವು ಸಾವಲ್ಲ ಕೊಲೆ. ಅಂಥ ಕೊಲೆಯಿಂದ ನನ್ನನ್ನು ಕಾಪಾಡಿದ ಕ್ರಾಂತಿಗೆ ಕೈಮುಗಿಯುತ್ತೇನೆ.'–ಇಲ್ಲಿ ಎನ್ಕೆ ನಮಿಸಿರುವ ಕ್ರಾಂತಿಯ ಹೆಸರು ಬಸವಲಿಂಗಪ್ಪ, ಕುವೆಂಪು, ಲಂಕೇಶ್, ಕಿ.ರಂ., ಶೂದ್ರ, ಚಂದ್ರಪ್ರಸಾದ ತ್ಯಾಗಿ ಎಲ್ಲರೂ ಈ ಕ್ರಾಂತಿಗೆ ಹೊಸ ಹೊಳಹುಗಳನ್ನು ನೀಡಿ ವಸಂತವನ್ನು ಇನ್ನಷ್ಟು ಚಂದಗೊಳಿಸಿದ್ದಾರೆ. ಬಸವಲಿಂಗಪ್ಪನವರನ್ನು ಅರಿಯಲು ಇದು ಅನನ್ಯ ಕೃತಿ. ಇಂಥ ಕೃತಿ ರೂಪಿಸಿದ ಎನ್ಕೆ ಈಗ ನಮ್ಮೊಂದಿಗಿಲ್ಲ ಅನ್ನುವುದೇ ಬೇಸರ.



ಕ್ರಾಂತಿಯ ವಸಂತ
ಎನ್.ಕೆ.ಹನುಮಂತಯ್ಯ
ಪ್ರಕಾಶಕರು: ಪಲ್ಲವ ಪ್ರಕಾಶನ
ಚನ್ನಪಟ್ಟಣ (ಅಂಚೆ), ಎಮ್ಮಿಗನೂರು
ಬಳ್ಳಾರಿ -583 113
ಪುಟ: 138, ಬೆಲೆ: 80, ಪ್ರಕಟಣೆ: 2008

ಮೂರು ಸಾಲಿನ ಮೋಕ್ಷದ ಮಾರ್ಗ



ಮುಪ್ಪಾದ ಕೈಯಿಂದ
ಮುಟ್ಟಿದಾಗ ನಿನ್ನ ಎಳೆ ಗುಲಾಬಿ ಕೆನ್ನೆಗಳನ್ನು
ತೊಟ್ಟೆ ಕಳೆದ ಚೈತ್ರಗಳನ್ನು


ಧನ್ಯವಾದಗಳು
ನಿನ್ನ ಮಿದು ಅಪ್ಪುಗೆ ಶಮನಗೊಳಿಸಿತು
ಬೂದಿಯಡಿ ಕೆಂಡಗಳನ್ನು

ಒಂದು ತಿಂಗಳ ಕಾಲ ಕವಿ ಎಚ್.ಎಸ್.ಶಿವಪ್ರಕಾಶರು ಜಪಾನಿನಲ್ಲಿ ಅಡ್ಡಾಡಿದ ಪರಿಣಾಮ 'ಮಾಗಿ ಪರ್ವ'ದ ಹೆಸರಿನ ಹಾಯ್ಕು ಗೊಂಚಲೊಂದನ್ನು ಓದುಗರಿಗೆ ನೀಡಿದ್ದಾರೆ. ಅವರ ಮಿಲರೇಪ, ಮಳೆ ಬಿದ್ದ ನೆಲದಲ್ಲಿ, ಅಣುಕ್ಷಣ ಚರಿತೆ, ಸೂರ್ಯಜಲ, ಮತ್ತೆ ಮತ್ತೆ ಮಬ್ಬಿನ ಹಾಗೆ ಕಣಿವೆಯಾಸೆ ಮೊದಲಾದ ಸಂಕಲನಗಳ ಗಂಭೀರ ಪದ್ಯಗಳನ್ನು ಓದಿದವರಿಗೆ 'ಮಾಗಿ ಪರ್ವ' ತುಂಟ ಕಚಗುಳಿಯಿಡುತ್ತದೆ. 'ಬಾಗ್ದಾದ್: ಒಂದು ಪ್ರಾರ್ಥನೆ'ಯಂತಹ ಹತ್ತಾರು ದೈತ್ಯ ಕವಿತೆಗಳನ್ನು ಬರೆದ ಶಿವಪ್ರಕಾಶರು ತೀರಾ ತಮ್ಮದಲ್ಲದ ಕಾವ್ಯ ಪ್ರಕಾರಕ್ಕೆ ಒಗ್ಗಿಕೊಳ್ಳುವಾಗಲೂ ಹಾಯ್ಕುವನ್ನು ಜೀವನವಿಧಾನ, ಮೋಕ್ಷದ ಮಾರ್ಗ ಎಂದೇ ಕರೆಯುತ್ತಾರೆ. ಮೂರು ಸಾಲಿನಲ್ಲಿಯೇ ಹಾಯ್ಕುವನ್ನು ಹಿಡಿದಿಡಬೇಕೆಂಬ ಸಿದ್ಧಮಾದರಿಯೊಂದರ ಹಟದಲ್ಲಿ ಕನ್ನಡದಲ್ಲಿ ಹಾಯ್ಕು ರಚಿಸಲು ಹೊರಟ ಕೆಲವು ಕವಿಗಳು ವಿಸ್ತಾರಗೊಳ್ಳಬಹುದಾದ ಕವಿತೆಗಳ ಕತ್ತು ಹಿಚುಕಿದ್ದೇ ಹೆಚ್ಚು, ಕನ್ನಡದ ಹಾಯ್ಕುಗಳು ಅರ್ಥ ಧ್ವನಿಸಿದ್ದಕ್ಕಿಂತ ನಿಗೂಢಗಳಲ್ಲಿ ಅವಿತುಕೊಂಡದ್ದೇ ಹೆಚ್ಚು, ಮೂರು ಸಾಲಿನ ರಚನೆ ಹಾಯ್ಕುವಿಗೆ ಸದಾ ಅನಿವಾರ್ಯವಲ್ಲ, ನಮ್ಮ ವಚನಗಳು, ತ್ರಿಪದಿಗಳು ಹಿರಿದನ್ನು ಕಿರಿದಾಗಿಸಿ ಹೇಳಿವೆ. ಪ್ರತ್ಯಕ್ಷ ಅನುಭವವನ್ನು ಮೊದಲು ಮಾಡಿಕೊಂಡು ಅದರ ಮೂಲಕ ಗೂಢಾರ್ಥಗಳನ್ನು ಹೊಳೆಯಿಸುವ ಮಾದರಿಯೇ ಹಾಯ್ಕು ಎನ್ನುತ್ತಾರೆ ಶಿವಪ್ರಕಾಶ್.

ತಣ್ಣಗಾಗಿವೆ ಆಗಲೇ
ನದಿ ನೀರು ಮಾಗಿಯಲ್ಲಿ, ಮಂಜಾಗುವ ಮೊದಲು
ಬಾ ಮೀಯೋಣ

ನೀನು ಮಲಗಿದೀಯಾ?
ಇಡೀ ರಾತ್ರಿ ನಿಂತಿವೆ ಬೀದಿದೀಪಗಳು
ಕಡಲಲೆಗಳ ಏದುಸಿರು

ಧನ್ಯವಾದಗಳು ತಾರೆಗಳೆ
ನನ್ನಜೊತೆಯಾದದ್ದಕ್ಕೆ, ನಿಮ್ಮ ನಿದ್ದೆಯ ಕೊಲೆಗಡುಕ
ಅವಳೇ–ಅಹುದೇನು?



'ಮಾಗಿಪರ್ವ'ಕ್ಕೆಂದು ಕವಿ ಆರ್.ತಾರಿಣಿ ಶುಭದಾಯಿನಿ ಬರೆದ ನಾಲ್ಕು ಮಾತುಗಳಿವು: 'ಹಾಯ್ಕುಗಳ ಸೊಬಗು ಜೀವನದ ಸಣ್ಣ ಸಣ್ಣ ಸಂಗತಿಗಳಲ್ಲಿ ಸೌಷ್ಠವವನ್ನು ತಾಳುವುದನ್ನು ಹಿಡಿಯುವುದರಲ್ಲಿದೆ. ಶಿವಪ್ರಕಾಶರ ಈ ಪ್ರಯೋಗಗಳು ಪ್ರೇಮ, ತತ್ವಜ್ಞಾನ, ಬಂಡೆಗಳ ತೋಟ, ಅಹಂಕಾರದ ಕೊಂಬು ಕಳಚುವ ಜಿಂಕೆ, ಭವದ ಸಂಕೇತವಾದ ನೋವಿನ ಹಲ್ಲು ಎಲ್ಲವನ್ನೂ ಹೊಳೆಯಿಸುತ್ತದೆ. ಹುಸಿವಾಸನೆಯನ್ನೂ, ಮೃದು ಸ್ಪರ್ಶವನ್ನೂ ಕವಿತೆಯ ಓದುಗರು ಅನುಭವಿಸುವಂತೆ ಮಾಡುತ್ತದೆ. ಶಿವಪ್ರಕಾಶರ ಬಹುಪಾಲು ಕವಿತೆಗಳು ಕಥನಗಳನ್ನು ಇಟ್ಟುಕೊಂಡು ನಾಟಕದ ಲಯದಲ್ಲಿ ಅದನ್ನು ಕಟ್ಟುತ್ತ ಮಾತು, ಸ್ವಗತ, ಹತಾಶೆಗಳಲ್ಲಿ ನುಡಿಸುತ್ತವೆ. ಆದರೆ ಹಾಯ್ಕು ಮಾತಾಳಿಯಲ್ಲ, ಅದು ಧ್ಯಾನಕ್ಕೆ ತಕ್ಕುದಾದುದು.'

ಮಾಗಿ ಪರ್ವ: ಎಚ್.ಎಸ್.ಶಿವಪ್ರಕಾಶ
ಪ್ರಕಾಶಕರು: ಕಥನ ಪ್ರಕಾಶನ
ಕಥನ, ನಂ.15, 7ನೇ ಬಿ ಅಡ್ಡರಸ್ತೆ ಗಾರ್ಡನ್ ವಿಲ್ಲಾಸ್
ನಾಗರಬಾವಿ, ಬೆಂಗಳೂರು-560 072
ಪುಟಗಳು: 40, ಬೆಲೆ: ರೂ.40, ಪ್ರಕಟಣೆ: 2009

ಬಾ, ನನ್ನ ಪ್ರೇಮವೇ!



ಬಾ ಪ್ರೇಮವೇ,
ಹಗೆಯ ಜಗವ ಬದಲಿಸುವ ಕ್ರಾಂತಿಯಾಗಿ ಬಾ.
ಹೊಸ ಜಗದ ಖಾತರಿ ಪ್ರೀತಿಯಾಗಿ ಬಾ.
ಕೆಡುಕ ಸುಡುವ ಬೆಂಕಿಯಾಗಿ ಬಾ, ಅದರೊಳಗಿನ
ತಿಳಿಬೆಳಕಾಗಿ ಬಾ,
ವ್ಯಾಮೋಹದೊಳಗಿನ ವೈರಾಗ್ಯವಾಗಿ ಬಾ,
ವೈರಾಗ್ಯದೊಳಗಿನ ವ್ಯಾಮೋಹವಾಗಿ ಬಾ

ಬಾ ನನ್ನ ಪ್ರೇಮವೇ,
ಮೆರವಣಿಗೆಯ ನಡುವಿನ ಒಂಟಿ ಪಯಣದಲ್ಲಿ
ನನ್ನ ಒಡನಾಡಿಯಾಗಿ ಬಾ, ಸಹಚರಿಯಾಗಿ ಬಾ
ಸಾಂಗತ್ಯ ಸುಖವಾಗಿ ಬಾ
ಬೆಂದ ಮನವ ತಣಿಸುವ ಭಾಗೀರಥಿಯಾಗಿ ಬಾ,

ಕಾಯುತ್ತಿದ್ದೇನೆ ನಿನಗೆ, ಓ ನನ್ನ ಪ್ರೇಮವೇ,
ಬರಗೆಟ್ಟ ರೈತ ಮಳೆಹನಿಗೆ ಕಾದಂತೆ,
ಸಂತೆಯಲ್ಲಿ ಕಳೆದುಹೋದ ಮಗು
ಅಮ್ಮನಿಗೆ ಹಂಬಲಿಸುವಂತೆ,

ಪಿಸಾಕಾರಣ ಬಂಧಿತನಾದವನು
ನ್ಯಾಯಾಲಯದ ಆದೇಶ ನಿರೀಕ್ಷಿಸುವಂತೆ,
ಗ್ರಾಮಕೂಪದೊಳಗಿಲ್ಲದ ವಿದ್ಯಾರ್ಥಿ
ಫಲಿತಾಂಶಕ್ಕೆ ಎದುರುನೋಡುವಂತೆ...

ಈಗ ನನಗೆ ಕಾಯುವುದೆಂದರೇನೆಂದು
ಅರ್ಥವಾಗುತ್ತಿದೆ..

ಹಾಗೆಯೇ ರೈತನ ಹತಾಶೆ,
ಅನಾಥ ಬಾಲಕನ ಅಂಜಿಕೆ,
ದಲಿತನ ಆತಂಕ,
ನಿರಪರಾಧಿಯ ನಿರೀಕ್ಷೆ
ಎಲ್ಲವೂ ಇನ್ನಷ್ಟು ಸ್ಪಷ್ಟವಾಗುತ್ತಿದೆ...


ಬಾ, ನನ್ನ ಪ್ರೇಮವೇ ಬಾ
ಕಂಗೆಟ್ಟ ರೈತನ ಮುಗುಳ್ನಗೆಯಾಗಿ ಬಾ,
ಅನಾಥಮನಗಳ ತಂಪೆರೆಯುವಂತೆ ಬಾ
ಭರವಸೆಯ ಬೆಳಕಾಗಿ ಬಾ
ನಿರಪರಾಧಿಯ ನಿರಾಳದಂತೆ ಬಾ.

ಬಾ ಪ್ರೇಮವೇ,
ನನ್ನೊಳಗಿನ ಗಂಡನ್ನು ಹೆಣ್ಣಾಗಿಸು,
ನನ್ನೊಳಗಿನ ಹೆಣ್ಣನ್ನು ಗಂಡಾಗಿಸು
ಲಿಂಗದ ಹಂಗಿಲ್ಲದ ಮಗುವಾಗಿಸು
ಪ್ರೇಮದ ಪ್ರವಾಹ ಹರಿಸು

ಬಾ ನನ್ನ ಪ್ರೇಮವೇ,
ಇನ್ನು ಕಾಯಿಸಬೇಡ
ಧರೆಯ ದ್ವೇಷ ಅಳಿಸು
ಮನದ ಕ್ಲೇಷ ಹರಿಸು

• ಶಿವಸುಂದರ್

...ವುರು ರಾತ್ರಿ ಕಳ್ರು ಇವುರು ಹಗಲಗಳ್ರು ಅಷ್ಟೆಯ!



...ಜಿ ಮತ್ತು ಮಾಜಿಗಳ ಪ್ರಮಾಣದ ...ದೇನಾಯ್ತು ಎಂಬ ಮಾಹಿತಿ ತಿಳಿದುಕೊಳ್ಳಲು ...ಗಿದ್ದ ಕಾಳಮಾವ ಉಗ್ರಿ ಬಂದ ಕೂಡಲೇ, ...ನಾಯ್ತು ಇವುರ ಪ್ರಮಾಣ?" ಎಂದ.

...ಡೂರಪ್ಪ ಹೆದ್ರಿಬುಟ್ಟ ಕಣಮಾವ. ಅದ್ರು ...ರಸ್ವಾಮಿ ಹೋಗಿ ಮನಸಿನಲ್ಲೇ ಪ್ರಮಾಣ ...ಂದನಂತೆ."

...ಲ್ಲಾ ಕಂಡ್ಯ, ಪ್ರಮಾಣ ಮಾಡಕ್ಕೆ ಕರದೋನು ...ಮ, ಕಡಿಗೆ ತಪ್ಪಿಸಿಕೊಂಡೋನು ಅವುನೆಯ ...ಕ್ರಿ ಎಡೂರಪ್ಪ ತಪ್ಪಿತಸ್ಥ ಅನ್ನಂಗಾಯ್ತಲವೆ?"

...ದ್ಕೆ ಅವುನೇನು ಪ್ಲ್ಯಾನ್ ಮಾಡಿದ ಅಂದ್ರೆ ...ಸ್ಥಳಕ್ಕೆ ಇಂತಿಂತ ಕ್ಯಲಸ ಮಾಡಿಕೊಡ್ತಿನಿ ಅಂತ ...ಬಂದನಂತೆ" ಎಂದ ಉಗ್ರಿ.

...ರಮುಸ್ತಳಕಿಂತ ಜಲ್ದಗ್ಯರಮ್ಮನ ಗುಡಿಗೋಗಿ ... ಮಾಡಬೇಕಾಗಿತ್ತು ಕಂಡ್ಯ ಉಗ್ರಿ" ಎಂದಳು

...ನೇಳದು ನಿಜ ಕಣೆ. ಗಂಡದೇವುರಿಗಿಂತ ಹೆಣ್ಣು ...ಭಾಳ ಸ್ಟ್ರಾಂಗಂತೆ. ಜಲ್ದಗ್ಯರಮ್ಮ, ಅಟ್ಟಿಲಕ್ಕಮ್ಮ, ... ಇವುರಲ್ಲಿ ಯಾರ್ನಾರ ಆರಿಸಿಗಂಡಿದ್ರೆ ಈಟೊತ್ತಿಗೆ ...ಮಾಡಿರೊನ್ನ ಅಟ್ಟಗಿಡಬೇಕಾಯ್ತಿತ್ತು" ಎಂದು ಉಗ್ರಿ

...ವುನೇಳದು ನಿಜವೇನೊ ಮಾವ?"

...ೂ ಕಂಡ್ಯೆ. ನಮ್ಮ ಕಣ್ಣೆದ್ರಿಗೆ ರಾಮಯ್ಯ ಸತ್ತೋದ, ...ಡ್ತಿ ಸತ್ತೋದ್ಲು."

...ವುರ್‍ಯಲ್ಲ ಯಾಕ್ ಸತ್ರೂ?"

...ವುರಿಗಾಗದೆಯಿರೋರು ಮಾಟ ಮಾಡ್ಸಿದ್ರು, ಅದ್ಕೆ

...ನಿದ ನಂಬೊದಿಲ್ಲ ಕಣಮಾವ. ಮಾಟ ಮಾಡಿ ... ತಗಿಯಂದೆ ಆದ್ರೆ ಶಿವರಾಮೇಗೌಡ ...ರಮೂರ್ತಿ ಕ್ವಲೆ ಮಾಡಸದಕಿಂತ ಮಾಟನೆ ಮಾಡಿ ...ವುದಿತ್ತಲವೆ? ಅದು ಬ್ಯಾಡ, ನಮಿಗಾಗದ ಜನನ್ಯಲ್ಲ ...ದಾಗಿತ್ತೊ, ಅಷ್ಟಕೂ ಪೂಜೆ ಮಾಡಿಸಿಗಂಡು

ಯಾರ್‍ಯಾರ್ನೊ ಸಾಯಿಸೊ ಈ ದೇವುರು ಒಂಥರಾ ಭೂಗತಲೋಕದ ಡಾನ್‌ಗಳ ತರ ಅನ್ನಬೇಕಾಯ್ತದೆ. ಲಂಚ ತಗಂಡು ಕ್ಯಲಸ ಮಾಡೋ ಸರಕಾರಿ ಗುಮಾಸ್ತರ ತರ ಅನ್ನಬೇಕಾಯ್ತದೆ."

"ನೀನೇಳದು ಒಂಥರಾ ನಿಜವೆ ಕಂಡ್ಯ" ಎಂದ ಸೀರ.

"ಅಂತೂ ಧರಮುಸ್ಥಳನೂ ರಾಜಕಾರಣಕ್ಕೆ ಯಳದು ಬುಟ್ರು."

"ಊ ಕಣಮಾವ. ಎಡೂರಪ್ಪ ಹೆದರಿದ್ದ ನೋಡಿದ್ರೆ ಇಡೀ ಕರ್ನಾಟಕದ ಜನ ಧರಮುಸ್ಥಳದ ಮ್ಯಾಲೆ ಭಕ್ತಿನೆ ಜಾಸ್ತಿ ಮಾಡಿಕಂಡ್ರು."

"ಇವುರ ಹಲ್ಲಂಡೆ ಕ್ಯಲಸಕೆ ಮಂಜುನಾಥನ್ನ ಯಳದಾಡಿದ್ದು ಸರೀಲ್ಲ ಕಂಡ್ಯ."

"ಸರೀಲ್ಲ ಅಂತ ನೀನಂತಿ. ದ್ಯಾವೇಗೌಡನೂ ಮಹಾ ದೈವಭಕ್ತ, ಅಷ್ಟೆ ಅಲ್ಲ ಆಗಾಗ್ಗೆ ಯಜ್ಞ, ಯಾಗ, ಮಾಟ ಮಾಡಸೊ ಗಿರಾಕಿ. ಇನ್ನ ಎಡೂರಪ್ಪೇನು ಕಡಮೆನೆ? ಅವುನು ದ್ಯಾವೇಗೌಡುನಿಗಿಂತ ದೈವಭಕ್ತ. ಅಂತೂ ಭಾಳಾ ವರ್ಸದ ನಂತರ ದ್ಯಾವೇಗೌಡನಿಗೆ ಒಬ್ಬ ಸಮಜೋಡಿ ವೈರಿ ಸಿಕ್ಕಿದ ಕಣಮಾವ. ಈ ಹಿಂದೆ ಅವುನ್ನ ಎದುರಾಯ್ಕಂಡೋರ್‍ಯಲ್ಲ ಸೋತೋಗಿದ್ರು, ಇಲ್ಲ ಸತ್ತೋಗಿದ್ರು. ಈಗಂಗಲ್ಲ, ಏಟಿಗೆ ಎದುರೇಟು ಅನ್ನಂಗಾಗ್ಯದೆ."

"ಇವುರ ಗುದ್ದ್ಯಾಟದಲ್ಲಿ ಕಾಂಗ್ರೆಸಿನವು ಯತ್ತಗೋದೊ?" ಎಂದ ಸೀರ.

"ಅವು ಮನೆಲವೆ ಕಣೊ ಸೀರಮಾವ. ಕಾಂಗ್ರೆಸಿನವು ತಮ್ಮ ಜುಟ್ಟು ಹೈಕಮಾಂಡಿನೋರ ಕೈಲಿ ಕೊಟ್ಟು ಆರಾಮಾಗ್ಯವೆ. ಅವುರ ಕೈಲಿ ಏನೂ ಆಗದಿಲ್ಲ, ಪಾರ್ಟಿಗೆ ಪದಾಧಿಕಾರಿಗಳು ಅಂತ ಯಂತ್ಯಂಥವುನೊ ನೇಮಿಸಿಕೊಂಡ್ರು. ಆ ಪಟ್ಟಿ ನೋಡಿದೋರು ಸುಳ್ರು, ಲಫಂಗರು, ದಗಾಕೋರುನ್ನೂ ಸೇರಿಸಿದ್ದಿರಿ, ಇವ್ರನ್ನೆಲ್ಲ ತಗದಾಕಿ ಅಂತ ಸಿದ್ದರಾಮಯ್ಯ, ಮಾದೇವಪ್ಪ ಏಟೇ ಕೂಗಾಡಿದ್ರು ಕಾಂಗ್ರೆಸಿನೋರು ಕೇರ್ ಮಾಡ್ಳಿಲ್ಲ, ಹೋಗ್ಲಿ ಎಡೂರಪ್ಪನ್ನ ತಗಿರಿ ಅಂದ್ರು, ಅದೂ ಆಗದಿಲ್ಲ ಅಂದ್ರು. ಪಾಪ ಆಗ್ಲಿಂದ ಬೀಜ ಹೊಡಿಸಿಗಂಡ ಎತ್ತಿನಂಗಾಗ್ಯವೆ ಕಾಂಗ್ರೆಸಿನವು. ಇನ್ನು ಒಂದಿಸೇಸ ಅಂದ್ರೆ ಅವುರು ಮಾಡಬೇಕಾದ ಕ್ಯಲಸನ್ಯಲ್ಲ ದಳದೋರೆ ಮಾಡ್ತಯಿರದರಿಂದ ಅವು ಸುಮ್ಮನವೆ."

"ಸಾಮಾನ್ಯವಾಗಿ ಕಾಂಗ್ರೆಸಿನೋರು ಚುರುಕಾಗಿರದು ಯಲಕ್ಷನ್ ಟೇಮಲ್ಲಲವೇನ್ಲ?" ಎಂದ ಸೀರ.

"ನೋಡಪ್ಪ, ನೀನು ಕಾಂಗ್ರೆಸಿನೋರ ಎಷ್ಟು ಮಟ್ಟಿಗೆ ಅರ್ಥ ಮಾಡಿಕಂಡಿದ್ದಿ, ಎಷ್ಟೇ ಆಗ್ಲಿ ಹಿರಿಸಾಯದ ಅಣ್ಣಯನ ಅಭಿಮಾನಿಯಲವೆ ತಿಳಕಂಡಿರತಿ."

"ಏ, ನಾವು ಮದ್ಲಿಂದ ಕಾಂಗ್ರೆಸಿನಲ್ಲೇ ಇದ್ದೊರಲವೇನ್ಲ"

"ಹೆಚ್ಚುಕಮ್ಮಿ ಈಗ್ಲು ನೀವು ಕಾಂಗ್ರೆಸ್ಸೆ ಅಲವೆ ಚಿಗಪ್ಪ" ಎನ್ನುತ್ತಾ ವಾಟಿಸ್ಸೆ ಬಂದ.

"ಧರಮುಸ್ಥಳಕ್ಕೆ ನೀನು ಹೋಗಿದ್ದೇನ್ಲ?" ಎಂದಳು ಜುಮ್ಮಿ.

"ನಾನ್ಯಾಕೋಗನಕ್ಕ ಅಲ್ಲಿ, ದೇವರು ಇರದೇ ಆದ್ರೆ ಅವುನು ಸರ್ವಾಂತರ್ಯಾಮಿ. ಅದ ತಿಳಕಳದೆ ಈ ಪೊಲಿಸ್ ಫೆಲೋಗಳು ಧರ್ಮಸ್ಥಳಕೋಗಿ ಭಕ್ತಾದಿಗಳಿಗ್ಯಲ್ಲ ಮನರಂಜನೆ ಕೊಟ್ಟು ಬಂದವುರೆ."

"ಮನರಂಜನೆಯ ಬುಡದು. ದಳ, ಬಿಜೆಪಿಯೋರು ಅಂಗಿಬಿಚ್ಚಿ ಪಂಚೆ ಉಟಗಂಡು, ಮ್ಯಾಲೆ ಶಲ್ಯ ಹಾಯ್ಕಂಡು ಧರ್ಮಸ್ಥಳದಲ್ಲಿ ತಿರುಗಾಡ್ತಯಿದ್ರೆ ಮಂಜುನಾಥನ್ನ ನೋಡಕ್ಕೆ ಬಂದೋರ್‍ಯಲ್ಲ ಇವುರ್ನೆ ನೋಡತಿದ್ರಂತೆ" ಎಂದ ಉಗ್ರಿ.

"ನೋಡೊತರನೆ ಇದ್ರು ಕಣೊ ಇವುರು. ಅಲ್ಲಾ ತಪ್ಪು ಮಾಡಿದೋರಿಗೆ ಮಂಜುನಾಥ ಶಿಕ್ಷೆ ಕೊಟ್ಟಿರದ್ಕೆ ಸಾಕ್ಷಾಧಾರ ಇದ್ರೆ ಇವುರು ಅಲ್ಲಿಗೋಗಿ ಪ್ರಮಾಣ ಮಾಡ್ಲಿ.

"ನೋಡಪ್ಪ ಭಕ್ತರು ಇಲ್ಲೇ ಹುಟ್ಟಿಗಂಡ್ರು. ನೀನು ಈ ಪ್ರಕರಣದಲ್ಲಿ ಯಾರ ಕಡೆ ಇದ್ದಕ್ಕ?"

"ನಾನು ಕುಮಾರಸ್ವಾಮಿ ಪರ ಇದ್ದೆ ಕಂಡ್ಯ."

"ಯಾಕೆ?"

"ಯಾಕಂದ್ರೆ, ಎಡೂರಪ್ಪ ಸುಳ್ಳೇಳತನೆ ಅಂತ ಗೊತ್ತಾಯ್ತು."

"ಅಂಗರೆ ಕುಮಾರಣ್ಣ ನಿಜ ಹೇಳ್ತನೆ ಅಂತಿಯಾ?"

"ಅಂಗಲ್ಲ, ಅವುನೂ ಸುಳ್ಳನೆಯ. ಅವುರಪ್ಪನೇ ಸುಳ್ಳಪ್ಪ ಇನ್ನ ಅವುನ ಮಗ ನಿಜ ಹೇಳ್ತನೇ? ಎಡೂರಪ್ಪ ಧರ್ಮಸ್ಥಳಕ್ಕೆ ಬನ್ನಿ ಅಂದೇಟಿಗೆ ರೆಡಿಯಾಗಿ ಹೋದ ನೋಡು, ಅದ್ಕೆ ಮೆಚ್ಚಿಗಂಡೆ."

"ನೋಡಕ್ಕ, ಯಾವುದೇ ವಿಷಯ ತಗೊ ಇವೆರಡು ಫ್ಯಾಮಿಲಿಗಳು ಸಮತೂಕದಲ್ಲೇ ಬ್ಯಳಿತಾ ಅವುರೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಇಪ್ಪತ್ತು ತಿಂಗಳೂ ಜಮೀನು ಕೊಂಡವುರಂತೆ. ಅದನ್ನ ಕಣ್ಣಾರೆ ನೋಡಿದ ಎಡೂರಪ್ಪ ಮುಖ್ಯಮಂತ್ರಿಯಾದ ಕ್ಷಣದಿಂದ ಇಲ್ಲಿವರಿಗೂ



ಅಂತ ಯಾವುದೇ ಇನ್ಸಿಡೆಂಟ್ ಇಲ್ಲಿಗಂಟ ನ್ಯಡದಿಲ್ಲ ಮುಂದೆ ನ್ಯಡಿಯದೂ ಇಲ್ಲ."

"ಯಾಕ್ಲ ಅಂಗಂತಿ?" ಎಂದಳು ಜುಮ್ಮಿ.

"ಇರದೇಳಿದೆ ಕಣಕ್ಕ. ಆಕ್ಚುವಲಿ ಧರ್ಮಸ್ಥಳದಲ್ಲಿ ಧರ್ಮ ಅಡಿಗ್ಯದೆ ಅಂತ ಸುದ್ದಿ ಹಬ್ಬಿಸಿದೋರು ಮಂಜುನಾಥನ ವಾರಸ್‌ದಾರ್ರು. ಯಾಕಂದ್ರೆ ಧರ್ಮಸ್ಥಳ ಡ್ಯವಲಪ್ ಮಾಡಬೇಕಾದ್ರೆ ಅಂತ ಸುಳ್ಳುಗಳನ್ಯಲ್ಲ ಹೇಳಲೇಬೇಕು. ದೇವರ ವಿಷಯದಲ್ಲಿ ಸುಳ್ಳೇಳಿದ್ರೆ ಜನ ನಂಬತರೆ, ಕಾಸನೂ ಕೊಡ್ತರೆ. ಈಗಂತೂ ಕುಮಾರಸ್ವಾಮಿ, ಎಡೂರಪ್ಪ ಪ್ರಮಾಣದ ಸುದ್ದಿ ಹಬ್ಬಿಸಿ ಅಲ್ಲಗೋಗಿ ಬಂದಿದ್ರಿಂದ ಧರ್ಮಸ್ಥಳಕ್ಕೆ ಹೋಗಿಬರೋರು ಜಾಸ್ತಿಯಾಯ್ತರೆ."

"ಏ ನನಿಗೇ ಹೋಗಿ ಬರದ ಅನ್ನಿಸ್ಯದೆ ಕಂಡ್ಯ" ಎಂದಳು ಜುಮ್ಮಿ.

ಭೂಮಿ ಕೊಂಡಕತಾ ಅವುನೆ. ಅವುನ ಮ್ಯಾಲೆ ಡಿನೋಟಿಫಿಕೇಷನ್ ದೂರು ಬಂದದಿನವೇ ಆ ಕಡೆ ಶಿವಮೊಗ್ಗದಲ್ಲಿ ಕೊಂಡ ಭೂಮಿ ರಿಜಿಸ್ಟ್ರೇಷನ್ ನ್ಯಡಿತಾಯಿತ್ತಂತೆ. ಇದಕೇನೇಳ್ತೀ?"

"ಇನ್ನೇನೇಳದೊ? ದ್ಯಾವೇಗೌಡ್ರು ಫ್ಯಾಮಿಲಿ ಗುಟ್ಟಾಗಿ ನುಂಗಿದ್ರು, ಈ ಎಡೂರಪ್ಪನ ಪಟಾಲಂ ಆಡಗಲೆ ನುಂಗತ ಕುಂತವೆ ಅಷ್ಟೆ. ಅಲವೇನೊ?"

"ಅಷ್ಟೆ ಅಲ್ಲ ಕಣೊ ಉಗ್ರಿ, ಮುಂದೆ ಬರೋರ್‍ಯಲ್ಲ ಹಿಂಗೆ ನುಂಗಿದ್ರೆ ಕರ್ನಾಟಕ ಉಳದತೇನೊ? ಇವುರು ಕೊಂಡಿರೊ ದಾಖಲೆ ಅವುನತ್ರ ಅವೆ. ಅವುನು ಕೊಂಡಿರೊ ದಾಖಲೆ ಇವುನತ್ರ ಅವೆ. ದ್ಯಾವೇಗೌಡ್ರು ಫ್ಯಾಮಿಲಿ ರಾತ್ರಿ ಕಳ್ಳರಾದ್ರೆ, ಎಡೂರಪ್ಪನ ಫ್ಯಾಮಿಲಿ ಹಗಲುಗಳ್ಳರು. ರಿಯಲಿ ವಂಡ್ರುಪುಲ್ಲಿದು." ಎಂದು ವಾಟಿಸ್ಸೆ ನಕ್ಕ. ❧

...ಮ್ಮೆ ಹೀಗಾಯಿತು

...ತುಂಬ ಬೇಸರ. ಎಲ್ಲರೂ ತಿಳಿದಿರುವುದು ನಾನು ಪುರಸೊ... ... ಮನುಷ್ಯ, ಸದಾ ನಗುನಗುತ್ತಿರುವ ಮನುಷ್ಯ. ಸುಖ...ಷ. ನಾನು ಎಲ್ಲವನ್ನು ನೋಡುತ್ತೇನೆ. ಎಲ್ಲ ನನಗಿಂತ ...ರವಾಗಿ, ಒಳ್ಳೆಯವರಾಗಿ, ಹೊಣೆವಂತರಾಗಿ ಇರುವಂತಿದ್ದಾರೆ. ...ಲ್ಲಿ ಸುಳ್ಳು ಎಂಬುದು ಕ್ರಮೇಣ ಗೊತ್ತಾಗುತ್ತದೆ. ಒಂದಾ...ದು ಪಟ್ಟಣ. ಅಲ್ಲೊಬ್ಬ ಸಂತ ಯಾವಾಗಲೂ ಹಾಡುತ್ತ, ...ಯ ಜನಕ್ಕೆ ಕತೆ ಹೇಳುತ್ತ, ಕೆರೆಯಲ್ಲಿ ಮಿಂದು, ಬಟ್ಟೆ ...ಕೊಂಡು, ಯಾರಾದರೂ ಕೊಟ್ಟರೆ ಉಂಡು, ಕೊಡದಿದ್ದರೆ ...ವಾಸವಿದ್ದು ಜೀವನ ನಡೆಸುತ್ತಿದ್ದ. ಊರಿನ ಜನಕ್ಕೆ ದಾಸರು ...ದ್ದರೆಂದು ಗೊತ್ತಿರಲಿಲ್ಲ, ಪುರಂದರದಾಸರು, ಕನಕದಾಸರು ...ಸಿದ್ದೇ ನಿಜವಾಗಿದ್ದರೆ ಹೀಗಿದ್ದಿರಬೇಕು. ಈ ವ್ಯಕ್ತಿ ಸ್ವಾಮಿ. ...ಸುಮಾರು ಇಪ್ಪತ್ತು ವರ್ಷದಿಂದ ಇದ್ದ. ಊರಿನ ಜನ ...ಏ ಇರದೇ ಇದ್ದ ಊರನ್ನೇ ನೆನಸಿಕೊಳ್ಳಲಾಗುತ್ತಿರಲಿಲ್ಲ. ...ಕೆಯುವನು. ಎಲ್ಲ ತಿಳಿದವನು. ಆತ ಸ್ನಾನ ಮಾಡಿದ್ದನ್ನು, ... ಮಾಡಿದ್ದನ್ನು ಯಾರೂ ನೋಡಿರಲಿಲ್ಲ, ಆತ ಮನುಷ್ಯನ ...ನ್ನೇ ತೋರುತ್ತಿರಲಿಲ್ಲ, ತುಂಬರೆ ಮರದಂತೆ, ಚೋರೆ ...ದಂತೆ ಇದ್ದ. ಸ್ವಾಮಿಯನ್ನು ಕಂಡರೆ ಎಲ್ಲರಿಗೆ ಭಯ, ...ಪ್ರೀತಿ. ನಾವೆಲ್ಲ ನೋಡಿದಾಗ ಅವನು ಮಧ್ಯವಯಸ್ಸಿನವನು. ...ೂರ ಛೇರ್ಮನ್‌ಗಿಂತ ದೊಡ್ಡವನು. ಚುನಾವಣೆಗೆ ನಿಲ್ಲದಿ... ಸ್ವಾಮಿಯೇ ಎಲ್ಲರ ನಾಯಕ. ಅವನ ಹಾಡು, ಮಾತು ...ವಾಗಿ ಒಂದೇ ಸಮಕ್ಕೆ ಇದ್ದವು. ಹೀಗಿದ್ದಾಗ ಒಂದು ಸಣ್ಣ ...ೆ ನಡೆಯಿತು. ಊರಲ್ಲಿ ಯಾವುದೋ ಕಾರಣಕ್ಕೆ ಪ್ರಾಜ್ಞ... ...ತು. ನಮ್ಮ ಛೇರ್ಮನ್ ಬಗ್ಗೆ ನಮಗೆಲ್ಲ ಗೌರವ ಇದ್ದರೂ ...ಪ ಪಾರ್ಟಿ ಮನುಷ್ಯ ಅನ್ನಿಸಿದ. ಅವನಲ್ಲಿ ಊರ 'ಅಮ್ಮ'ನ ಒಡವೆ ಇರುವುದು ಒಳ್ಳೆಯದಲ್ಲ ಅನ್ನಿಸಿತು. ಮನಸ್ತಾಪ ಬೆಳೆಯಿತು. ನಾವೆಲ್ಲ ಪ್ರಯತ್ನಿಸಿ ಒಡವೆಗಳನ್ನು ಸ್ವಾಮಿಗೆ ಕೊಡಿಸಿದೆವು.

ಕತೆ ಇಷ್ಟು ಸರಳವಲ್ಲ. ಒಂದು, ಎರಡು, ಮೂರು ಎಂದು ಹತ್ತಾರು ವರ್ಷ ಕಳೆದವು. ಸ್ವಾಮಿ ದೇವರ ಒಡವೆ ಇಟ್ಟುಕೊಳ್ಳಲು ಮನೆ ಕೊಟ್ಟಿದ್ದೆವು. ಕ್ರಮೇಣ ಮುಪ್ಪು ಬಂತು. ಅದೇ ರೀತಿಯಲ್ಲಿ ಸ್ವಾಮಿ ಹಾಡುತ್ತಿದ್ದ, ಮಾತಾಡುತ್ತಿದ್ದ.

ಒಂದು ದಿನ ಒಬ್ಬ ದೇವರ ಅಡ್ಡಿಕೆಯಲ್ಲಿ ಮುತ್ತು ಹಾರಿದ್ದು ನೋಡಿದ. ದಿನದಿನಕ್ಕೆ ಜನಕ್ಕೆ ಅನುಮಾನ ಶುರುವಾಯಿತು. ಕೇಳಲು ಹಿಂಜರಿಕೆ. ಎಲ್ಲೆಲ್ಲೂ ಸಂಶಯ ಮಾತ್ರ. ಜನ ಒಟ್ಟಾಗಿ ಸೇರಿ ಒಡವೆಗಳ ಬಗ್ಗೆ ಕೇಳಲು ತೀರ್ಮಾನಿಸಿದರು. ಆದರೆ ಕೇಳುವ ಸಂಜೆ ಸ್ವಾಮಿ ಇರಲಿಲ್ಲ.

ಎಲ್ಲಿಗೋ ಹೊರಟುಹೋದ-ಒಡವೆಗಳೊಂದಿಗೆ ಮಾಯವಾಗಿದ್ದ. ಆ ಊರಲ್ಲಿ ನಲವತ್ತು ವರ್ಷ ಇದ್ದವನು ಕದ್ದನೆ? ಓಡಿಹೋದನೆ?

ಹತ್ತಾರು ಮೈಲಿ ದೂರದ ಊರೊಂದರಲ್ಲಿ ಹೆಂಗಸೊಬ್ಬಳನ್ನು ಇಟ್ಟುಕೊಂಡು ಇದ್ದಾನೆ ಎಂದರು. ಕುಡಿಯುವುದನ್ನು ಕಲಿತಿದ್ದಾನೆ ಎಂದರು. ಏನೇನೋ ಹೇಳಿದರು. ಅದೆಲ್ಲ ನಿಜವಿರಬಹುದು, ಸುಳ್ಳಿರಬಹುದು.... ಜನರ ಮನಸ್ಸಿನಲ್ಲಿ ಇದ್ದದ್ದರ ಪ್ರತಿಬಿಂಬ ಇರಬಹುದು.

ಸ್ವಾಮಿ ಹೊರಟುಹೋಗಿದ್ದ. ಅಷ್ಟು ಮಾತ್ರ ನಮಗೆ ಗೊತ್ತಿತ್ತು.



ಅಸ್ತಿತ್ವ, ಅಸ್ಥಿ, ಅಸ್ಥಿರ....

ಮಹಾ ವಿದ್ವಾಂಸರೆಂದು ನಾವು ತಿಳಿದಿದ್ದವರು ತಪ್ಪುತಪ್ಪಾಗಿ ಬರೆಯುವುದನ್ನು ನಾನು ನೋಡಿದ್ದೇನೆ. ಸಂಸ್ಕೃತ ಬಲ್ಲವರು ತುಂಬ ಚೆನ್ನಾಗಿ ಬರೆಯುತ್ತಾರೆಂದು ಕೆಲವರು ತಿಳಿದಿದ್ದಾರೆ; ಅನೇಕ ಭಾಷೆ ತಿಳಿದವರ ಶೈಲಿ ಚೆನ್ನಾಗಿರುತ್ತೆಂದು ಭ್ರಮಿಸುತ್ತೇನೆ. ಸಂಸ್ಕೃತ ಬಲ್ಲವರು ಅನೇಕ ಸಲ ಕನ್ನಡ ಪದಗಳನ್ನು ತಪ್ಪಾಗಿ ಬರೆಯುತ್ತಾರೆ; ಕನ್ನಡ, ಇಂಗ್ಲಿಷ್, ಉರ್ದು ಇತರ ಭಾಷೆಗಳನ್ನು ಬಳಸಿ ಬರೆಯಬೇಕಾದಾಗ ಮುಗ್ಗರಿಸುತ್ತಾರೆ. 'ಅಸ್ಥಿಪಂಜರ' ಎಂಬುದನ್ನು ತೆಗೆದುಕೊಳ್ಳಿ. ಅಸ್ಥಿ ಎಂದರೆ ಎಲುಬು, ಈ ಪದದಿಂದಲೇ 'ಅಸ್ತಿತ್ವ' ಬಂದಿದೆ. ತಪ್ಪು ಬರೆದು ಕನ್ನಡಕ್ಕೆ ಬಂದಾಗ ಹಾಗೆ ಆಗಿದೆಯೆಂದು ತಪ್ಪಿಸಿಕೊಳ್ಳಲಾಗುವುದಿಲ್ಲ. 'ಅಸ್ಥಿಪಂಜರ' 'ಅಸ್ತಿಪಂಜರ' 'ಅಸ್ತಿತ್ವ' 'ಅಸ್ತಿತ್ವವಾದ' ಎಂದೆಲ್ಲ ಬರೆದದ್ದು ನೋಡಿದ್ದೇನೆ. 'ಗರ್ಜನೆ' ನಾನು ಬಲ್ಲಂತೆ ಸರಿಯಾದ ಪ್ರಯೋಗ. ಆದರೆ ಗರ್ಜನೆಯ ಸದ್ದನ್ನು ಅನುಕರಿಸುವಾಗ 'ಘರ್ಜನೆ' ಎಂದು ಬರೆಯುವವರಿದ್ದಾರೆ. ಹಣಸ್ಥ ಹಣಸ್ತ ಮರ್ಯಾದಸ್ತ ಮರ್ಯಾದಸ್ಥ ಪಾಕಿಸ್ತಾನ, ಆದರೆ ದೇವಸ್ಥಾನ, ಸ್ಥಾನಮಾನ... ದಾಳಿ ಎಂಬುದು ಬಹಳ ಸಲ ಗರ್ಜನೆಯಂತೆಯೇ 'ಧಾಳಿ'ಯಾಗುತ್ತದೆ. ಧಿಡೀರ್, 'ದಿಢೀರ್' ಇದರಲ್ಲಿ ಯಾವುದು ಶುದ್ಧ ಎಂದು ನಿರ್ಧರಿಸುವುದು ಕಷ್ಟ. ಹಾಗೆಯೇ ಪುಢಾರಿ, ಪುಡಾರಿ... ಆದರೆ ಎಲ್ಲರೂ ಒಂದೇ ರೂಪದಲ್ಲಿ ಪದಗಳನ್ನು ಬಳಸುವಂತಾದರೆ ಈ ಗೊಂದಲ ಇರುವುದಿಲ್ಲ.

ಬರಹದ ಲಯಬದ್ಧತೆಗೆ ಹೊಂದಿಕೊಂಡ ಅನೇಕ ಪದಗಳು ತಮ್ಮ ಧ್ವನಿಗಳನ್ನು ತಿದ್ದಿಕೊಳ್ಳುತ್ತವೆ. ಪಂಡಿತರು ಸರಿಯಾಗಿ ಬರೆಯುತ್ತಾರೆನ್ನುವುದು ಯಾವಾಗಲೂ ಸರಿಯಲ್ಲ. ಚಿ. ವಾಸುದೇವಯ್ಯನವರ 'ಆರ್ಯಕೀರ್ತಿ', ಮುದಿವಾಳೇಶ್ವರ 'ಕಾದಂಬರಿ' ಮತ್ತು ವಚನಕಾರರ ಕನ್ನಡ ಅಭ್ಯಸಿಸಿದರೆ ನನಗೆ ವೈಯಕ್ತಿಕವಾಗಿ ಅನ್ನಿಸುವುದು; ಪಾಂಡಿತ್ಯ ಸರಿ, ಆದರೆ ವ್ಯವಹಾರಜ್ಞಾನ ಮತ್ತು ಆರೋಗ್ಯವಂತ ಇಂದ್ರಿಯಗಳು ಭಾಷೆಗೆ ಮುಖ್ಯ. ದೇವುಡು ಅವರ ಕನ್ನಡ ಮತ್ತು ರಾಳ್ಳಪಳ್ಳಿ ಅನಂತಕೃಷ್ಣಶರ್ಮರ ಕನ್ನಡ ಹೋಲಿಸಿದರೆ ಇದು ತಿಳಿಯುತ್ತದೆ: ಇಬ್ಬರೂ ವಿದ್ವಾಂಸರು. ಆದರೆ ಬರೆಯುವುದರಲ್ಲಿ ಎಷ್ಟು ವ್ಯತ್ಯಾಸ!

ದೇವುಡು ಮಹಾ ಜಡ ಮನುಷ್ಯ......

-ಜೂನ್ 21, 1995

ಧರ್ಮಾಧಿಕಾರಿ ಡಿಫೆನ್ಸ್ ಸ್ಟ್ರೋಕ್

'ಇಂತಹ ಅವಕಾಶ ಮತ್ತೆ ಸಿಗೋದಿಲ್ಲ ಬಿಡ್ರಿ' ಪೇಚಾಡಿಕೊಂಡರು ಗೌಡರು.

'ಎಂತಹ ಅವಕಾಶ ಗೌಡರೆ' ಅಂದೆ.

'ಚೆನ್ನ ಚೆನ್ನದಂತ ಅವಕಾಶ ಸಿಕ್ಕಿತ್ತಲ್ರೀ... ಎಲ್ಲಾ ಹಾಳು ಮಾಡಿಬುಟ್ರು.'

ಮತ್ತೆ ಅದೇ ರಾಗ, ಅದೇ ಹಾಡು.

'ಅದೇನು ಬಿಡಿಸಿ ಹೇಳಿ ಗೌಡರೆ' ಅಂತ ಕೊಂಚ ಬೇಸರ ತೋರಿಸಿದೆ.

'ಅದೇರೀ.... ಧರ್ಮಸ್ಥಳ... ಛೇ ಎಂತಹ ಅವಕಾಶ ಸಿಕ್ಕಿತ್ತೂ...'

ಟ್ಯೂಬ್‌ಲೈಟ್ ಹತ್ತಿಕೊಂಡಿತು. ಹಾಲಿ, ಮಾಜಿ ಮುಖ್ಯಮಂತ್ರಿಗಳಿಗೆ ಸಂಬಂಧಿಸಿದ್ದು ಅನ್ನುವುದು ಅರ್ಥ ಆಯಿತು.

'ಇಬ್ಬರೂ ಹೋಗಿದ್ದರಂತಲ್ಲ ಗೌಡರೆ' ಎಂದೆ.

'ಹೋಗಿದ್ರು ಸರೀರಿ. ಆದ್ರೆ ಪ್ರಮಾಣ ಮಾಡಲಿಲ್ವೆ' ಅಂತ ಮತ್ತೆ ಪೇಚಾಡಿಕೊಂಡರು.

ನನಗೆ ಆಶ್ಚರ್ಯ ಆಯಿತು. ಗೌಡರು ಪ್ರಗತಿಪರ ಚಿಂತಕ ಎಂದು ರಾರಾಜಿಸಿದ್ದವರು. ಅಂತಹವರೆಲ್ಲ ದೇವರ ಮುಂದೆ ಪ್ರಮಾಣ ಮಾಡಿ ರಾಜಕೀಯ ಹೇಳಿಕೆಗಳ ಸತ್ಯಾಸತ್ಯತೆ ಪರೀಕ್ಷಿಸಲು - ಹೊರಡುವುದು ಮೂರ್ಖತನದ ಪರಮಾವಧಿ; ಸಂವಿಧಾನ ವಿರೋಧಿ ಕ್ರಿಯೆ ಎಂದೆಲ್ಲ ಹೇಳುತ್ತಿದ್ದರು. ಅಂತಹವರೇ ಹೀಗೆಂದರೆ ಏನು ಅರ್ಥ? ಅದನ್ನೇ ಅವರಿಗೆ ತಿಳಿಸಿದೆ.

'ಹಾಗಲ್ಲರೀ ಅವರು ಪ್ರಮಾಣ ಮಾಡಬೇಕಿತ್ತು' ಎಂದರು!

ಪ್ರಗತಿಪರ ಚಿಂತಕರು ಅಂದರೆ ಗೋಸುಂಬೆ ಗೋತ್ರದವರಾ ಅನ್ನುವ ಅನುಮಾನ ಕಾಡಿತು.

'ಏನು ಗೌಡರೇ ನೀವು ಹೇಳ್ತಾ ಇರೋದು?' ಅಂದೆ.

'ಸರ್‍ಯಾಗೇ ಹೇಳ್ತಾ ಇದ್ದೀನ್ರೀ' ಎಂದು ತಮ್ಮ ಅಭಿಪ್ರಾಯವನ್ನು ಬಿಡಿಸಿ ಹೇಳಿದರು. ನನ್ನ ಮಾತಿನಲ್ಲಿ ಹೇಳುವುದಾದರೆ.....

ಸತ್ಯಪರೀಕ್ಷೆ ಆಗಬೇಕಿತ್ತು.

ಯಾವುದರ ವಿಷಯದಲ್ಲಿ?

ರಾಜಿ ಸಂಧಾನಕ್ಕೆ ಯಾರನ್ನಾದರೂ ಕಳುಹಿಸಿದ್ದರಾ?

ಕಳುಹಿಸಿದ್ದರು ಅಂತ ಒಬ್ಬರು, ಇಲ್ಲ ಅಂತ ಇನ್ನೊಬ್ಬರು.

ಇದರ ಸತ್ಯಾಸತ್ಯತೆ ಆಗಬೇಕು. ಇದರ ತೀರ್ಪಿಗಾಗಿ ಇಬ್ಬರೂ ಮಂಜುನಾಥ ಸ್ವಾಮಿ ಸನ್ನಿಧಿಗೆ ಹೋಗುತ್ತಿದ್ದರು.

ಇಬ್ಬರೂ 'ನಾನು ಹೇಳಿದ್ದು ಸತ್ಯ' ಎನ್ನುತ್ತಿದ್ದರು!

ಎರಡೂ ಸತ್ಯವಾಗಿರಲು ಸಾಧ್ಯವಿಲ್ಲ ತಾನೇ? ಆದರೂ ಹಾಗೆ ಹೇಳುತ್ತಿದ್ದರು.

ಮಂಜುನಾಥನ ಮಹಿಮೆ. ಒಬ್ಬರಿಗೆ ಶಿಕ್ಷೆ ಆಗಬೇಕಲ್ಲ?

ಉಹುಂ ಯಾರಿಗೂ ಏನೂ ಆಗುತ್ತಿರಲಿಲ್ಲ; ಈಗಿರುವಂತೆಯೇ ಮುಂದುವರೆಯುತ್ತಿದ್ದರು!

ಜನರ ಮೇಲೆ ಇದರ ಪರಿಣಾಮ ಏನಾಗುತ್ತಿತ್ತು?

ಮಂಜುನಾಥನ ಮೇಲೆ ಆಣೆ ಇಟ್ಟು ಸುಳ್ಳು ಹೇಳಿದರೆ



ಯಾವುದೇ ಅಪಾಯವಿಲ್ಲ ಎಂದು ಮನವರಿಕೆಯಾಗುತ್ತಿತ್ತು. ಅಂತಹ ತೊಂದರೆಯಾಗುತ್ತೆ, ಇಂತಹ ತೊಂದರೆಯಾಗುತ್ತೆ ಎಂಬುದೆಲ್ಲ ಕಟ್ಟುಕತೆ ಎಂಬುದು ಅರಿವಿಗೆ ಬರುತ್ತಿತ್ತು. ಧರ್ಮಸ್ಥಳಕ್ಕೆ ಹೋಗುವವರ ಸಂಖ್ಯೆ ಕ್ಷೀಣಿಸುತ್ತಿತ್ತು. ಮೌಢ್ಯ ಕರಗುತ್ತಿತ್ತು, ವೈಚಾರಿಕ ಮನೋಭಾವ ಬೆಳೆಸಿ ಎನ್ನುವ ಸಂವಿಧಾನದ ಆಶಯಕ್ಕೆ 'ಆಣೆ ಪ್ರಮಾಣ' ಪರೋಕ್ಷವಾಗಿ ಕಾರಣ ಆಗುತ್ತಿತ್ತು!


ಗೌಡರ ಮಾತನ್ನೇ ಮೆಲುಕು ಹಾಕುತ್ತಾ ದಾರಿಯಲ್ಲಿ ಹಾಗೇ ಚಿಂತಿಸಿದೆ. ಹೌದು ಇದು ನಿಜವಾದರೆ ಕುಮಾರ ಸ್ವಾಮಿ ದೇವರ ಸನ್ನಿಧಿಯಲ್ಲಿ ಪ್ರಮಾಣ ಮಾಡಿದರಂತಲ್ಲಾ... ಧರ್ಮಸ್ಥಳದ ಧರ್ಮಾಧಿಕಾರಿಯವರು 'ಸತ್ಯ ಪರೀಕ್ಷೆ ಆಗಬೇಕಾದರೆ ವಾದಿ, ಪ್ರತಿವಾದಿ ಇಬ್ಬರೂ ಇರಬೇಕು. ಒಬ್ಬರೇ ಬಂದು ಹೇಳಿದ ಅಹವಾಲನ್ನು ಮಂಜುನಾಥ ಸ್ವೀಕರಿಸುವುದಿಲ್ಲ' ಎಂಬುದಾಗಿ ಮೊದಲೆ ಪ್ರಚುರಪಡಿಸಿದ್ದು ಡಿಫೆನ್ಸ್ ಸ್ಟ್ರೋಕಾ....!

ವಸಿ ಸಮಾಧಾನ ಮಾಡ್ಕಳಿ!

ಸುರಿಯುವ ಮಳೆಯಲ್ಲೂ ಸಾಲಿನಲ್ಲಿ ನಿಂತು ಮಂಜುನಾಥನ ದರ್ಶನಕ್ಕೆ ಹಾತೊರೆಯುತ್ತಿದ್ದ ನೈಜ ಭಕ್ತರಿಗೆ ದರ್ಶನ ನೀಡಲು ಅವನು ತಡ ಮಾಡಿದನಂತೆ. ಇದರಿಂದ ಕುಪಿತರಾದ ಭಕ್ತರು ಯಡ್ಯೂರಪ್ಪ ಕುಮಾರಸ್ವಾಮಿ ಇಬ್ಬರಿಗೂ ಹಿಡಿಶಾಪ ಹಾಕಿದರಂತೆ. ಪಾಪ ಅಪಾಯಿಗಳ್ದೇನೂ ತಪ್ಪಿಲ್ಲ ಕಣ್ರಿ. ಅವರು ಮೊದಲೇ ಧರ್ಮಾಧಿಕಾರಿಗಳಿಗೆ ಇಂತಹ ದಿವಸ ಸಂಸಾರ ಸಮೇತ ಬಂದು ದೇವರ ದರ್ಶನ ಮಾಡ್ತೀವಿ ಎಂದು ತಿಳಿಸಿದ್ದರಂತೆ. 'ಸಂಸಾರ' ಅನ್ನೋದೆ ಅವರಿಗೆ ಗೊಂದಲಕ್ಕೆ ಕಾರಣವಾಗಿರಬಹುದು. ನಮ್ಮ ಕಡೆ 'ಇದು ನಮ್ಮ ಸಂಸಾರ' ಅಂದರೆ ಇವಳು ನನ್ನ ಹೆಂಡತಿ ಅನ್ನೋ ಅರ್ಥ ಇದೆ. ಧರ್ಮಾಧಿಕಾರಿಗಳು ದಂಪತಿಗಳ ಸಮೇತ ಬಂದು ಆಶೀರ್ವಾದ ಪಡೀತಾರೆ ಅಂದುಕೊಂಡಿರಬಹುದು. ಆದರೇನಾಗಿತ್ತು, ಅಂದ್ರೆ ಯಡ್ಯೂರಪ್ನೋರ್ಗೆ ಎಲ್ರುಗೂ ಗೊತ್ತಿರೋ ಹಂಗೆ 'ಸಂಸಾರ' ಇಲ್ಲ. ಈ ವಿಧುರ ಯಾವ 'ಸಂಸಾರ'ದ ಜೊತೆ ಬರ್ತಾರೊ, ಅವರಿಗೆ ಅಕ್ಕಪಕ್ಕ ಬೇರೆ ಬೇರೆ ರೂಮುಗಳ ವ್ಯವಸ್ಥೆ ಮಾಡಬೇಕೋ ಅಥ್ವಾ ಒಂದೇ ರೂಮು ಸಾಕೊ ಅನ್ನೋ ಗೊಂದಲದಲ್ಲಿ ವ್ಯವಸ್ಥಾಪಕರು ಬಿದ್ದಿರಬಹುದು. ಹೇಗೂ ಇರಲಿ ಎಂದು ಎರಡಕ್ಕೂ ತಯಾರು ಮಾಡಿಕೊಂಡಿರಬಹುದು. ಇನ್ನು ಕುಮಾರಸ್ವಾಮಿಯವರದ್ದೂ ಇಂತಹದ್ದೇ ಪೇಚಿನ ಪ್ರಸಂಗ ತಂದೊಡ್ಡಿರಬಹುದು. ಅಧಿಕೃತ ಪತ್ನಿ, ಅನಧಿಕೃತ ಪತ್ನಿ ಅಂತ ಇದ್ದಾರಂತಲ್ಲ ಅವ್ರುಗೆ. ಇಬ್ಬರೂ ಜೊತೇಲೇ ಬಂದಾರೊ, ಒಂದೇ ರೂಮು ಸಾಕೋ, ಎರಡು ಮೂರು ಬೇಕೋ ಅನ್ನೋ ಗೊಂದಲ ಸೃಷ್ಟಿಯಾಗಿರಬಹುದು. ಅದ್ನೂ ಹೆಂಗೋ ನಿಭಾಯಿಸಾನ ಅಂತಿದ್ದರೇನೋ. ಆದರೆ ಏನಾಗಿದೆ ಅಂದ್ರೆ ಇಬ್ಬರೂ 'ಸಂಸಾರ' ಕರೆದುಕೊಂಡು ಬರದೆ ಶಾಸಕರ ದಂಡು ಕರ್ಕೊಂಡ್ಬಂದವ್ರಂತೆ. ಅಷ್ಟೊಂದು ಮಂತ್ರಿಗಳು, ಶಾಸಕರು ಇಂತಹ ದೊಡ್ಡ ಮನುಷ್ಯರೆಲ್ಲ ಒಟ್ಗೆ ಬಂದ್ರೆ ಎಂತಹ ದೇವರಾದರೂ ಅವರಿಗೆ ಮೊದಲ ಪ್ರಾಶಸ್ತ್ಯ ನೀಡೇ ನೀಡ್ತಾನೆ. ಯಾಕೆಂದ್ರೆ ಇಂತಿಂತೋರೆಲ್ಲ ಬಂದಿದ್ರಂತೆ ಅಂದ್ರೆ ಅವನ ಗ್ರೇಡೂ ಹೆ... ಅಂತ ತಿಳ್ಕೊಂಡೆ ಇರ್ತಾನೆ. ಆದ್ರೆ ಹಂಗ್ಮಾಡಿದ್ನಂತೆ. ಇ... ದೈವಸನ್ನಿಧಿಯಲ್ಲಿ ತಕರಾರು ತೆಗೆದರೆ ಹೆಂಗೆ ಅಂತ... ವಸಿ ನಿಧಾನ ಭಕ್ತರೇ!

ಅಣಕ

ಎಚ್.ಎಲ್. ಕೇಶವಮೂರ್ತಿ



ಹಳ್ಳಿ ಊಟ ಬೆಳ್ಳಿ ತಟ್ಟೆ

ಸಾವಯವ ಕೃಷಿ ಒಂದು ವರ.

ಯಾರಿಗೆ? ಇದು ಸಂಶಯಾಸ್ಪದ.

ಭಾಜಪ ಕಾರ್ಯಕರ್ತರಿಗೆ ಎಂದು ಕೆಲವರ ಆರೋ... ಆಗಲಿ ಬಿಡಿ ಏನಂತೆ. ಅವರೇನು ಪಾಕಿಸ್ತಾನಿಗಳಲ್ಲ... ರೈತರಿಗೆ ಎಂಬುದು ಆಡಳಿತಗಾರರ ವಾದ.

ಸಮಯಕ್ಕೆ ಸರಿಯಾಗಿ ರಸಗೊಬ್ಬರ ಒದಗಿಸಲಾ... ವೈಫಲ್ಯ ಮುಚ್ಚಲು ಈ ನಾಟಕ ಎನ್ನುವವರೂ ಇದ...

ಯಡ್ಯೂರಪ್ಪನವರಿಗೆ ಮಾತ್ರ ಸಾವಯವ ಕೃಷಿಯ... ನಂಬಿಕೆ. ಇದನ್ನು ವಿಸ್ತರಿಸಲು ಪ್ರತಿ ತಿಂಗಳ ಕೊನೆ ಶನಿವ... ಇವರಿಂದ ಅನ್ನದಾತನ ಅಂಗಳದಲ್ಲಿ ಸಾವಯವ ಸಂವಾ...

ಯಾರು ಈ 'ಅನ್ನದಾತ'? ಈ ಪ್ರಶ್ನೆಯಲ್ಲೇ ಯ... ಜಾತಿಯವನು ಎಂಬುದಿದೆ. ಬಹಳವಾಗಿ ಲಿಂಗಾಯತ...

ಹೌದು, ಇದರಲ್ಲಿ ಆಶ್ಚರ್ಯ ಏನು?

ದಲಿತರ ಮನೆಗೆ ಹೋಗುತ್ತಿದ್ದರೇನೋ. ಆದರೆ ಅವ... ಭೂಮಿಯೇ ಇಲ್ಲ! ಬಹಳವಾಗಿ ಇರುವ ಭೂಮಿ ... ಲಿಂಗಾಯತ, ಒಕ್ಕಲಿಗರ ಸ್ವತ್ತು! ಸಹಜವಾದ ಆಯ್ಕೆ... ಅವರ ಬಳಿಗೆ ಯಡ್ಯೂರಪ್ಪನವರನ್ನ ಕರೆದೊಯ್ಯುತ್ತೆ.

ಈ ಸಲದ ಆಯ್ಕೆ ಗುಲ್ಬರ್ಗಾ ಜಿಲ್ಲೆಯ ಹಳ್ಳಿ.

ಎಂತಹ ಪತ್ರಕರ್ತರಿದ್ದಾರೆ ಅಂತೀರಿ. ಸಂವಾದ ಕುರಿ... ಒಂದು ಅಕ್ಷರ ಬರೀಲಿಲ್ಲ, ಉಂಡ ಊಟ ವರ್ಣಿಸಿದರ... ಬೆಳ್ಳಿ ತಟ್ಟೆಯಲ್ಲಿ ಅವರು ಭೋಜನ ಸವಿದದ್ದು ಗೇಲಿ... ವಸ್ತು ಆಯಿತು!

ಯಾಕ್ರೀ ಹಿಂಗೆಲ್ಲ ನಂ ಯಡ್ಯೂರಪ್ನೋ... ಚುಡಾಯಿಸ್ತೀರಿ. ಅವರೇನು ಸುಖಾಸುಮ್ನೆ ಬೆಳ್ಳಿ ತಟ್ಟೆ... ಉಣ್ಣಲಿಲ್ಲ, ಸಾವಯವ ಕೃಷಿ ಮಾಡಿದರೆ ಹಿಂಗೆ ಎಲ್ಲರ... ಬೆಳ್ಳಿ ತಟ್ಟೇಲಿ ಊಟ ಮಾಡಬಹುದು ಅನ್ನೋದ ಸಾರೊ... ಹಿಂಗ್ಮಾಡಿದ್ದಾರೆ ಕಣ್ರಿ. ನೀವು ಹಿಂಗೆ ಆಡ್ತಿದ್ದರೆ ಮುಂದಿ... ಸಲ ನೋಡ್ತಾ ಇರಿ, ಚಿನ್ನದ ತಟ್ಟೇಲಿ ಉಣ್ತಾರೆ! ಸಾವಯ... ಕೃಷಿ ಮಾಡಿ ಹಿಂಗೆ ಚಿನ್ನದ ತಟ್ಟೇಲೇ ಉಣ್ಣಬಹುದು... ಅನ್ನೋ ಗುಟ್ಟು ಬಯಲು ಮಾಡದಿದ್ರೆ ಕೇಳಿ....!

ಧರ್ಮ, ಯೋಗ ಇತ್ಯಾದಿಗಳ ಹೆಸರಲ್ಲಿ ಹಗಲು ದರೋಡೆ

ಶಿವಸುಂದರ್ ಅವರ 'ಚಾರ್ವಾಕ' ಅಂಕಣದಲ್ಲಿ ದಕ್ಷಿಣ ಕೊರಿಯಾ ದೇಶದ ಪೋಸ್ಕೋ ಕಂಪನಿ ಎಂತಹ ಅನಾಹುತಕಾರಿ ಕಂಪನಿ ಎನ್ನುವುದನ್ನು ಓದಿ ಬೆಕ್ಕಸ ಬೆರಗಾದೆ. ರಾಕ್ಷಸಿ ಸ್ವರೂಪದ ಪೋಸ್ಕೋಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರತ್ನಗಂಬಳಿ ಹಾಸಿದ್ದು ಜನ ವಿರೋಧಿ ನೀತಿಯಲ್ಲದೆ ಮತ್ತೇನು? ವಿಶೇಷ ಆರ್ಥಿಕ ವಲಯದ ನೆಪದಲ್ಲಿ (ಎಸ್‌ಇಜೆಡ್) ರಾಜ್ಯದ ರೈತರ ಲಕ್ಷಾಂತರ ಎಕರೆ ಭೂಮಿಯನ್ನು ಕಬಳಿಸುವ ಪ್ರಕ್ರಿಯೆ ಈಚೆಗೆ ಎಗ್ಗಿಲ್ಲದ ನಡೆಯುತ್ತಿದೆ. ಇಂತಹ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ, ಸರ್ಕಾರವೇ ಭಾಗಿಯಾಗಿದೆ.

ಪೋಸ್ಕೋ ಗದುಗಿನ ಆಸುಪಾಸು ನೆಲೆಯೂರಲು, ಬಳ್ಳಾರಿಯನ್ನು ಸಂಪೂರ್ಣ ಗೆಬರಿ ಹಾಳು ಮಾಡಿರುವ ಗಣಿಗಳ್ಳ ರೆಡ್ಡಿಗಳ ಕೈವಾಡವಿರಬಹುದು. ವಿನಾಶಕಾರಿ ಪೋಸ್ಕೋವನ್ನು ಹಿಮ್ಮೆಟ್ಟಿಸಲು ಹಳ್ಳಿಗುಡಿ, ಹಳ್ಳಿಕೇರಿ, ಲಕ್ಕುಂಡಿ ಜನತೆ ಎಚ್ಚೆತ್ತುಕೊಳ್ಳಬೇಕಿದೆ. ಒಳಗೊಳಗೆ ರೈತರನ್ನು ಒಕ್ಕಲೆಬ್ಬಿಸಲು ಯತ್ನಿಸುತ್ತಿರುವ ಕೆ.ಐ.ಎ.ಡಿ.ಬಿ. ಹಾಗೂ ರಾಜ್ಯ ಸರ್ಕಾರದ ಹೇಸಿಗೆತನವನ್ನು ಬಯಲು ಮಾಡಿರುವ ಶಿವಸುಂದರ್ ಸರ್‌ಗೆ ಧನ್ಯವಾದಗಳು.

- ಬಸವರಾಜ ಹಳ್ಳಿ, ಹಸಮಕಲ್ (ಸಿಂಧನೂರು)

'ಗೌರಿ ಲಂಕೇಶ್' ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಸೂಪರ್ ಸ್ಟಾರ್ ರಜನಿಕಾಂತ್ ಅವರ ಕುಟುಂಬದ ವಿವಿಧ ಮಜಲನ್ನು ಓದಿದೆ. ಅವರ ಮನೆಗೆ ಹೋದ ಅವರ ಸಂಬಂಧಿಕ ಅವರ ಮನೆಕೆಲಸದಾಕೆಯನ್ನು ಮದುವೆಯಾಗಿದ್ದು ಬಹಳ ವಿಚಿತ್ರವಾಗಿ ಚಲನಚಿತ್ರದ ಕತೆಯಂತೆ ಭಾಸವಾಯಿತು.

ಅಷ್ಟೇ ಅಲ್ಲ, ರಜನಿಕಾಂತ್ ಅಷ್ಟೊಂದು ಖ್ಯಾತ ನಟರಾದರೂ ಅವರ ಸಹೋದರ ಇವತ್ತಿಗೂ ಗ್ಯಾಂಗ್‌ಮ್ಯಾನ್ ಹುದ್ದೆ ಮುಂದುವರೆಸಿದ್ದು, ಅವರ ಸಹೋದರಿಯ ಪುತ್ರ ವರ್ಕ್‌ಶಾಪ್ ನಡೆಸುತ್ತಿರುವುದು ಅಚ್ಚರಿ ಮೂಡಿಸಿತು. ಯಾರಿಗೂ ಗೊತ್ತಿರದಿದ್ದ ಇಂತಹ ವಿಷಯಗಳನ್ನು ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

-ಕಿರಣ್ ಸಬ್ಬಳ್ಳಿ, ಈ ಮೇಲ್ ಮೂಲಕ

ಕಲಾವಿದ ದಿನೇಶ್ ಕುಕ್ಕುಜಡ್ಕರ ಕಾರ್ಟೂನ್ -ಮಂಜುನಾಥನ ಎದುರು ಎರಡು ದುರ್'ನಾಥ'ಗಳು ಚೆನ್ನಾಗಿತ್ತು.

ಅದೇ ರೀತಿ ಗೌರಿ ಲಂಕೇಶರ ಉಪ್ಪಿಟ್ಟಾಯಣ ಕೂಡ ಘಮಘಮ.

- ರವಿ ಶಂಕರ್ ಪ್ರಸಾದ್, ಈ ಮೇಲ್ ಮೂಲಕ

ಕಳೆದ ವಾರದ ಸಂಚಿಕೆಯಲ್ಲಿ (ಜುಲೈ 6, 2011) ಪ್ರಕಟಗೊಂಡ 'ಯಜುರ್ ಮಂದಿರದ ರಹಸ್ಯ!' ಮತ್ತು 'ಧಾರ್ಮಿಕ ದಂಧೆಕೋರರು' ಲೇಖನಗಳು ಸಾಯಿಬಾಬಾ, ರವಿಶಂಕರ್, ರಾಮದೇವ್, ಅಪ್ಪಿಕೋ ಅಮ್ಮ ಎಂಬ ಕಾವಿ-ಬಿಳಿ ಬಟ್ಟೆ ಧರಿಸಿರುವ ಚೋರರ ಅಸಲಿ ಮುಖವನ್ನು ಪರಿಚಯಿಸಿತು.

ವಾಸ್ತವವಾಗಿ ಧರ್ಮ, ಯೋಗ ಇತ್ಯಾದಿಗಳ ಹೆಸರಲ್ಲಿ ಇವರೆಲ್ಲ ನಡೆಸುವುದು ಹಗಲು ದರೋಡೆಯನ್ನು ಎಂಬುದು ಈಗ ಸ್ಪಷ್ಟವಾಗಿದೆ. ಇಲ್ಲವೆಂದರೆ ಸಾಯಿ ಬಾಬಾನ ಬೆಡ್‌ರೂಮಿನಲ್ಲಿ ಅಷ್ಟೊಂದು ಹಣ, ಚಿನ್ನ, ಒಡವೆಗಳು ಏನು ಮಾಡುತ್ತಿದ್ದವು? ಸಾಯಿಬಾಬಾ ಸತ್ತ ಕೆಲ ದಿನಗಳ ನಂತರ ಆತನ ಟ್ರಸ್ಟಿನ ಸದಸ್ಯರು ಎಲ್ಲ ಹಣಕ್ಕೆ ಮತ್ತು ಆಸ್ತಿಗೆ ಲೆಕ್ಕ ಪತ್ರಗಳಿವೆ ಎಂದಿದ್ದರಲ್ಲವೇ?


ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಹಾಗಿದ್ದರೆ 36 ಕೋಟಿಗೂ ಹೆಚ್ಚಿನ ಹಣ, ಬಂಗಾರ ಬಂದಿದ್ದು ಎಲ್ಲಿಂದ? ಅದು ಯಾರದ್ದು? ಭ್ರಷ್ಟ ರಾಜಕಾರಣಿಗಳು ತಮ್ಮ ಕಪ್ಪು ಹಣವನ್ನು ಸಾಯಿ ಬಾಬಾನ ಹತ್ತಿರ ಇಡುತ್ತಿದ್ದರೆ? ಅಂದರೆ ಈ ದೇಶದ ಕಪ್ಪು ಹಣ ವಿದೇಶಿ ಬ್ಯಾಂಕುಗಳಲ್ಲಿ ಅಲ್ಲದೆ ಸಾಯಿ ಬಾಬಾ ಮತ್ತು ಆತನಂತಹ ಇತರೆ ಢೋಂಗಿ ಬಾಬಾಗಳ ಆಶ್ರಮ, ಮಠ, ಮಂದಿರಗಳಲ್ಲೂ ಇರಬಹುದಲ್ಲವೆ?

ಈ ಕಾರಣಕ್ಕೆ ವಿದೇಶದಿಂದ ಕಪ್ಪು ಹಣ ವಾಪಸ್ ತರುವ ಮೊದಲು ನಮ್ಮ ಭಾರತದಲ್ಲೇ ಆಶ್ರಮ, ಮಠ, ಮಂದಿರ, ಇತ್ಯಾದಿಗಳಲ್ಲಿ ಇಟ್ಟಿರಬಹುದಾದ ಕಪ್ಪು ಹಣವನ್ನು ಮೊದಲು ವಾಪಸ್ ಪಡೆಯಬೇಕಲ್ಲವೆ? ಅಂದರೆ ಅಂಥ ಜಾಗಗಳ ಮೇಲೆ ರೇಡ್ ಮಾಡಬೇಕಲ್ಲವೆ? ಬೇರೆ ಯಾವ್ಯಾವುದೋ ವಿಷಯಗಳಲ್ಲಿ ಅವಕಾಶ ಸಿಕ್ಕಾಗಲೆಲ್ಲ ತಮ್ಮ ಮೂಗು ತೂರಿಸುವ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥರು ಈ ಬಗ್ಗೆಯಾದರೂ ನಿಜವಾದ ಕಾಳಜಿ ವಹಿಸಿ ಮೊದಲು ನಮ್ಮ ದೇಶದಲ್ಲಿರುವ ಧಾರ್ಮಿಕ ಸಂಸ್ಥೆಗಳ ಮೇಲೆ ರೇಡು ಮಾಡಬೇಕೆಂದು ಒತ್ತಾಯಿಸುವಂತಾಗಲಿ. ಆದರೆ ಅದಕ್ಕೂ ಮುನ್ನ ಅವರೇ ತಮ್ಮ ಮಠದ ಆದಾಯ, ಆಸ್ತಿ ಇತ್ಯಾದಿಗಳನ್ನು ಬಹಿರಂಗಪಡಿಸಲಿ!!

- ಭಾರತೀಯ, ಇ-ಮೇಲ್ ಮೂಲಕ

ಲಂಕೇಶ್ ಪ್ರಕಾಶನ ಪ್ರಕಟಿಸಿರುವ, ಎ.ರೇವತಿ ಬರೆದಿರುವ 'ಬದುಕು ಬಯಲು - ಹಿಜ್ರಾ ಒಬ್ಬಳ ಆತ್ಮಕತೆ' ಪುಸ್ತಕವನ್ನು ಓದಿದಾಗ ನನಗೆ ತುಂಬಾ ಬೇಸರ, ನೋವು ಉಂಟಾಯಿತು. ಅದಕ್ಕಿಂತ ಹೆಚ್ಚಾಗಿ ಈ ಪುಸ್ತಕದಿಂದಾಗಿ ನನ್ನಲ್ಲಿ ಹಲವಾರು ಬದಲಾವಣೆಗಳಾದವು. ಈ ಪುಸ್ತಕವನ್ನು ಓದುವ ಮುನ್ನ ನನ್ನ ಪ್ರೆಸ್‌ಗೆ ಹಿಜ್ರಾಗಳು ಬಂದಾಗ ನನಗೆ ಅವರ ಮೇಲೆ ಕೋಪ ಬರುತ್ತಿತ್ತು. ಅವರನ್ನು ಕೀಳಾಗಿ ನೋಡುತ್ತಿದ್ದ ನಾನು ಅವರತ್ತ ಒಂದಷ್ಟು ಹಣ ಬಿಸಾಡಿ ಅವರು ತೊಲಗಿದರೆ ಸಾಕು ಎಂದು ಭಾವಿಸುತ್ತಿದ್ದೆ. ಆದರೆ ರೇವತಿಯ ಆತ್ಮಕತೆ ಓದಿದನಂತರ ಹಿಜ್ರಾಗಳ ಬದುಕಿನ ಕಷ್ಟ, ನೋವುಗಳ ಅರಿವಾಯಿತು. ಅರೆ, ಅವರೂ ನಮ್ಮಂತೆ ಮನುಷ್ಯರಲ್ಲವೆ ಅನ್ನಿಸಿತು.



ಇನ್ನು ಮುಂದೆ ನನ್ನ ಪ್ರೆಸ್‌ಗೆ ಹಿಜ್ರಾಗಳು ಬಂದರೆ ಅವರನ್ನು ಮಾನವೀಯವಾಗಿ ನೋಡುತ್ತೇನೆ. ಇದು ರೇವತಿ ಮತ್ತು ಲಂಕೇಶ್ ಪ್ರಕಾಶನ ಮೂಡಿಸಿರುವ ಸಾಮಾಜಿಕ ಬದಲಾವಣೆ.

- ಸಂತೋಷ್, ಅಜ್ಜಂಪುರ

ರಾಜೇಂದ್ರ ಸಿಂಗ್ ಬಾಬು 'ಬಂಡಲ್ ಬಾಬು' ಆಗಿ ಪರಿವರ್ತನೆಗೊಂಡು ಬಹಳ ದಿನಗಳಾಗಿವೆ. ಒಂದಾನೊಂದು ಕಾಲದಲ್ಲಿ ನಮ್ಮ ಕನ್ನಡ ಚಿತ್ರರಂಗ ಕಂಡ ಉತ್ತಮ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಬಾಬು ಕಳೆದ ಕೆಲ ವರ್ಷಗಳಿಂದ ಸಿನಿಮಾ ಮಾಡುವ ಬದಲಾಗಿ ಬಂಡಲ್ ಬಿಗಿದದ್ದೇ ಹೆಚ್ಚು. ಸಿನಿಮಾ ನಿರ್ಮಿಸಲು ಸಾಲ ನೀಡಿದ್ದ ಬ್ಯಾಂಕಿಗೆ ಮೋಸ, ಪರಭಾಷಾ ಸಿನಿಮಾಗಳ ವಿರುದ್ಧ ಅಸಂಬದ್ಧ ಪ್ರಲಾಪ, ಇವುಗಳೇ ಬಂಡಲ್ ಬಾಬುವಿನ ಇತ್ತೀಚಿನ ಬಂಡವಾಳವಾಗಿವೆ.


ಇಂತಹ ಬಂಡಲ್ ಬಾಬು ಇವತ್ತು ಬೂಸಿ ರೇಣುಕಾಚಾರಿಯಿಂದ ಹಣ ಪಡೆದು ಪರಮಭ್ರಷ್ಟ ಯಡ್ಡಿಯನ್ನು ಕುರಿತು ಸಿನಿಮಾ ನಿರ್ದೇಶಿಸಲು ಹೊರಟಿರುವುದು ಆತನ ಬಂಡಲ್‌ತನಕ್ಕೆ ಒಂದು ಹೊಸ ಸಾಕ್ಷಿ ಅಷ್ಟೇ.

- ಸುಮಾ, ಇ ಮೇಲ್ ಮೂಲಕ

ಹಿರಿಯೂರು ರಾಘವೇಂದ್ರ ಬಿಟ್ಟ ಆತ್ಮಹತ್ಯಾ ಬಾಣ!


ಒಂದು ವರ್ಷದ ಹಿಂದೆ ಹಿರಿಯ ...ರ್ದೇಶಕ ಸಾಯಿಪ್ರಕಾಶ್ ಊರಿಗೆಲ್ಲಾ ...ದಲೇ ಮೆಸೇಜು ಮಾಡಿದ ನಂತರವೇ ...ತ್ಮಹತ್ಯೆ' ಎಂಬ 'ಸಿನೆಮಾ' ತೋರಿಸಿದ್ದರು! ...ಗ ಹಿರಿಯ ಸಿನಿಮಾ ಪತ್ರಕರ್ತ, ಕಿರುತೆರೆ ...ರ್ದೇಶಕ ಹಿರಿಯೂರು ರಾಘವೇಂದ್ರ ...ಡ ಸಾಯಿಪ್ರಕಾಶ್‌ರಂತೆ ದಿಢೀರನೆ ...ತ್ಮಹತ್ಯೆ' ಸುದ್ದಿ ಮಾಡಿದ್ದಾರೆ.

ಕನ್ನಡ ಚಿತ್ರರಂಗ ಮತ್ತು ಕಿರುತೆರೆಯನ್ನು ...ಶಕಗಳಿಂದ ಹತ್ತಿರದಿಂದ ಕಂಡಿರುವ, ...ುತೆರೆ ಅಸೋಸಿಯೇಷನ್‌ನ ಹಲವಾರು ...ದ್ದೆಗಳಲ್ಲಿ ಸಕ್ರಿಯರಾಗಿರುವ, ಅನೇಕ ...ಮಾ ಪತ್ರಿಕೆಗಳಲ್ಲಿ ವರದಿಗಾರರಾಗಿ ಸೇವೆ ...ಸಿರುವ, ಸಿನಿಮಾ ಅಂಕಣಕಾರರಾಗಿರುವ, ...ಗ ಧಾರಾವಾಹಿಯೊಂದನ್ನು ನಿರ್ದೇಶಿಸುತ್ತಿರುವ ...ರಿಯೂರು ರಾಘವೇಂದ್ರ ಹೀಗೆ 'ಆತ್ಮಹತ್ಯೆ'ಗೆ ಕೈಹಾಕಿದ್ದು ...ದು ಮೂರನೆ ಬಾರಿ.



ಕಿರುತೆರೆಯ ನಂಟು

1980ರ ದಶಕದಲ್ಲಿ ದೂರದರ್ಶನದಲ್ಲಿ ಹಿಂದಿ ...ರ್ಯಕ್ರಮಗಳೇ ಹೆಚ್ಚಾಗಿ ಪ್ರಸಾರವಾಗುತ್ತಿದ್ದ ...ದರ್ಭದಲ್ಲಿ ಕನ್ನಡ ಕಾರ್ಯಕ್ರಮಗಳಿಗೆ ಹೆಚ್ಚು ...ಲಾವಕಾಶ ಕೇಳಿ ಹೋರಾಟ ಮಾಡಿದ್ದ ...ಘವೇಂದ್ರ ಜೈಲಿಗೆ ಹೋಗಿಬಂದಿದ್ದರು. ನಂತರ ...ೀವಜಗತ್ತು' ಎಂಬ ...ಲಿಸೀರಿಯಲ್‌ನಿಂದ ಆರಂಭಿಸಿ ...ದಷ್ಟು ಧಾರಾವಾಹಿಂಗಳಿಗೆ ...ಚಿಕೆ ನಿರ್ದೇಶಕರಾಗಿ ದುಡಿದರು. ...ಲಕೃಷ್ಣ ಕಾಕತ್ಕರ್ ಅವರ ...ಧಾನ ನಿರ್ದೇಶನದ 'ನಿಶಾಚರ' ...ರ್ಯಕ್ರಮದ ಎಪಿಸೋಡ್ ...ರೆಕ್ಟರ್ ಆಗಿದ್ದರು. ಸದ್ಯ ...ದಯ ವಾಹಿನಿಯಲ್ಲಿ ...ಸಾರವಾಗುತ್ತಿರುವ 'ಕಾರ್ತಿಕ ...ಪ' ಎಂಬ ಧಾರಾವಾಹಿಯನ್ನು ...ರ್ದೇಶಿಸಿ, ಸ್ವತಃ ನಿರ್ಮಾಣ ...ಲುದಾರರೂ ಆಗಿದ್ದಾರೆ.




...ಇಷ್ಟು ವರ್ಷದಿಂದ ಇವರು ...ಲವಾರು ವಲಯಗಳಲ್ಲಿ ...ಯರಾಗಿದ್ದರೂ ರಾಘವೇಂದ್ರರ ...ಯಕ್ತಿಕ ಮತ್ತು ವೃತ್ತಿ ಬದುಕು ...ನ್ನೂ ದಡ ಸೇರಿಲ್ಲ, ಇದೆಲ್ಲದರಿಂದ ಬೇಸತ್ತ ರಾಘವೇಂದ್ರ ಮೊನ್ನೆ ಸಿನಿಮಾ ಪಿಆರ್‌ಓ ಕಲ್ಲೇಶ್ ಅವರನ್ನು ಸಂಪರ್ಕಿಸಿ ತಾವು ಖಾಸಗಿ ಪತ್ರಿಕಾಗೋಷ್ಠಿಯೊಂದನ್ನು ನಡೆಸಬೇಕು ಎಂದು ವಿನಂತಿಸಿದರು. ರಾಘವೇಂದ್ರ ಅವರ ಆಶಯದಂತೆ 'ಶನಿವಾರ ಮಧ್ಯಾಹ್ನ 3 ಗಂಟೆಗೆ ಗ್ರೀನ್‌ಹೌಸ್‌ನಲ್ಲಿ ಕಿರುತೆರೆ ನಿರ್ದೇಶಕ ಹಿರಿಯೂರು ರಾಘವೇಂದ್ರ ಅವರು ಕಿರುತೆರೆಯ ಹಲವಾರು ಅಪ್ರಿಯ ಸತ್ಯಗಳನ್ನು ವಿವರಿಸಲು ಪತ್ರಿಕಾಗೋಷ್ಠಿ ಏರ್ಪಡಿಸಿದ್ದಾರೆ' ಎಂಬ ಮೆಸೇಜುಗಳನ್ನು ಎಲ್ಲಾ ಸಿನಿಮಾ ಪತ್ರಕರ್ತರಿಗೆ ರವಾನಿಸಲಾಯಿತು.

ಆಹ್ವಾನವನ್ನು ಸ್ವೀಕರಿಸಿದ ಪತ್ರಕರ್ತರು ಅಂದು ಗ್ರೀನ್‌ಹೌಸ್‌ನಲ್ಲಿ ಜಮಾಯಿಸಿದರು. ಪತ್ರಿಕಾಗೋಷ್ಠಿ ಆರಂಭವಾಗುವ ಮುನ್ನ ಟಿವಿ ನೈನ್‌ಗೆ ರಾಘವೇಂದ್ರ ಸಂದರ್ಶನ ನೀಡುತ್ತಿದ್ದರು. ಕ್ಯಾಮೆರಾ ಮುಂದೆ ಮಾತಾಡುತ್ತಾ ಕುಳಿತಿದ್ದವರು ಹಾಗೇ ಕುರ್ಚಿಯಲ್ಲೇ ಕುಸಿದರು. ಅಲ್ಲಿದ್ದವರೆಲ್ಲಾ 'ಎಲ್ಲೋ ಬಿಪಿ ಅಥವಾ ಶುಗರ್‌ನಲ್ಲಿ ವ್ಯತ್ಯಾಸವಾಗಿರಬಹುದು' ಎಂದು ಅಂದಾಜಿಸಿ ರಾಘವೇಂದ್ರರಿಗೆ ಒಂದಿಷ್ಟು ನೀರು ಕುಡಿಸಿ ಅಲ್ಲೇ ಟೇಬಲ್ಲಿನ ಮೇಲೆ ಒರಗಿಸಿದರು. ಎಷ್ಟು ಹೊತ್ತಾದರೂ ಅವರು ಪ್ರಜ್ಞಾಶೂನ್ಯರಾಗಿ ಬಿದ್ದಿದ್ದರಿಂದ ಅನುಮಾನಗೊಂಡ ಒಂದಿಬ್ಬರು ಪತ್ರಕರ್ತರು ಅವರ ಬಳಿಯಿದ್ದ ಕವರ್ ಅನ್ನು ತೆರೆದು ನೋಡಿದಾಗ ಸಿಕ್ಕಿದ್ದು ರಾಘವೇಂದ್ರ ಬರೆದಿದ್ದ ಡೆತ್ ನೋಟ್!

'ಅಂತಿಮ ನುಡಿ' ಎಂದು ಹೆಡ್ಡಿಂಗ್ ಹೊಂದಿದ್ದ ಆ ಪತ್ರದಲ್ಲಿ 'ನನ್ನ ಸಾವಿಗೆ ನಾನೇ ಕಾರಣ. ನನ್ನ ದೇಹವನ್ನು ಸುಟ್ಟು ಯಾವುದಾದರೂ ಗಿಡಕ್ಕೆ ಹಾಕಿ. ನನ್ನ ಕಣ್ಣುಗಳನ್ನು ಆದಷ್ಟು ಬೇಗನೆ ದಾನ ಮಾಡಿ' ಎಂದು ಅವರು ಬರೆದಿದ್ದರು. ತಕ್ಷಣ ಜಾಗೃತರಾದ ಪಿಆರ್‌ಓ ನಾಗೇಂದ್ರ ಮತ್ತು ಪತ್ರಕರ್ತರು ರಾಘವೇಂದ್ರರನ್ನು ರೇಸ್‌ಕೋರ್ಸ್ ಬಳಿಯ ಮಲ್ಲಿಗೆ ನರ್ಸಿಂಗ್ ಹೋಂಗೆ ದಾಖಲು ಮಾಡಿದರು. ಎಲ್ಲರ ಸಮಯ ಪ್ರಜ್ಞೆ ನಿಜಕ್ಕೂ ವರ್ಕ್ ಔಟ್ ಆಗಿದ್ದರಿಂದ ಅದೃಷ್ಟವಶಾತ್ ರಾಘವೇಂದ್ರ ಸಾವಿನ ದವಡೆಯಿಂದ ಪಾರಾದರು.

ಹೆಂಡತಿಯ ಕಾಟ ಹೆಚ್ಚಾಗಿತ್ತಾ?

ಇದೆಲ್ಲ ನಡೆದ ಎಷ್ಟೋ ಹೊತ್ತಿನ ನಂತರ ನರ್ಸಿಂಗ್ ಹೋಂಗೆ ಆಗಮಿಸಿದ ರಾಘವೇಂದ್ರ ಅವರ ಪತ್ನಿ ಸುಧಾ ಮತ್ತು ಮಗ ಚೇತನ್ ಅಷ್ಟೇನೂ ವಿಚಲಿತರಾದವರಂತೆ ಕಂಡುಬರಲಿಲ್ಲ. ಆಸ್ಪತ್ರೆಯ ಐಸಿಯೂನಲ್ಲಿ ಮಲಗಿದ್ದ ಪತಿಯನ್ನು ದಾಕ್ಷಿಣ್ಯಕ್ಕೂ ಹೋಗಿ ನೋಡದ ಸುಧಾ ಟಿವಿ ಚಾನೆಲ್ಲುಗಳ ಮುಂದೆ ನಿಂತು "ನಾವು 'ಕಾರ್ತಿಕ ದೀಪ' ಧಾರಾವಾಹಿ ನಿರ್ಮಿಸಿ ಸುಮಾರು ತೊಂಭತ್ತು ಲಕ್ಷ



ರೂಪಾಯಿ ನಷ್ಟ ಅನುಭವಿಸಿದ್ದೇವೆ. ನಮಗೆ ಲಾಸ್ ಆಗಿರೋದರಿಂದ ಈ ಮನುಷ್ಯ ಸೂಸೈಡ್ ಅಟೆಂಪ್ಟ್ ಮಾಡಿದ್ದಾರೆ. ಇದೆಲ್ಲದಕ್ಕೆ ನಾನು ತಲೆ ಕೆಡಿಸಿಕೊಳ್ಳಲ್ಲ. ಮತ್ತೆ ಧಾರಾವಾಹಿ ಮಾಡಿ ಹಣ ಸಂಪಾದನೆ ಮಾಡ್ತೀನಿ" ಎಂದು ಹೇಳಿದ್ದಲ್ಲದೆ ತನ್ನ ಗಂಡನ ಬಗ್ಗೆಯೇ ಬೇಕಾಬಿಟ್ಟಿ ಮಾತಾಡಿದರು.

ಈ ಸುಧಾ ಬಗ್ಗೆ ಇಂಡಸ್ಟ್ರಿಯಲ್ಲಿ ಅಂತಾ ಒಳ್ಳೇ ಅಭಿಪ್ರಾಯವೇನೂ ಇಲ್ಲ. ಸೀರಿಯಲ್ ನಟಿಯರನ್ನು ಬಳಸಿಕೊಂಡು ಭೀಕರ ದಂಧೆ ನಡೆಸುತ್ತಿರುವ ವೀಣಾ ಕೃಷ್ಣ ಮತ್ತು ವೀಣಾ ರಾವ್ ಎಂಬ ನಟೋರಿಯಸ್ ಹೆಂಗಸರ ನಂಟು ಈ ಸುಧಾಳಿಗೆ ಇದೆ. ಇಂತಹ ತನ್ನ ಹೆಂಡತಿಯ ಸಂಬಂಧ-ಸಂಪರ್ಕಗಳು ಸರಿಯಿಲ್ಲವೆಂಬುದೂ ರಾಘವೇಂದ್ರರ ದೊಡ್ಡ ಕೊರಗು. ಈ ಹಿಂದೆ ಸ್ವತಃ ರಾಘವೇಂದ್ರ ಅವರೇ ಅನೇಕರ ಬಳಿ ತನ್ನ ಪತ್ನಿ ನೀಡುತ್ತಿದ್ದ ಕಿರುಕುಳ ಮತ್ತು ಆಕೆಯ ಹಳಿ ತಪ್ಪಿದ ದಾರಿಯ ಬಗ್ಗೆ ಹೇಳಿಕೊಂಡಿದ್ದಿದೆ.

ಮೂರನೇ ಪ್ರಯತ್ನ!

ರಾಘವೇಂದ್ರ ಆತ್ಮಹತ್ಯೆಗೆ ಮುಂದಾಗಿದ್ದು ಇದೇ ಮೊದಲೇನಲ್ಲ. ಈ ಹಿಂದೆ ಅವರು 'ನನ್ನ ಪತ್ನಿ ನನಗೆ ಕೈಕೊಟ್ಟಿದ್ದಾಳೆ' ಎಂದು ಆರೋಪಿಸಿ ಆತ್ಮಹತ್ಯೆಯ ಬಾಣ ಪ್ರಯೋಗಿಸಿದ್ದರು. ಏಳೆಂಟು ತಿಂಗಳ ಹಿಂದೆ ಉದಯ ಟಿವಿಯವರು 'ಕಾರ್ತಿಕ ದೀಪ'ಕ್ಕೆ ಸ್ಲಾಟ್ ಕೊಡದೇ ಇದ್ದಾಗ "ಉದಯ ವಾಹಿನಿಯವರು ಕನ್ನಡಿಗರಿಗೆ ಅನ್ಯಾಯವೆಸಗುತ್ತಿದ್ದಾರೆ. ಸ್ವಮೇಕ್ ಧಾರಾವಾಹಿಗಳಿಗೆ ಇವರು ಅವಕಾಶ ಕೊಡುತ್ತಿಲ್ಲ, ಸ್ಲಾಟ್ ಕೊಡುವುದಾಗಿ ನನ್ನಿಂದ ಎರಡು ಲಕ್ಷ ರೂಪಾಯಿ ಪಡೆದು ಈಗ ಕೊಡದೇ ಆಟವಾಡಿಸುತ್ತಿದ್ದಾರೆ. ನನ್ನ ಧಾರಾವಾಹಿಗೆ ಸಮಯಾವಕಾಶ ಕೊಡದಿದ್ದರೆ ಉದಯ ಟಿವಿ ಕಚೇರಿ ಮುಂದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಎಲ್ಲ ಮಾಧ್ಯಮದವರಿಗೆ ಪತ್ರ ರವಾನಿಸಿದ್ದರು.


ರಾಘವೇಂದ್ರರ ಈ ನಿಲುವಿಗೆ ಹೆದರಿದ ಉದಯ ಟಿವಿಯವರು ಹೌಸ್ ಪ್ರೊಡಕ್ಷನ್‌ನಿಂದ ಅವಕಾಶ ನಿರಾಕರಿಸಿ ಕಮರ್ಷಿಯಲ್ ಸ್ಲಾಟ್ ಕೊಟ್ಟಿದ್ದರು. ಅದೂ ಸಂಜೆ 4.30 ರಿಂದ 5 ರತನಕ. ಇದು ಪ್ರೈಮ್ ಟೈಂ ಆಗದ ಕಾರಣ ಆ ಸಮಯದಲ್ಲಿ ಯಾವ ಸೀರಿಯಲ್ಲಿಗೂ ಟಿಆರ್‌ಪಿ ಸಿಗುವುದಿಲ್ಲ. ಪ್ರತಿಫಲವಾಗಿ ಪ್ರಾಯೋಜಕರೂ ಕೂಡಾ ಮುಂದೆ ಬರುವುದಿಲ್ಲ, ರಾಘವೇಂದ್ರರಿಗೆ ಆಗಿದ್ದೂ ಇದೇ. ಸೀರಿಯಲ್ಲಿಗೆ ಸ್ಲಾಟ್ ಏನೋ ಸಿಕ್ಕಿತು ಆದರೆ ಜಾಹಿರಾತುಗಳ ದುಡ್ಡು ಕೈಗೆಟುಕಲಿಲ್ಲ.

ರಾಘವೇಂದ್ರ ಪತ್ರಕರ್ತ ಎಂಬ ಕಾರಣಕ್ಕೆ ಕಲಾವಿದರು ಕಮ್ಮಿ ಸಂಭಾವನೆಗೆ ನಟಿಸಲು ಒಪ್ಪಿದ್ದರು. ಆದರೆ ಆ ದುಡ್ಡನ್ನೂ ರಾಘವೇಂದ್ರರ ಪತ್ನಿ ಕಂ ಸೀರಿಯಲ್ಲಿನ ಪ್ರೊಡಕ್ಷನ್ ಕಂಟ್ರೋಲರ್ ಸುಧಾ ಸಂದಾಯ ಮಾಡಲಿಲ್ಲ. ಈ ಧಾರಾವಾಹಿಗೆ ಸಂಭಾಷಣೆ ಬರೆದಿರುವ ಶರಣು ಹುಲ್ಲೂರ್‌ಗೇ ಇನ್ನೂ ಒಂದು ಲಕ್ಷದ ಬಾಕಿ ಇದೆ.

ಅದೆಲ್ಲ ಏನೇ ಇರಲಿ, ರಾಘವೇಂದ್ರರಂಥ ಕ್ರಿಯಾಶೀಲ ವ್ಯಕ್ತಿ ಸದ್ಯ ಆಪತ್ತಿನಿಂದ ಪಾರಾಗಿದ್ದಾರೆ ಎಂಬುದು ಸಮಾಧಾನದ ವಿಚಾರ. ಇನ್ನು ಮುಂದೆ ರಾಘವೇಂದ್ರ ಅವರು ಇಂಥ ಕೀಳು ಸಾಹಸಕ್ಕೆ ಮುಂದಾಗದಿರಲಿ...

• ಅರುಣ್

ಪನ್ನಗನೊಂದಿಗೆ ಬಂದ ಭರಣ



ಅನೇಕ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿರುವ ...ರ್ದೇಶಕ ನಾಗಾಭರಣ ಅವರ ಪುತ್ರ ಪನ್ನಗ ನಾಗಾಭರಣ ಒಂದು ಸಿನಿಮಾ ...ರ್ದೇಶಿಸಲು ಮೈಕೊಡವಿ ನಿಂತಿದ್ದಾರೆ. ಇವರು ನಿರ್ದೇಶಿಸಲಿರುವ ಚಿತ್ರದ ...ಸರು 'ಮ್ಯಾರೇಜ್ ಇಂಪಾಸಿಬಲ್'. ಶಿವರಾಜ್‌ಕುಮಾರ್ ಈ ಚಿತ್ರದ ...ಯಕರಾದರೆ ರಾಧಿಕಾ ಪಂಡಿತ್ ನಾಯಕಿ. ಇವರಿಬ್ಬರ ಜೋಡಿ ಬೆಳ್ಳಿ ...ರದೆಯ ಮೇಲೆ ಇದೇ ಮೊದಲ ಬಾರಿಗೆ ಕಾಣಿಸಿಕೊಳ್ಳಲಿದೆ.

ಒಬ್ಬ ತಂದೆಗೆ ತನ್ನ ಮಗ ನಿರ್ದೇಶಕನಾಗುತ್ತಿರುವುದು ಒಂದು ರೀತಿಯಲ್ಲಿ ...ಹಿ ಮತ್ತು ಕಹಿ ಅನುಭವ. ಸಿಹಿ ಯಾಕೆಂದರೆ ತನ್ನ ಮಗ ತನ್ನಂತೆ ...ರ್ದೇಶಕನಾಗುವುದು ಯಾವ ಅಪ್ಪನಿಗೆ ತಾನೇ ಸಂತಸ ಕೊಡುವುದಿಲ್ಲ? ...ಹಿ ಯಾಕೆಂದರೆ ಮಗ ನಿರ್ದೇಶಕನಾಗಿ ಬಡ್ತಿ ಪಡೆಯುತ್ತಿದ್ದಾನೆ ಎಂದರೆ ...ಪ್ಪ ನಿಧಾನವಾಗಿ ನೇಪಥ್ಯಕ್ಕೆ ಸರಿಯಬೇಕೆಂಬುದರ ಸೂಚನೆ! ಅಂದರೆ ...ಾಗಾಭರಣ ತಮ್ಮ ವೃತ್ತಿಜೀವನದ ನಿವೃತ್ತಿಯ ಕಾಲಘಟ್ಟದಲ್ಲಿದ್ದಾರೆ ಎಂದು ...ರ್ಥೈಸಬೇಕಾಗುತ್ತದೆ.

ಹಾಗೆ ನೋಡಿದರೆ ಕಳೆದ ಹಲವು ವರ್ಷಗಳಿಂದ ನಾಗಾಭರಣ ಒಂದು ...ತಿಯಲ್ಲಿ ನಿವೃತ್ತಿಯ ಜೀವನವನ್ನು ಒಗ್ಗೂಡಿಸಿಕೊಂಡಿದ್ದಾರೆ. ಅವರು ಸಿನಿಮಾ ...ಕಾಡೆಮಿಯ ಅಧ್ಯಕ್ಷರಾದ ಮೇಲೆ ದಿನಕ್ಕೆರಡು ಸಮಾರಂಭಗಳಲ್ಲಿ ...ಗವಹಿಸುವುದು, ವಾರಕ್ಕೊಂದು ಸೆಮಿನಾರ್‌ನಲ್ಲಿ ಭಾಷಣ ಹೊಡೆಯುವುದು ...ಇಷ್ಟೇ ಅವರ ದಿನಚರಿಯಾಗಿದೆ. ನಾಗಾಭರಣ ನಿರ್ದೇಶನದ ಚಿತ್ರ ತೆರೆ ...ಣಾದೆ ಸುಮಾರು ಮೂರು ವರ್ಷಗಳೇ ಸಂದುಹೋಗಿದೆ. ಈ ಮಧ್ಯೆ ...ವರ ಹೊಸ ಚಿತ್ರ ಇಂದು ಸೆಟ್ಟೇರುತ್ತದೆ, ನಾಳೆ ಸೆಟ್ಟೇರುತ್ತದೆ ಎಂದು ...ನೇಕ ಬಾರಿ ಸುದ್ದಿಯಾಯಿತೇ ವಿನಃ ಯಾವ ಚಿತ್ರವೂ ಆರಂಭವಾಗಲೇ ...ಲ್ಲ!

ಈ ಹಿಂದೆ ನಾಗಾಭರಣ ನಿರ್ದೇಶಿಸಿದ್ದ 'ಜನುಮದ ಜೋಡಿ', 'ಮೈಸೂರು ...ಲ್ಲಿಗೆ', 'ಸಂತ ಶಿಶುನಾಳ ಷರೀಫ', 'ನಾಗಮಂಡಲ' ಮೊದಲಾದ ಚಿತ್ರಗಳು ...ಮರ್ಷಿಯಲ್ ಮತ್ತು ಕಲಾತ್ಮಕ ವಿಭಾಗಗಳಲ್ಲಿ ಮೆಚ್ಚುಗೆ ಪಡೆದಿದ್ದವು. ...ದರೂ ಭರಣ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಕೆಲಸವಿಲ್ಲದೆ 'ನಿರುದ್ಯೋಗಿ' ...ಗಿದ್ದಾರೆ ಎಂದರೆ ಆಶ್ಚರ್ಯವಾಗುತ್ತೆ.

ಒಂದು ಕಾಲದಲ್ಲಿ ಇವರು ಮುಟ್ಟಿದ ಪ್ರಾಜೆಕ್ಟ್‌ಗಳೆಲ್ಲವೂ ಚಿನ್ನದ ...ಟ್ಟೆ ಇಡುತ್ತಿದ್ದವು. ಆದರೀಗ ಭರಣ ಕೈಹಾಕಿದ ಯಾವುದೇ ಕೆಲಸ ಸುಗಮವಾಗಿ ಆರಂಭವಾಗುತ್ತಿಲ್ಲ, ಉದಾಹರಣೆಗೆ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದಲ್ಲಿ ಉಪೇಂದ್ರ ಮತ್ತು ವಿಷ್ಣುವರ್ಧನ್ ನಾಯಕರಾಗಿ ನಟಿಸಬೇಕಿದ್ದ ಒಂದು ಚಿತ್ರಕ್ಕಾಗಿ ಕನಿಷ್ಠವೆಂದರೂ ಎರಡು ವರ್ಷಗಳ ಕಾಲ ನಾಗಾಭರಣ ಕೆಲಸ ಮಾಡಿದ್ದರು. ಆದರೂ ಆ ಕಥೆ ರಾಕ್‌ಲೈನ್‌ಗೆ ಇಷ್ಟವಾಗದ ಕಾರಣ ಕೊನೇ ಕ್ಷಣದಲ್ಲಿ ಕೈಬಿಟ್ಟಿದ್ದರು. ಈಗ ವಿಷ್ಣುವರ್ಧನ್ ನಿಧನ ಹೊಂದಿರುವುದರಿಂದ ಈ ಪ್ರಾಜೆಕ್ಟ್ ಸೆಟ್ಟೇರುವ ಸಾಧ್ಯತೆಯೂ ಇಲ್ಲ.

ಅದಾದನಂತರ ಅಷ್ಟೇ ಆಸಕ್ತಿ ವಹಿಸಿ ನಾಗಾಭರಣ 'ಶಿವಪ್ಪನಾಯಕ' ಚಿತ್ರಕ್ಕಾಗಿಯೂ ಅಹೋರಾತ್ರಿ ದುಡಿದಿದ್ದರು. ಕುಮಾರ್ ಬಂಗಾರಪ್ಪ ನಿರ್ಮಿಸಿ, ನಾಯಕನಾಗಿ ನಟಿಸಬೇಕಾಗಿದ್ದ ಈ ಚಿತ್ರಕ್ಕೆ ಬಹುತೇಕ ತಯ್ಯಾರಿ ನಡೆದುಹೋಗಿತ್ತು. ಇನ್ನೇನು ಚಿತ್ರ ಮುಂದಿನ ವಾರ ಆರಂಭವಾಗಬೇಕು ಅನ್ನುವಷ್ಟರಲ್ಲಿ ಅದು ಕೂಡ ನಿಂತಿತು. ಈ ಚಿತ್ರದ ಪಾತ್ರಕ್ಕಾಗಿ ಕುಮಾರ್ ಬಂಗಾರಪ್ಪ ಭುಜದ ತನಕ ಬೆಳೆಸಿಕೊಂಡಿದ್ದ ಕೂದಲನ್ನು ಈಗ ಚೆನ್ನಾಗಿ ಕತ್ತರಿಸಿರುವುದರಿಂದ 'ಶಿವಪ್ಪನಾಯಕ' ಸೆಟ್ಟೇರುವ ಸಾಧ್ಯತೆ ಇಲ್ಲವೆಂದೇ ಹೇಳಬಹುದು. ಈ ಚಿತ್ರ ಯಾವ ಕಾರಣಕ್ಕಾಗಿ ನಿಂತುಹೋಯಿತೆಂದು ಹೇಳುವುದು ಕಷ್ಟವಾದರೂ ಒಂದು ಮೂಲದ ಪ್ರಕಾರ ಭರಣ ಸಿಕ್ಕಾಪಟ್ಟೆ ದೊಡ್ಡ ಮೊತ್ತದ ಸಂಭಾವನೆಯನ್ನು ಕೇಳಿದ್ದರೆಂದು ಗುಸುಗುಸು ಹಬ್ಬಿತ್ತು. ಅದೇನೇ ಇರಲಿ, ಭರಣ ಕನಸು ಕಂಡಿದ್ದ ಎರಡನೇ ಐತಿಹಾಸಿಕ ಚಿತ್ರ ಕೂಡ ಆರಂಭವಾಗುವ ಮೊದಲೇ ಮುಗ್ಗರಿಸಿತ್ತು.

ಈ ಎರಡು ಚಿತ್ರಗಳಿಗಿಂತ ಮೊದಲು ಭರಣ ನಿರ್ಮಾಪಕ ಕುಮಾರಸ್ವಾಮಿಗಾಗಿ ಕನ್ನಡ ಮತ್ತು ಹಿಂದಿ ಭಾಷೆಯಲ್ಲಿ ಒಂದು ಚಿತ್ರವನ್ನು ಮಾಡಲು ಸಕಲ ತಯ್ಯಾರಿ ಮಾಡಿದ್ದರು. ವ್ಯಾಸರಾಯ ಬಲ್ಲಾಳರ 'ಹೆಜ್ಜೆಗಳು' ಕಾದಂಬರಿಯನ್ನು ಚಿತ್ರ ಮಾಡಬೇಕೆಂಬುದು ಕುಮಾರಸ್ವಾಮಿಯ ಮಹತ್ವಾಕಾಂಕ್ಷೆಯಾಗಿತ್ತು. ಈ ಚಿತ್ರ ಕುರಿತೂ ಎರಡೆರಡು ಬಾರಿ ಇನ್ನೇನು ಆರಂಭವಾಗುತ್ತದೆ ಎಂಬ ಸುದ್ದಿಯಾಯಿತೇ ವಿನಃ ಅನಂತರ ಆ ಸುದ್ದಿ ಅಷ್ಟೇ ಬೇಗ ಠುಸ್ಸಾಯಿತು. ಇದೇ ಸಂದರ್ಭದಲ್ಲಿ ನಾಗಾಭರಣ ನಿರ್ದೇಶನದ 'ದಳವಾಯಿ ಮುದ್ದಣ್ಣ' ಚಿತ್ರ ಸೆಟ್ಟೇರುತ್ತದೆಂದು ಕನಿಷ್ಠವೆಂದರೂ ನಾಲ್ಕೈದು ಬಾರಿ ಭಾರೀ ಸುದ್ದಿಯಾಗಿತ್ತು. ಆದರೆ ಯಾಕೋ ಏನೋ 'ಮುದ್ದಣ್ಣ...'ನೂ ಭರಣರಿಗೆ ಒಲಿಯಲಿಲ್ಲ! ಈ ಮಧ್ಯೆ ಭರಣ ನಿರ್ದೇಶಿಸಿದ್ದ ಶಿವರಾಜ್‌ಕುಮಾರ್ ಅಭಿನಯದ 'ಗೆಳೆಯ-ಗೆಳೆಯ' ಚಿತ್ರ ಕೂಡಾ ಅರ್ಧಕ್ಕೆ ನಿಂತುಹೋಗಿದೆ.

ಬಹುಶಃ ಕನ್ನಡ ಚಿತ್ರರಂಗದಲ್ಲಿ ಯಾವೊಬ್ಬ ಹಿರಿಯ ನಿರ್ದೇಶಕರ ಚಿತ್ರ ಈ ರೀತಿ ನಿಂತುಹೋಗಿದ್ದೇ ಇಲ್ಲ.

ಈ ಎಲ್ಲಾ ಬೆಳವಣಿಗೆಗಳಿಂದ ನಿರ್ದೇಶಕ ನಾಗಾಭರಣ ಕುಗ್ಗಿಹೋಗಿದ್ದಾರೆ ಎಂದು ನೀವು ಭಾವಿಸಿದರೆ, ನಿಮ್ಮ ಊಹೆ ತಪ್ಪು! ವಿರಾಮದ ವೇಳೆಯಲ್ಲಿ ಹೊಸ ಚಿತ್ರದ ಬಗ್ಗೆ ಕನಸು ಕಾಣುತ್ತಾ ಅದರ ಚಿತ್ರಕಥೆ-ಸಂಭಾಷಣೆಯನ್ನು ಬರೆಯುವುದು ಅವರ ಹವ್ಯಾಸ. ಹೀಗಾಗಿ ಏನಿಲ್ಲವೆಂದರೂ ಕನಿಷ್ಠ ಹತ್ತು ಚಿತ್ರಗಳ ಸಂಪೂರ್ಣ ಚಿತ್ರಕಥೆಗಳ ಭಂಡಾರ ಇವರಲ್ಲಿದೆ. ಅಕ್ಷರಮಟ್ಟಿಗೆ ಇವರು 'ಶ್ರೀಮಂತ' ಎಂದೇ ಹೇಳಬಹುದು.

ಈಗ ಭರಣ ಅವರ ಪುತ್ರ ಪನ್ನಗ ಚಿತ್ರ ನಿರ್ದೇಶನ ಮಾಡಲು ಹೊರಟ್ಟಿದ್ದಾನೆ. ಮಗನ ಆಗಮನದಿಂದ ಭರಣ ಸ್ಫೂರ್ತಿ ಪಡೆದು ಮತ್ತೆ ನಿರ್ದೇಶನದ ಕೆಲಸವನ್ನು ಕೈಗೆತ್ತಿಕೊಳ್ಳುವಂತಾಗಲಿ...

• ಶ್ರೆಸ್ತ

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 13-7-2011 RNI No. KARKAN2



ಅಶೋಕ ಚಕ್ರಾಧಿಪತ್ಯ!


ರಂಗಭೂಮಿಯಲ್ಲಿದ್ದುಕೊಂಡೇ ಚಿತ್ರೋದ್ಯಮದಲ್ಲಿ ಗಟ್ಟಿ ಹೆಜ್ಜೆ ಊರಿರುವವರು ನಮ್ಮಲ್ಲಿ ಕಡಿಮೆ. ಸಾಮಾನ್ಯವಾಗಿ ರಂಗಭೂಮಿಯಿಂದ ಚಿತ್ರರಂಗಕ್ಕೆ ಬಂದವರು ಆನಂತರ ನಾಟಕ ಕ್ಷೇತ್ರದತ್ತ ತಲೆ ಹಾಕಿ ಮಲಗಿದ್ದು ಇಲ್ಲವೇ ಇಲ್ಲ ಎನ್ನಬಹುದು.

ಆದರೆ ಅಶೋಕ್ ಬಾದರದಿನ್ನಿ ಮಾತ್ರ ಆ ಮಾತಿಗೆ ಅಪವಾದ. ಅವರಿಗೆ ಚಿತ್ರರಂಗದಲ್ಲಿ ಸಾಕಷ್ಟು ಅವಕಾಶ ಮತ್ತು ಜನಪ್ರಿಯತೆ ಸಿಕ್ಕಿದ್ದರೂ ಇವತ್ತಿಗೂ ರಂಗಭೂಮಿಯೇ ಅವರ ಪೂರ್ಣಪ್ರಮಾಣದ ಕರ್ಮಭೂಮಿಯಾಗಿದೆ.

ಶಿವರಾಜ್‌ಕುಮಾರ್ ಅವರ 'ಮನಮೆಚ್ಚಿದ ಹುಡುಗಿ' ಚಿತ್ರದಲ್ಲಿ ಬಾದರದಿನ್ನಿ ಅಮೋಘವಾಗಿ ಅಭಿನಯಿಸಿ ಚಿತ್ರೋದ್ಯಮದಲ್ಲಿ ಹಾಸ್ಯನಟರ ಸಾಲಿಗೆ ಸೇರ್ಪಡೆಯಾದರು. ಅದೇ ರೀತಿ ರವಿಚಂದ್ರನ್ ಜೊತೆ 'ಅಂಜದ ಗಂಡು' ಚಿತ್ರದಲ್ಲಿ ಕೊನೆತನಕ ಇದ್ದು ಜನರನ್ನು ನಗಿಸಿದರು. ಇವರಿಬ್ಬರ ಜೊತೆ ಇಂದಿಗೂ ಅಶೋಕ್ ನಿಕಟಸಂಪರ್ಕ ಹೊಂದಿದ್ದಾರೆ.

ಸದ್ಯ ಬಾದರದಿನ್ನಿ ಚಿತ್ರದುರ್ಗದಲ್ಲಿರುವ ಕೆ.ಎಂ. ವೀರೇಶ್ ಅವರ ವಿದ್ಯಾಶಾಲೆಯಲ್ಲಿ ಸಾಂಸ್ಕೃತಿಕ ವಿಭಾಗದ ಅಧ್ಯಾಪಕರಾಗಿದ್ದಾರೆ. ವರ್ಷದ ಹಿಂದೆ ಪ್ಯಾರಾಲಿಸಿಸ್ ಆಗಿದ್ದರಿಂದ ಅವರ ದೇಹ ಕೊಂಚ ಬಾಡಿದೆ. ಆದರೆ ಕ್ರಿಯಾಶೀಲತೆಯಲ್ಲಿ ಯಾವ ಕೊರತೆಯೂ ಉಂಟಾಗಿಲ್ಲ. ಮೊನ್ನೆ ಮೊನ್ನೆ ಅವರ ಸ್ವಂತ ಸೋದರ ಉಮೇಶ್ ಬಾದರದಿನ್ನಿಯವರ ಸಿನಿಮಾದಲ್ಲಿ ಮುಖ್ಯಪಾತ್ರ ಮಾಡಿದ್ದಾರೆ. ಸದ್ಯದಲ್ಲೇ ಅವರು ರನ್ನನ ದಶಾವತಾರ ನಾಟಕವನ್ನು ರಂಗಭೂಮಿಗೆ ಅರ್ಪಿಸಲಿದ್ದಾರೆ.

ಅವರೀಗ ತಮ್ಮ ಆತ್ಮಕತೆಯನ್ನು ಬರೆಯುತ್ತಿದ್ದಾರೆ. ನಲವತ್ತು ವರ್ಷಗಳ ಕಾಲ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಊರೂರು ತಿರುಗಿ ನಾಟಕವಾಡುತ್ತ, ಹಲವೊಮ್ಮೆ ಸಿನಿಮಾಗಳಲ್ಲಿ ನಟಿಸುತ್ತಾ ಅವರು ಕಂಡ ಬದುಕು ನಿಜಕ್ಕೂ ವರ್ಣರಂಜಿತವಾಗಿದೆ...



ಶಿವಣ್ಣನಿಗೆ ಪ್ಯಾರಿಸ್‌ನಲ್ಲಿ ಆಪರೇಷನ್!

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಆಪರೇಷನ್ ಮಾಡಿಸಿಕೊಂಡು ಪ್ಯಾರಿಸ್‌ನ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಶಿವಣ್ಣ ಮದುವೆಯ 25ನೇ ವಾರ್ಷಿಕೋತ್ಸವ ಮತ್ತು ಚಿತ್ರರಂಗಕ್ಕೆ ಬಂದು 25 ವರ್ಷ ಸಂದಿದ್ದಕ್ಕಾಗಿ ಕನ್ನಡ ಚಲನಚಿತ್ರರಂಗದ ಕಾರ್ಮಿಕರ ಒಕ್ಕೂಟದವರು ಶಿವಣ್ಣ ಮತ್ತು ಅವರ ಪತ್ನಿ ಗೀತಾ ಅವರನ್ನು ಸನ್ಮಾನಿಸಿದ್ದರು. ಈ ಸಮಾರಂಭದಲ್ಲಿ ಸ್ವಾಗತ ಕಮಾನೊಂದು ಶಿವಣ್ಣನ ತಲೆ ಮೇಲೇ ಬಿದ್ದಿತ್ತು, ಪುಣ್ಯಕ್ಕೆ ಯಾವ ಅನಾಹುತವೂ ಆಗಲಿಲ್ಲ.

ಯಾತಕ್ಕೂ ಇರಲಿ ಎಂದು ಶಿವಣ್ಣ ತಮ್ಮ ಫ್ಯಾಮಿಲಿ ಡಾಕ್ಟರ್ ಬಳಿ ಚೆಕ್ ಮಾಡಿಸಿದಾಗ ಅವರನ್ನು ಬಹುದಿನದಿಂದ ಬಾಧಿಸುತ್ತಿದ್ದ ಮತ್ತೊಂದು ಸಮಸ್ಯೆ ಬಯಲಿಗೆ ಬಂತು. ಹೆಚ್ಚಿನ ತಪಾಸಣೆ ನಡೆಯಿತು. ಅದರ ಮುಂದುವರಿದ ಭಾಗವಾಗಿ ಈಗ ಶಿವಣ್ಣ ಕುತ್ತಿಗೆ ನರದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಪ್ಯಾರಿಸ್ ಆಸ್ಪತ್ರೆಯಲ್ಲೇ ದಾಖಲಾಗಿದ್ದಾರೆ.

ಹಂಸ ಪುತ್ರಿಯ ಮದುವೆ..



ಹಂಸಲೇಖ ಅವರ ಕ್ರಿಯೇಟಿವಿಟಿ ಬತ್ತಿಹೋಗಿಲ್ಲ ಎಂಬುದಕ್ಕೆ ಇಲ್ಲೊಂದು ಚಿಕ್ಕ ಉದಾಹರಣೆ.


ಹಂಸಲೇಖ ಅವರ ಮಗಳ ಮದುವೆ ಮೊನ್ನೆ ನಡೆಯಿತು. ಆದರೆ ಇದರ ಆರತಕ್ಷತೆ ಈ ತಿಂಗಳ 30ಕ್ಕೆ ನಡೆಯಲಿದೆ. ಉದ್ಯಮದವರಿಗೆ ಮತ್ತು ಬಂಧುಬಾಂಧವರಿಗೆ ಹಂಸಲೇಖ ಕಳುಹಿಸಿರುವ ಆಹ್ವಾನ ಪತ್ರಿಕೆಯ ಜೊತೆಗೆ ಇನ್ನೊಂದು ಪತ್ರಿಕೆಯನ್ನೂ ಕಳುಹಿಸಿದ್ದಾರೆ. ಅದರಲ್ಲಿ ನೂತನ ವಧುವರರಿಗೆ ಹಿತನುಡಿ ಬರೆದು ಅದನ್ನೇ ಆರತಕ್ಷತೆ ದಿನ ಗಿಫ್ಟ್‌ಆಗಿ ನೀಡಬೇಕು ಅಂತ ಮನವಿ ಮಾಡಿಕೊಂಡಿದ್ದಾರೆ.

ಹಾಗೇ ಬರುವ ಮಾತಿನ ಹಾರೈಕೆಯ ನುಡಿಗಳಲ್ಲಿ ಅತ್ಯುತ್ತಮವಾದವುಗಳನ್ನು ಅವರು ಆಯ್ಕೆ ಮಾಡಿ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾರಂತೆ! ಆ ಪುಸ್ತಕವನ್ನು ನವ ವಧುವರರಿಗೆ ಕೊಡುಗೆಯಾಗಿ ನೀಡುತ್ತಾರಂತೆ. "ನೋಡಮ್ಮ, ನಿನ್ನ ಮದುವೆಗೆ ಈ ಗಣ್ಯರು ಮತ್ತು ಮಹನೀಯರು ಈ ರೀತಿ ಹಾರೈಸಿದ್ದಾರೆ. ಅವರ ಆಶಯದಂತೆ ನೀನು ಜೀವನದುದ್ದಕ್ಕೂ ಬಾಳುವೆ ನಡೆಸಬೇಕು. ಅದಕ್ಕಾಗಿ ಈ ಪುಸ್ತಕವನ್ನು ಜೋಪಾನವಾಗಿ ಇಡು" ಎಂದು ಹೇಳುತ್ತಾರಂತೆ! ಎಷ್ಟು ಸುಂದರವಾಗಿದೆಯಲ್ಲ ಈ ಕಲ್ಪನೆ! ಇಂತಹ ಕಲ್ಪನೆ ಹಂಸಲೇಖ ಅಲ್ಲದೇ ಇನ್ಯಾರಿಗೆ ತಾನೇ ಬರಲು ಸಾಧ್ಯ?

ಆದೇನೇ ಇರಲಿ, ನವದಂಪತಿಗಳಾದ ತೇಜಸ್ವಿನಿ-ಕಿಶೋರ್‌ಕುಮಾರ್‌ರವರಿಗೆ ನಮ್ಮ ಶುಭಾಶಯಗಳು...

ಕವಿತಾ ಕ್ರೇಜಿಲೋಕದಲ್ಲಿ ರವಿ







ಅಪ್ಪಟ ಕಮರ್ಷಿಯಲ್ ಸಿನಿಮಾಗಳ ನಾಯಕ ನಟರಾದ ರವಿಚಂದ್ರನ್ ಅವರು 'ಜಾಣ ಜಾಣೆಯರ ನಿರ್ದೇಶಕಿ' ಎಂದೇ ಪರಿಗಣಿಸಲ್ಪಡುವ ಕವಿತಾ ಲಂಕೇಶ್ ಅವರ ನಿರ್ದೇಶನದಲ್ಲಿ ನಟಿಸುತ್ತಿದ್ದಾರೆಂಬ ಸುದ್ದಿಯೇ ಈಗ ಎಲ್ಲೆಡೆ ಅಚ್ಚರಿಯ ಚರ್ಚೆಗೆ ಕಾರಣವಾಗಿದೆ.

ಆದರೆ ಕವಿತಾ ಹೇಳುವ ಪ್ರಕಾರ "ಈ ಪಾತ್ರಕ್ಕೆ ರವಿಚಂದ್ರನ್ ಒಪ್ಪದಿದ್ದರೆ ನಾನು ಈ ಸಿನಿಮಾವನ್ನೇ ಮಾಡುತ್ತಿರಲಿಲ್ಲ, ಏಕೆಂದರೆ ಕನ್ನಡ ಚಿತ್ರರಂಗದಲ್ಲಿ ಈ ಪಾತ್ರಕ್ಕೆ ರವಿಚಂದ್ರನ್ ಅವರನ್ನು ಬಿಟ್ಟರೆ ಸೂಕ್ತ ನಟ ಇನ್ನೊಬ್ಬರಿಲ್ಲ!"

"ಕಲಾತ್ಮಕ ಚಿತ್ರ, ಕಮರ್ಷಿಯಲ್ ಚಿತ್ರ ಎಂಬ ಸಿನಿಮಾಗಳಿಲ್ಲ, ಬದಲಾಗಿ ಒಳ್ಳೆಯ ಚಿತ್ರ ಮತ್ತು ಕೆಟ್ಟ ಚಿತ್ರ ಎಂಬ ಎರಡು ಕ್ಯಾಟಗರಿ ಮಾತ್ರ ಇವೆ" ಎನ್ನುವ ಕವಿತಾ 'ದೇವೀರಿ'ಯಿಂದ ಹಿಡಿದು 'ಪ್ರೀತಿ ಪ್ರೇಮ ಪ್ರಣಯ' ತನಕ ವಿಮರ್ಶಕರ ಮತ್ತು ವೀಕ್ಷಕರ ಮೆಚ್ಚುಗೆಯನ್ನು ಗಳಿಸುವ ಚಿತ್ರಗಳನ್ನು ನಿರ್ದೇಶಿಸಿದ್ದಾರಲ್ಲದೆ ಹಲವಾರು ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ರವಿಚಂದ್ರನ್ ನಟಿಸಲಿರುವ ಕವಿತಾ ನಿರ್ದೇಶಿಸಲಿರುವ ಹೊಸ ಚಿತ್ರದ ಹೆಸರು 'ಕ್ರೇಜಿಲೋಕ'. ಇದು ಔಟ್ ಅಂಡ್ ಔಟ್ ಕಾಮಿಡಿ ಮಾತ್ರವಲ್ಲ ಯೂತ್ ಸಬ್ಜೆಕ್ಟ್ ಹೊಂದಿರುವ ಚಿತ್ರ. ಈ ಸಿನಿಮಾ ಬಹುಪಾಲು ನಡೆಯುವುದು ಕಾಲೇಜ್ ಕ್ಯಾಂಪಸ್‌ನಲ್ಲಿ, ಅಂದಹಾಗೆ 'ಪ್ರೇಮಲೋಕ' ಚಿತ್ರದಲ್ಲಿ ಸ್ಟೂಡೆಂಟ್ ಆಗಿದ್ದ ರವಿಚಂದ್ರನ್ ಈಗ 'ಕ್ರೇಜಿಲೋಕ'ದ ಮೂಲಕ ಮತ್ತೆ ಕಾಲೇಜ್ ಕ್ಯಾಂಪಸ್‌ಅನ್ನು ಪ್ರವೇಶಿಸುತ್ತಿದ್ದಾರೆ. ಆದರೆ ಈ ಚಿತ್ರದಲ್ಲಿ ಅವರದ್ದು ಸ್ಟೂಡೆಂಟ್ ಪಾತ್ರವೋ? ಟೀಚರ್ ಪಾತ್ರವೋ? ಎಂಬುದನ್ನು ಗುಟ್ಟಾಗಿಡಲಾಗಿದೆ.

ಅಷ್ಟೇ ಅಲ್ಲ, ರವಿಚಂದ್ರನ್ ಈ ಚಿತ್ರದಲ್ಲಿ ಮೊದಲ ಬಾರಿಗೆ ಯುವಕನೊಬ್ಬನ ತಂದೆಯ ಪಾತ್ರದಲ್ಲಿ ನಟಿಸಲಿದ್ದಾರೆ. ಅವರ ಹೀರೋಯಿನ್ ಆಗಿ ಡೈಸಿ ಬೋಪಣ್ಣ ಇರುತ್ತಾರೆ. ರವಿ ಅವರ ಮಗನ ಪಾತ್ರದಲ್ಲಿ ಹೊಸ ನಟ ಸೂರ್ಯ ಇದ್ದಾನೆ. ಲಕ್ಕಿ ಗರ್ಲ್ ಹರ್ಷಿಕಾ ಪೂಣಚ್ಚ ಸೂರ್ಯನಿಗೆ ಜೋಡಿಯಾಗಿದ್ದಾಳೆ. ಸಾಮಾನ್ಯವಾಗಿ ಇನ್ಸ್‌ಪೆಕ್ಟರ್ ಅಥವಾ ಕಮಿಷನರ್ ಗೆಟಪ್ಪಿನಲ್ಲೇ ಕಾಣಿಸಿಕೊಳ್ಳುವ ಅವಿನಾಶ್ ಈ ಚಿತ್ರದಲ್ಲಿ ಕಾಮಿಡಿ ರೋಲ್‌ನಲ್ಲಿ ನಟಿಸಲಿದ್ದಾರೆ. ಅದ್ಭುತ ನಟ ಅಚ್ಯುತರಿಗೂ 'ಕ್ರೇಜಿಲೋಕ'ದಲ್ಲೊಂದು ಡಿಫರೆಂಟ್ ಗೆಟಪ್ಪಿದೆ.

ಇನ್ನು ತಂತ್ರಜ್ಞರ ವಿಷಯಕ್ಕೆ ಬರುವುದಾದರೆ ದಕ್ಷಿಣ ಭಾರತದ ಸಿನಿಮಾಗಳು ಮಾತ್ರವಲ್ಲದೆ ಈಗ ಬಾಲಿವುಡ್ಡಿಗೂ ಎಂಟ್ರಿ ನೀಡಿರುವ ಮಣಿಕಾಂತ್ ಕದ್ರಿ 'ಕ್ರೇಜಿಲೋಕ'ಕ್ಕೆ ಮ್ಯೂಸಿಕ್ ಮಾಡಿದ್ದಾರೆ. ಛಾಯಾಗ್ರಾಹಕರಾಗಿ ಮಹೇಂದರ್ ಇದ್ದಾರೆ.

'ಕ್ರೇಜಿಲೋಕ'ದ ಮುಹೂರ್ತ ಸಂದರ್ಭದಲ್ಲಿ ರವಿಚಂದ್ರನ್ ಅವರು ತಮ್ಮ ಎಂದಿನ ತಮಾಷೆಯ ಶೈಲಿಯಲ್ಲಿ "ಇದುವರೆಗೆ ನಾನು ಹೀರೋಯಿನ್‌ಗಳನ್ನು ಡೈರೆಕ್ಟ್ ಮಾಡಿದ್ದೆ. ಆದರೆ ಇದೇ ಪ್ರಥಮ ಬಾರಿಗೆ ಹೀರೋಯಿನೊಬ್ಬಳು ನನ್ನನ್ನು ನಿರ್ದೇಶಿಸುತ್ತಿದೆ" ಎಂದರು.

ಲವಲವಿಕೆಯ, ಸುಂದರವಾದ ಸಿನಿಮಾವೊಂದರ ಕನಸು ಹೊತ್ತಿರುವ ಕನ್ನಡ ಚಿತ್ರರಂಗದ ಪ್ರತಿಭಾನ್ವಿತ ನಿರ್ದೇಶಕಿ ಕವಿತಾ ಲಂಕೇಶ್‌ಗೆ ಇದೇ ಚಿತ್ರರಂಗದ ಕನಸುಗಾರನ ಸಾಥ್ ಸಿಕ್ಕಿದೆ.

'ಕ್ರೇಜಿಲೋಕ' ಸೃಷ್ಟಿಸಲು ಇನ್ನೇನು ಬೇಕು, ಅಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Ind...